ಕೊನೆಯದಾಗಿ ನವೀಕರಿಸಲಾದ ದಿನಾಂಕ : ಜುಲೈ 1, 2021

ಕ್ರೆಡಿಟ್ ಕಾರ್ಡ್‌ಸೌಲಭ್ಯಗಳನ್ನು ನಿಯಂತ್ರಿಸುವ ನಿಯಮಗಳು ಹಾಗೂ ನಿಬಂಧನೆಗಳು

ಈ ನಿಯಮಗಳು ಹಾಗೂ ನಿಬಂಧನೆಗಳು ಐಸಿಐಸಿಐ ಬ್ಯಾಂಕ್ ಲಿಮಿಟೆಡ್‌ನ ಕ್ರೆಡಿಟ್ ಕಾರ್ಡ್ ಸೌಲಭ್ಯಗಳ ಒದಗಣೆಗೆ ಅನ್ವಯಿಸುತ್ತದೆ ಹಾಗೂ ಒದಗಣೆಯನ್ನು ನಿಯಂತ್ರಿಸುತ್ತದೆ.

1. ವ್ಯಾಖ್ಯಾನಗಳು ಹಾಗೂ ಅರ್ಥವಿವಿರಣೆ

''ಅಫಿಲಿಯೇಟ್ (ಅಂಗಸಂಸ್ಥೆ) '' ಎಂದರೆ ಹಾಗೂ ಒಳಗೊಂಡಿರುವಿಕೆಗಳು : .

- ಐಸಿಐಸಿಐ ಬ್ಯಾಂಕ್‌ನ ಹೋಲ್ಡಿಂಗ್ ಅಥವಾ ಸಬ್ಸಿಡರಿ ಕಂಪನಿ (ಅಧೀನ ಸಂಸ್ಥೆ)ಯಾದ ಯಾವುದೇ ಕಂಪನಿ, ಅಥವಾ ಐಸಿಐಸಿಐ ಬ್ಯಾಂಕ್‌ನ ನಿಯಂತ್ರಣದಲ್ಲಿರುವ ಅಥವಾ ಸಾಮಾನ್ಯ ನಿಯಂತ್ರಣದಲ್ಲಿರುವ ಒಬ್ಬ ವ್ಯಕ್ತಿ , ಅಥವಾ
- 26% ಅಥವಾ ಹೆಚ್ಚಿನ ಸೆಕ್ಯೂರಿಟಿಗಳ ವೋಟಿಂಗ್‌ನಲ್ಲಿ , ಐಸಿಐಸಿಐ ಬ್ಯಾಂಕ್‌ನ ನೇರ ಅಥವಾ ಅನುಕೂಲಕರ ಹಿತಾಸಕ್ತಿ ಅಥವಾ ನಿಯಂತ್ರಣವನ್ನು ಹೊಂದಿರುವ , ಯಾವುದೇ ವ್ಯಕ್ತಿ .

ಅಫಿಲಿಯೇಟ್‌ನ (ಅಂಗಸಂಸ್ಥೆಯ) ವ್ಯಾಖ್ಯಾನದ ಉದ್ದೇಶಕ್ಕಾಗಿ , ''ಕಂಟ್ರೋಲ್ '' ಅನ್ನು ಯಾವುದೇ ವ್ಯಕ್ತಿಗೆ ಸಂಬಂಧಿಸಿದಂತೆ ಬಳಸಿದಾಗ, ಎಂದರೆ ಸೆಕ್ಯೂರಿಟಿಗಳು ಹೊಂದಿರುವ ಮತದ ಮಾಲಿಕತ್ವದ ಮೂಲಕ , ಒಪ್ಪಂದದ ಮೂಲಕ ಅಥವಾ ಅನ್ಯಥಾ ಯಾವ ರೀತಿಯಲ್ಲಾದರೂ , ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಅಂತಹ ವ್ಯಕ್ತಿಯ ಆಡಳಿತ ನಿರ್ವಹಣೆ ಹಾಗೂ ನೀತಿಗಳನ್ನು ನಿರ್ದೇಶಿಸುವ ಅಧಿಕಾರ ಹಾಗೂ '' ಪರ್ಸನ್ ''ಎಂದರೆ ಯಾವುದೇ ವ್ಯಕ್ತಿ, ಕಂಪನಿ, ಸಂಸ್ಥೆ , ನಿಘಮ , ಪಾಲುದಾರಿಕೆ, ಟ್ರಸ್ಟ್ ಅಥವಾ ಯಾವುದೇ ಇತರ ಘಟಕ ಅಥವಾ ಸಂಸ್ಥೆ ಅಥವಾ ಇತರ ಅರ್ಹ ಅಥವಾ ಕಾನೂನು ಬದ್ಧ ವ್ಯಕ್ತಿ . '' ಅಪ್ಲಿಕೆಂಟ್;; ಎಂದರೆ ಐಸಿಐಸಿಐ ಬ್ಯಾಂಕ್‌ಗೆ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದ ವಕ್ತಿ (ವ್ಯಕ್ತಿಗಳು) .

''ಆಥರೈಜ್ಡ್ ಡೀಲರ್ '' ಎಂದರೆ ಕಾಲ ಕಾಲಕ್ಕೆ ತಿದ್ದುಪಡಿಮಾಡಿದಂತೆ

ಫಾರೆನ್ ಎಕ್ಸ್‌ಚೇಂಜ್ ಮ್ಯಾನೇಜ್‌ಮೆಂಟ್ ಆ್ಯಕ್ಟ್, 1999 ರಲ್ಲಿ ವ್ಯಾಖ್ಯಾನಿಸಿದಂತೆ ಅಧಿಕೃತ ವಿತರಕರು .

‘‘ಬಿಸಿನೆಸ್ ಡೇ’’ ಎಂದರೆ ಅಪ್ಲಿಕೇಶನ್‌ನ ಫಾರ್ಮ್‌ನಲ್ಲಿ ನಿರ್ದಿಷ್ಟಪಡಿಸಿದ ಐಸಿಐಸಿಐ ಬ್ಯಾಂಕ್‌ನ ಸಂಬಂಧಿತ ಕಛೇರಿ ಅಥವಾ ಸದಸ್ಯರಿಗೆ ಕಾರ್ಡ್ ಅನ್ನು ಒದಗಿಸಿದ ಅಥವಾ ಐಸಿಐಸಿಐ ಬ್ಯಾಂಕ್ ನಿಂದ ಸೂಚಿಸಬಹುದಾದಂತಹ ಇತರ ಕಛೇರಿಯು , ಸಾಮಾನ್ಯ ವ್ಯವಹಾರ ವಹಿವಾಟುಗಳಿಗಾಗಿ ತೆರೆದಿರುವುದಾಗಿರುತ್ತದೆ. .

‘‘ಕಾರ್ಡ್’’ ಅಥವಾ ‘‘ಕ್ರೆಡಿಟ್ ಕಾರ್ಡ್’’ ಅಥವಾ ‘‘ಇಎಮ್ಐ ಕಾರ್ಡ್’’ ಅಥವಾ ‘‘ಆನ್‌ಲೈನ್ ಕ್ರೆಡಿಟ್ ಕಾರ್ಡ್’’ ಅಥವಾ ಬಿಸಿನೆಸ್‌ಕಾರ್ಡ್’’ ಅಥವಾ ‘ವಿಸಾ mCheck ಕ್ರೆಡಿಟ್ ಕಾರ್ಡ್ ’ಎಂದರೆ ಐಸಿಐಸಿಐ ಬ್ಯಾಂಕ್ ವಿಸಾ/ಅಮೆಕ್ಸ್/ಮಾಸ್ಟರ್‌ಕಾರ್ಡ್ ಕ್ರೆಡಿಟ್ ಕಾರ್ಡ್ ಅಥವಾ ಅರ್ಜಿದಾರರ ಕೋರಿಕೆಯ ಮೇರೆಗೆ ಐಸಿಐಸಿಐ ಬ್ಯಾಂಕ್ ನೀಡಿದ ಯಾವುದೇ ಇತರ ಕ್ರೆಡಿಟ್ ಕಾರ್ಡ್ .

‘‘ಎಪಿಐಎನ್ ’’ ಎಂದರೆ ಐಸಿಐಸಿ ಬ್ಯಾಂಕ್‌ನಿಂದ ಕಾರ್ಡ್ ಸದಸ್ಯರಿಗೆ ನಿಗದಿಪಡಿಸಿದ ಅಥವಾ ಕಾರ್ಡ್‌ಗೆ ಸಂಬಂಧಿಸಿದಂತೆ, ಕಾಲ ಕಾಲಕ್ಕೆ ಕಾರ್ಡ್ ಸದಸಸ್ಯರು /ಐಸಿಐಸಿಐ ಬ್ಯಾಂಕ್ ನಿಂದ ಆಯ್ಕೆ ಮಾಡಿದ ಪರ್ಸನಲ್ ಐಡೆಂಟಿಫಿಕೇಶನ್ ನಂಬರ್ .( ವಿಸಾ mCheck ಕಾರ್ಡ್ ಮೇಲೆ ಎನ್ಎ )

‘‘ಕಾರ್ಡ್ ಅಕೌಂಟ್’’ ಎಂದರೆ ಕಾರ್ಡ್ ಸದಸ್ಯರ ಹೆಸರಿನಲ್ಲಿ ತೆರೆಯಲಾದ ಖಾತೆಯಾಗಿರುತ್ತದೆ ಹಾಗೂ ಇಲ್ಲಿ ಒಳಗೊಂಡಿರುವ ನಿಯಮಗಳು ಹಾಗೂ ನಿಬಂಧನೆಗಳ ಪ್ರಕಾರ ಕ್ರೆಡಿಟ್ ಕಾರ್ಡ್‌ನ ಬಳಕೆಯ ಉದ್ದೇಶಕ್ಕಾಗಿ ಐಸಿಐಸಿಐ ಬ್ಯಾಂಕ್ ನಿರ್ವಹಿಸುತ್ತದೆ.

‘‘ಕ್ಯಾಶ್ -ಲಿಮಿಟ್’’ ಎಂದರೆ ಐಸಿಐಸಿಐ ಬ್ಯಾಂಕ್ ವ್ಯಾಖ್ಯಾನಿಸಿದಂತೆ ಅಥವಾ ನಿಗದಿ ಮಾಡಿದಂತೆ ಕಾರ್ಡ್ ಸದಸ್ಯರು ಅವರ ಕಾರ್ಡ್ ಖಾತೆಯಲ್ಲಿ ಬಳಸಬಹುದಾ ಗರಿಷ್ಠ ಮೊತ್ತದ ನಗದು ಅಥವಾ ಅದಕ್ಕೆ ಸಮನಾದ ನಗದು . ಕ್ಯಾಶ -ಲಿಮಿಟ್ ಕಾರ್ಡ್ ಸದಸ್ಯರ ಕ್ರೆಡಿಟ್ ಲಿಮಿಟ್ /ಪರ್ಚೇಸ್ ಲಿಮಿಟ್‌ನ ಉಪವಿಭಾಗವನ್ನು ರೂಪಿಸುತ್ತದೆ. ( ವಿಸಾ mCheck ಕಾರ್ಡ್ ಮೇಲೆ ಎನ್ಎ )

‘‘ಚಾರ್ಜ್‌ಸ್ ’’ ಅಥವಾ ‘‘ ಶುಲ್ಕಗಳು’’ ಎಂದರೆ ಇದರ ಬಗ್ಗೆ ಕ್ಲಾಸ್ VI ರಲ್ಲಿ ಪ್ರದರ್ಶಿಸಿರುವಂತಹ ಅಥವಾ ಈ ನಿಯಮಗಳು ಹಾಗೂ ನಿಬಂಧನೆಗಳಲ್ಲಿ ಎಲ್ಲಿಯಾದರೂ ನಮೂದಿಸಿರುವಂತಹ ಶುಲ್ಕಗಳು.ಇಲ್ಲಿ ನಮೂದಿಸಲಾಗಿರುವ ಶುಲ್ಕಗಳ ಎಲ್ಲಾ ವಿವರಗಳನ್ನು ಟ್ಯಾರಿಫ್ ಎನೆಕ್ಚರ್‌ನಲ್ಲಿ ಒದಗಿಸಿದಂತೆ ನಿರ್ದಿಷ್ಟವಾಗಿ ಕಾರ್ಡ್ ಸದಸ್ಯರಿಗೆ ತಿಳಿಸದ ಹೊರತು ಕಾಲ ಕಾಲಕ್ಕೆ ತಿದ್ದುಪಡಿ ಮಾಡಲಾಗುತ್ತದೆ.

‘‘ಕಂಪನಿ’’ ಎಂದರೆ ಕಾಲ ಕಾಲಕ್ಕೆ ತಿದ್ದುಪಡಿ ಮಾಡಿದಂತೆ, ಕಂಪನೀಸ್ ಆ್ಯಕ್ಟ್, 1956ರಲ್ಲಿ ವ್ಯಾಖ್ಯಾನಿಸಿದಂತೆ ಒಂದು ಕಂಪನಿಯಾಗಿರುತ್ತದೆ.

‘‘ಕ್ರೆಡಿಟ್ -ಲಿಮಿಟ್/ಪರ್ಚೇಸ್ ಲಿಮಿಟ್ ’’ ಎಂದರೆ ಕಾರ್ಡ್ ಸದಸ್ಯರು ಅವರ ಕ್ರೆಡಿಟ್ ಕಾರ್ಡ್‌ನಲ್ಲಿ ಖರ್ಚುಮಾಡಲು ಅಧಿಕೃತ ಅಧಿಕಾರವನ್ನು ಹೊಂದಿರುವ ಮಿತಿಯಾಗಿರುತ್ತದೆ.

‘‘ಐಸಿಐಸಿಐ ಲಿಮಿಟ್ ’’ ಎಂದರೆ ಐಸಿಐಸಿಐ ಬ್ಯಾಂಕ್ ಲಿಮಿಟ್, ಕ್ರೆಡಿಟ್ ಕಾರ್ಡ್‌ನ ಮಾಲೀಕರು, ಅದರ ಉತ್ತರಾಧಿಕಾರಿಗಳು ಹಾಗೂ ಅನುಮತಿಸಲಾದ ನಿಯೋಜನೆಗಳು .

‘‘ ಇನ್‌ಫಿನಿಟಿ’’ಐಸಿಐಸಿಐ ಬ್ಯಾಂಕ್‌ನ ಇಂಟರ್‌ನೆಟ್ ಬ್ಯಾಂಕಿಂಗ್ ಸರ್ವಿಸ್/ ಅದರದೇ ಆದ ವೆಬ್‌ಸೈಟ್, ಸಂಸ್ಥೆಯ ವ್ಯಾಪಾರದ ಹೆಸರನ್ನು ಉಲ್ಲೇಖಿಸುತ್ತದೆ ಹಾಗೂ www.icicibank.com. ಯುಆರ್‌ಎಲ್‌ನಲ್ಲಿ ಐಸಿಐಸಿಐ ಬ್ಯಾಂಕ್ ನಿರ್ವಹಿಸುತ್ತದೆ.( ವಿಸಾ mChek ಕಾರ್ಡ್ ಮೇಲೆ ಎನ್ ಎ/ಅನ್ವಯವಾಗುವುದಿಲ್ಲ)

‘‘ಇನ್‌ಶ್ಯೂರೆನ್ಸ್ ಕಂಪನಿ’’ ಎಂದರೆ ಐಸಿಐಸಿಐ ಲಾಂಬರ್ಡ್ ಜನರಲ್ ಇನ್‌ಶ್ಯೂರನ್ಸ್ ಕಂಪನಿ ಲಿಮಿಟೆಡ್ ಅಥವಾ ಕಾಲಕಾಲಕ್ಕೆ ಐಸಿಐಸಿಐ ಬ್ಯಾಂಕ್ ನಿರ್ಧರಿಸುವ ಯಾವುದೇ ಇತರ ಇನ್‌ಶ್ಯೂರನ್ಸ್ ಕಂಪನಿ.

‘‘ಮೇಂಬರ್’’ ಅಥವಾ ‘‘ಕಾರ್ಡ್‌ಹೋಲ್ಡರ್’’ ಅಥವಾ ‘‘ಕಾರ್ಡ್ ಮೇಂಬರ್’’ ಎಂದರೆ ನೀಡಲಾಗಿರುವ ಅವರ ಹೆಸರಿರುವ ಕಾರ್ಡ್ ಹಾಗೂ ಅಂತಹ ಕಾರ್ಡ್ ಅನ್ನು ಹೊಂದಿರುವ ಅರ್ಜಿದಾರ .

‘‘ಮರ್ಚಂಟ್ ಇಸ್ಟಾಬ್ಲಿಶ್‌ಮೆಂಟ್ ’’ ಎಂದರೆ ಇತರವುಗಳೊಂದಿಗೆ ಸ್ಟೋರ್‌ಗಳು, ಅಂಗಡಿಗಳು,ರೆಸ್ಟಾರೆಂಟ್‌ಗಳು, ಹೋಟೆಲ್‌ಗಳು,ಏರ್‌ಲೈನ್‌ಗಳು , ಎಟಿಎಮ್‌ಗಳು ಸೇರಿದಂತೆ ನಗದು ಮುಂಗಡ ಪಾಯಿಂಟ್‌ಗಳು ಹಾಗೂ ಮೇಲ್ ಆರ್ಡರ್ ಜಾಹೀರಾತುದಾರರನ್ನು (ರಿಟೇಲರ್ ಆಗಿರಲಿ, ವಿತರಕರಾಗಿರಲಿ ಅಥವಾ ತಯಾರಕರಾಗಿರಲಿ) ಒಳಗೊಂಡ ಎಲ್ಲ ಕಡೆ ಇರುವ ಕಾರ್ಡ್ ಅನ್ನು ಸ್ವೀಕರಿಸುವ ವ್ಯಾಪಾರಿ ಸಂಸ್ಥೆ

‘‘ಮರ್ಚಂಟ್’’ ಎಂದರೆ ವ್ಯಾಪಾರಿ ಸಂಸ್ಥೆಯನ್ನು ಹೊಂದಿರುವ ಅಥವಾ ನಿರ್ವಹಿಸುವ ಅಥವಾ ನಡೆಸುವ ಯಾವುದೇ ವ್ಯಕ್ತಿ , ಅದರ ಉತ್ತರಾಧಿಕಾರಿಗಳು ಹಾಗೂ ಅನುಮತಿಸಲಾದ ನಿಯೋಜನೆಗಳು.

''ಮಿನಿಮಮ್ ಅಮೌಂಟ್ ಡ್ಯೂ''ಅಥವಾ''ಎಮ್ಎಡಿ '' ಎಂದರೆ ಸ್ಟೇಟ್‌ಮೆಂಟ್‌ನಲ್ಲಿ ಅದರಂತೆ ಹೇಳಲಾದಂತಹ ಮೊತ್ತ.

''ಟೋಟಲ್ ಅಮೌಂಟ್ ಡ್ಯೂ'' ಅಥವಾ '' ಟಿಎಡಿ'' ಎಂದರೆ ಸ್ಟೇಟ್‌ಮೆಂಟ್‌ನಲ್ಲಿ ಅದರಂತೆ ಹೇಳಲಾದಂತಹ ಮೊತ್ತ.

''ಪೇಮೆಂಟ್ ಡ್ಯೂ ಡೇಟ್ '' ಎಂದರೆ ಕಾರ್ಡ್ ಸದಸ್ಯರಿಂದ ಕಾರ್ಡ್‌ನ ಬಳಕೆಯಿಂದ ಉಂಟಾದ ಶುಲ್ಕಗಳಿಗೆ ಸಂಬಂಧಿಸಿದಂತೆ ಸ್ಟೇಟ್‌ಮೆಂಟ್ ಮೂಲಕ ತಿಳಿಸಿದಂತೆ ಬಾಕಿ ಇರುವ ಮೊತ್ತವನ್ನು ಪಾವತಿಸಬೇಕಾದ ,ಪ್ರತಿ ತಿಂಗಳದ ದಿನಾಂಕ.

'' ಪ್ರೈಮರಿ ಕಾರ್ಡ್ ಮೇಂಬರ್ '' ಎಂದರೆ ಯಾರ ಹೆಸರಿನಲ್ಲಿ ಕಾರ್ಡ್ ಅಕೌಂಟ್ ಅನ್ನು ತೆರೆಯಲಾಗಿದೆಯೊ ಹಾಗೂ ಯಾರಿಗೆ ಕಾರ್ಡ್ ಅನ್ನು ನೀಡಲಾಗಿದೆಯೊ ಆ ವ್ಯಕ್ತಿಯಾಗಿರುತ್ತಾನೆ.

''ಆರ್‌ಬಿಐ'' ಎಂದರೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ.

''ಸ್ಟೇಟ್‌ಮೆಂಟ್ '' ಎಂದರೆ ಐಸಿಐಸಿಐ ಬ್ಯಾಂಕ್‌ನ ಕಾರ್ಡ್ ಅಕೌಂಟ್‌ಗೆ ಸಂಬಂಧಿಸಿದಂತೆ ಪ್ರೈಮರಿ ಕಾರ್ಡ್ -ಮೇಂಬರ್ ಹಾಗೂ ಸಪ್ಲಿಮೆಂಟರಿ ಕಾರ್ಡ್ ಮೇಂಬರ್‌ನ ಆ ದಿನಾಂಕದಂದಿನ ಹಣಕಾಸಿನ ಬಾಧ್ಯತೆಗಳನ್ನು ನಿಗದಿಪಡಿಸುವ ಕಾರ್ಡ್ ಮೇಂಬರ್‌ಗೆ ಐಸಿಐಸಿಐಬ್ಯಾಂಕ್ ಕಳುಹಿಸಿದ ಮಾಸಿಕ ಖಾತೆಯ ಸ್ಟೇಟ್‌ಮೆಂಟ್ /ಗಳು .

''ಸಪ್ಲಿಮೆಂಟರಿ ಕಾರ್ಡ್ ಮೇಂಬರ್ '' ಎಂದರೆ ಪ್ರೈಮರಿ ಕಾರ್ಡ್ -ಮೇಂಬರ್‌ರೊಂದಿಗಿನ ಸಂಬಂಧದ ಮೂಲಕ ಕಾರ್ಡ್ ಮೇಂಬರ್ ಆಗುವ ಪ್ರೈಮರಿ ಕಾರ್ಡ್ ಮೇಂಬರ್‌ನ ಕುಟುಂಬದ ಸದಸ್ಯರು (ಸಪ್ಲಿಮೆಂಟರಿ ಕಾರ್ಡ್ mChek ಮೇಲೆ ಎನ್ಎ)

''ಟ್ಯಾರಿಫ್ ಅನೆಕ್ಚರ್ '' ಎಂದರೆ ಕಾರ್ಡ್ ಮೇಲೆ ನೀಡಲಾಗುವ ಸೇವೆಗಳಿಗಾಗಿ ಅನ್ವಯವಾಗುವ ಶುಲ್ಕಗಳನ್ನು ವಿವರಿಸುವ ಅನುಬಂಧ. ಈ ಶುಲ್ಕಗಳು ಐಸಿಐಸಿಐ ಬ್ಯಾಂಕ್‌ನ ಸ್ವವಿವೇಚನೆಯಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೀಗಿದ್ದಾಗ್ಯೂ , ಶುಲ್ಕಗಳಲ್ಲಿನ ಅಂತಹ ಬದಲಾವಣೆಗಳನ್ನು ಕಾರ್ಡ್ ಸದಸ್ಯರಿಗೆ 30 ದಿನಗಳ ಮುಂಚಿತ ಸೂಚನೆಗಳನ್ನು ನೀಡುವ ಮೂಲಕ ನಿರೀಕ್ಷಿತ ಪರಿಣಾಮದೊಂದಿಗೆ ಮಾತ್ರ ಮಾಡಬಹುದು.

''ಟ್ರಾನ್ಸಾಕ್ಷನ್ ಇನ್‌ಸ್ಟ್ರಕ್ಷನ್'' ಎಂದರೆ ಕಾರ್ಡ್ ಸದಸ್ಯರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಐಸಿಐಸಿಐ ಬ್ಯಾಂಕ್ ಹಾಗೂ /ಅಥವಾ ಐಸಿಐಸಿಐ ಬ್ಯಾಂಕ್ ಕಸ್ಟಮರ್ ಕೇರ್ ಸೆಂಟರ್‌ಗೆ ಹಾಗೂ/ಅಥವಾ ಇನ್‌ಫಿನಿಟಿ ಮೂಲಕ , ವಹಿವಾಟಿನ ಕಾರ್ಯದ ಬಗ್ಗೆ ನೀಡುವ ಯಾವುದೇ ಸೂಚನೆ . ಟ್ರಾನ್ಸಾಕ್ಷನ್ ಇನ್‌ಸ್ಟ್ರಕ್ಷನ್ ಚಾರ್ಜ್ ಸ್ಲಿಪ್, ನಗದು ಮುಂಗಡದ ಸ್ಲಿಪ್ ಅಥವಾ ಮೇಲ್ ಆರ್ಡರ್ ಕೂಪನ್‌ಗಳನ್ನು ಒಳಗೊಂಡಿರುತ್ತದೆ,ಆದರೆ ಇದಕ್ಕೆ ಸೀಮಿತವಾಗಿರುವುದಿಲ್ಲ.

ಈ ''ನಿಯಮಗಳು ಹಾಗೂ ನಿಬಂಧನೆಗಳು'' ಎಂದರೆ ಇಲ್ಲಿ ಪ್ರದರ್ಶಿಸಿದ ಹಾಗೂ /ಅಥವಾ ತಿದ್ದುಪಡಿಮಾಡಿದಂತೆ, ಕಾಲ ಕಾಲಕ್ಕೆ ಐಸಿಐಸಿಐ ಬ್ಯಾಂಕ್ ನಿಗದಿಪಡಿಸಿರಬಹುದಾದಂತೆ ನಿಯಮಗಳು ಹಾಗೂ ನಿಬಂಧನೆಗಳು. ಈ ನಿಯಮಗಳು ಹಾಗೂ ನಿಬಂಧನೆಗಳಲ್ಲಿ,ಪ್ರತಿಕೂಲ ಉದ್ದೇಶವು ಕಾಣದ ಹೊರತು :-

ಎ) ''ಅಮೆಂಡ್‌ಮೆಂಟ್ /ತಿದ್ದುಪಡಿ''ಯ ಉಲ್ಲೇಖವು ಪೂರಕ , ಮಾರ್ಪಾಡು ,ನವೀಕರಣ ,ಬದಲಿಸುವಿಕೆ ಅಥವಾ ಪುನರ್‌ನಿರ್ಮಾಣವನ್ನು ಒಳಗೊಂಡಿದೆ ಹಾಗೂ ''ಅಮೆಂಡೆಡ್ '' ಅನ್ನು ಅದರ ಪ್ರಕಾರ ಅರ್ಥೈಸಿಕೊಳ್ಳಬೇಕು ; ಆಥರೈಜೇಶನ್ '' ಅಥವಾ '' ಅಪ್ರುವಲ್ '' ಅಧಿಕಾರ ನೀಡಿಕೆ, ಒಪ್ಪಿಗೆ, ಸ್ಪಷ್ಟೀಕರಣ,ಅನುಮೋದನೆ ,ಅನುಮತಿ, ನಿರ್ಧಾರ, ಪರವಾನಗಿ, ರಿಯಾಯಿತಿ, ಫೈಲಿಂಗ್ ಹಾಗೂ ನೋಂದಣಿಯನ್ನು ಒಳಗೊಂಡಿದೆ; ''ಲಾ'' ಅಪ್ಲಿಕೇಶನ್ ಫಾರ್ಮ್‌ಗೆ ಸಹಿಮಾಡಿದ/ಸಲ್ಲಿಸಿದ ದಿನಾಂಕದಂತೆ ಅಥವಾ ಅದರನಂತರ ಹಾಗೂ ಪ್ರತಿಯೊಂದನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ ಯಾವುದೇ ನ್ಯಾಯಾಂಗ ಪ್ರಾಧಿಕಾರದ ಯಾವುದೇ ನಿರ್ಧಾರದದಿಂದ , ಅಥವಾ ಇಲ್ಲಿ ತಿಳಿಸಿದ ಯಾವುದಾದರೂ ವಾಖ್ಯಾನದಿಂದ, ಯಾವುದೇ ಸಂವಿಧಾನ, ಶಾಸನ,ಕಾನೂನು,ನಿಯಮ, ನಿಯಂತ್ರಣ, ಸುಗ್ರಿವಾಜ್ಞೆ, ತೀರ್ಪು,ಆದೇಶ, ಕಟ್ಟಳೆ, ಆಧಿಕಾರ ಪತ್ರ , ಅಥವಾ ಯಾವುದೇ ಪ್ರಕಟಿತ, ನಿರ್ದೇಶನ , ಮಾರ್ಗಸೂಚಿ, ಅಗತ್ಯತೆ ಅಥವಾ ಕಾನೂನಿನ ಬಲವನ್ನು ಹೊಂದಿರುವ ಸರ್ಕಾರಿ ನಿರ್ಬಂಧವನ್ನು ಒಳಗೊಂಡಿರುತ್ತದೆ.

ಬಿ) ಒಂದಕ್ಕೆ ಅನ್ವಯವಾಗುವುದು ಎಲ್ಲವಗಳಿಗೂ ಅನ್ವಯವಾಗುತ್ತದೆ (ಹಾಗೂ ಪ್ರತಿಕ್ರಮದಲ್ಲಿ) ;

ಸಿ) ಈ ನಿಯಮಗಳು ಹಾಗೂ ನಿಬಂಧನೆಗಳಲ್ಲಿ ಶೀರ್ಷಿಕೆಗಳನ್ನು ಉಲ್ಲೇಖದ ಅನುಕೂಲಕ್ಕಾಗಿ ಮಾತ್ರ ಸೇರಿಸಲಾಗಿದೆ ಹಾಗೂ ನಿಯಮಗಳು ಹಾಗೂ ನಿಬಂಧನೆಗಳನ್ನು ವ್ಯಾಖ್ಯಾನಿಸುವಲ್ಲಿ ಹಾಗೂ ಅರ್ಥೈಸುವಲ್ಲಿ ನಿರ್ಲಕ್ಷಿಸಲಾಗುತ್ತದೆ ;

ಡಿ) ‘‘ಇನಕ್ಲ್ಯೂಡ್’’ ಅಥವಾ ‘‘ ಇನ್‌ಕ್ಲ್ಯೂಡಿಂಗ್’’ ಪದಗಳ ಉಲ್ಲೇಖವನ್ನು ಮಿತಿಯಿಲ್ಲದೇ ಅರ್ಥೈಸಿಕೊಳ್ಳಬೇಕು ;

ಇ) ಲಿಂಗದ ಉಲ್ಲೇಕವು ಸ್ತ್ರೀ ಲಿಂಗ, ಪುಲ್ಲಿಂಗ ಹಾಗೂ ನಪುಂಸಕ ಲಿಂಗಗಳ ಉಲ್ಲೇಖಗಳನ್ನು ಒಳಗೊಂಡಿರುತ್ತದೆ ;

ಎಫ್) ಯಾವುದೇ ವಿಷಯಕ್ಕಾಗಿ ಐಸಿಐಸಿಐ ಬ್ಯಾಂಕ್‌ನಿಂದ ಅಗತ್ಯವಾದ ಎಲ್ಲಾ ಅನುಮೋದನೆಗಳು, ಅನುಮತಿಗಳು, ಒಪ್ಪಿಗೆಗಳು ಅಥವಾ ಸ್ವೀಕೃತಿಗೆ ಐಸಿಐಸಿಐ ಬ್ಯಾಂಕ್‌ನ ಪೂರ್ವ ,ಲಿಖಿತ ಅನುಮೋದನೆ, ಅನುಮತಿ, ಒಪ್ಪಿಗೆ ಅಥವಾ ಸ್ವೀಕೃತಿಯ ಅಗತ್ಯವಿರುತ್ತದೆ;

ಜಿ) ವಿಸಾ /ಮಾಸ್ಟರ್‌ಕಾರ್ಡ್ ನಿಯಮಗಳ ಉಲ್ಲೇಖಗಳು ಅದರ ನೆಟ್‌ವರ್ಕ್‌ನ ಎಲ್ಲಾ ಸದಸ್ಯ ಬ್ಯಾಂಕ್‌ಗಳಿಗೆ ವಿಸಾ /ಮಾಸ್ಟರ್‌ಕಾರ್ಡ್‌ನಿಂದ ಹೊರಡಿಸಿದ ಮಾರ್ಗ ಸೂಚಿಗಳು ಅನ್ವಯಿಸುತ್ತವೆ

ಎಚ್) ಯಾವುದೇ ವಿಷಯದ ವಸ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಘಟನೆ, ಸಂಗತಿ, ಸಂದರ್ಭ, ಬದಲಾವಣೆ, ಸತ್ಯಸಂಗತಿ, ಮಾಹಿತಿ, ಕಾಗದಪತ್ರ , ಅಧಿಕಾರ , ಕ್ರಮಕ್ಕೈಗೊಳ್ಳುವಿಕೆ, ಕಾಯಿದೆ, ಲೋಪ, ಹಕ್ಕುಕೋರಿಕೆಗಳು , ಉಲ್ಲಂಘನೆ , ಡಿಫಾಲ್ಟ್ (ಬೇಪಾವತಿ) ಅನ್ನು ಒಳಗೊಂಡು ಅಥವಾ ಅನ್ಯಥಾ ಐಸಿಐಸಿಐ ಬ್ಯಾಂಕ್ ಹಾಗೂ ಕಾರ್ಡ್ ಮೇಂಬರ್ ನಡುವೆ ಯಾವುದೇ ಭಿನ್ನಾಭಿಪ್ರಾಯ ಅಥವಾ ವಿವಾದದ ಸಂದರ್ಭದಲ್ಲಿ , ಮೇಲೆತಿಳಿಸಿದ ಯಾವುದೇ ವಿಷಯದ ಬಗ್ಗೆ ಐಸಿಐಸಿಐ ಬ್ಯಾಂಕಿನ ತೀರ್ಮಾನವು ಅಂತಿಮವಾಗಿರುತ್ತದೆ ಹಾಗೂ ಕಾರ್ಡ್ ಮೇಂಬರ್ ಮೇಲೆ ಬದ್ಧವಾಗಿರುತ್ತದೆ.

ಐ) ಕಾರ್ಡ್ ಅಥವಾ ಇತರೆಡೆಯಲ್ಲಿ‘‘ ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಆ್ಯಗ್ರಿಮೆಂಟ್’’ ಪದಗಳ ಬಳಕೆ, ಎಂದರೆ ಈ ನಿಯಮಗಳು ಹಾಗೂ ನಿಬಂಧನೆಗಳು .

## II. ಕಾರ್ಡ್ ಸೇವೆಗಳು

ಕಾರ್ಡ್ ಐಸಿಐಸಿಐ ಬ್ಯಾಂಕ್‌ನ ಸ್ವತ್ತಾಗಿರುತ್ತದೆ. ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಬ್ಯೂರೋ ರಿಪೋರ್ಟ್ ಹಾಗೂ ಅದು ಅಗತ್ಯವೆಂದು ಪರಿಗಣಿಸಬಹುದಾದ ಇತರ ರಿಪೋರ್ಟ್‌ಗಳನ್ನು ಪಡೆಯುವ ಮೂಲಕ ಅರ್ಜಿದಾರರ ಕ್ರೆಡಿಟ್ ಯೋಗ್ಯತೆಯನ್ನು ಕಂಡು ಹಿಡಿಯುವ ಹಾಗೂ ಅದರ ಸ್ವಂತ ವಿವೇಚನೆಯಲ್ಲಿ ಯಾವುದೇ ಅರ್ಜಿದಾರರಿಗೆ ಕಾರ್ಡ್ ಅನ್ನು ನೀಡಲು ನಿರಾಕರಿಸುವ ಹಕ್ಕನು ಕಾಯ್ದಿರಿಸಿಕೊಂಡಿರುತ್ತದೆ . ಕಾರ್ಡ್ ಅನ್ನು ವರ್ಗಾಯಿಸಲಾಗುವುದಿಲ್ಲ ಹಾಗೂ ಅದರ ಬಳಕೆಯು ಇಲ್ಲಿ ನಮೂದಿಸಲಾಗಿರುವ ನಿಯಮಗಳಿಗೆ ಹಾಗೂ

ಕಾಲ ಕಾಲಕ್ಕೆ  ಐಸಿಐಸಿಐ ಬ್ಯಾಂಕ್ ನಿಗದಿಪಡಿಸುವ ಯಾವುದೇಹೆಚ್ಚುವರಿ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಕಾರ್ಡ್ ಮೇಂಬರ್ ಕಾರ್ಡ್ ಅನ್ನು ಸ್ವೀಕರಿಸಿದ ತಕ್ಷಣ ಕಾರ್ಡನ ಹಿಂಭಾಗದಲ್ಲಿ ಸಹಿಮಾಡಬೇಕು. ಐಸಿಐಸಿಐ ಬ್ಯಾಂಕ್ ಕಸ್ಟಮರ್ ಕೇರ್ ಸೆಂಟರ್ ಹಾಗೂ/ಅಥವಾ ಇನ್‌ಫಿನಿಟಿ ಎಲ್ಲಾ ಕಾರ್ಡ್ ಮೇಂಬರ್‌ಗಳಿಗೆ ಲಭ್ಯವಿರುತ್ತದೆ. ಐಸಿಐಸಿಐ ಬ್ಯಾಂಕ್ ಕಸ್ಟಮರ್ ಕೇರ್ ಸೆಂಟರ್ ಹಾಗೂ/ಅಥವಾ ಇನ್‌ಫಿನಿಟಿ ಮೂಲಕ ಕ್ರೆಡಿಟ್ ಮಿತಿಯನ್ನು ಹೆಚ್ಚಿಸುವುದು, ವಹಿವಾಟುಗಳ ಬಗ್ಗೆ ವಿಚಾರಣೆ, ಟೋಟಲ್ ಅಮೌಂಟ್ ಡ್ಯೂ, ಸ್ಟೇಟ್‌ಮೆಂಟ್ ವಿವರಗಳು,ಪೇಮೆಂಟ್ ಡ್ಯೂ ಡೇಟ್ ಮುಂತಾದವುಗಳನ್ನು ಒಳಗೊಂಡು ಆದರೆ ಅದಕ್ಕೆ ಸೀಮಿತವಾಗಿರದ ಯಾವುದೇ ಸೇವೆಗಳು/ಸೌಲಭ್ಯಗಳನ್ನು ಪಡೆಯುತ್ತಿರುವ ಕಾರ್ಡ್ ಸದಸ್ಯರುಗಳು ,ಸೇವೆಗಳು ಹಾಗೂ ಸೌಲಭ್ಯಗಳಿಗೆಸಂಬಂಧಿಸಿದಂತೆ ಐಸಿಐಸಿಐ ಬ್ಯಾಂಕ್ ನಿಗದಿ ಪಡಿಸಿದ ನಿಯಮಗಳು ಹಾಗೂ ನಿಬಂಧನೆಗಳಿಗೆ  ಹಾಗೂ ಕಾಲ ಕಾಲಕ್ಕೆ ತಿದ್ದುಪಡಿ ಮಾಡಿದಂತೆ  ಅಂತಹ ಸೌಲಭ್ಯಗಳು/ಸೇವೆಗಳನ್ನು ಪಡೆಯುವ ವಿಧಾನಕ್ಕೆ ಎಲ್ಲಾಸಮಯದಲ್ಲೂ ಬದ್ಧರಾಗಿರಬೇಕು.

## III. ಕಾರ್ಡ್‌ನ ಬಳಕೆ

ಎ) ಅಂತರಾಷ್ಟ್ರೀಯವಾಗಿ ಮಾನ್ಯವಾಗಿರುವ ಕಾರ್ಡ್‌ನ ಸಂದರ್ಭದಲ್ಲಿ, ಕಾರ್ಡ್ ಈ ಕೆಳಗೆ ಕ್ಲಾಸ್ III (h) ರಲ್ಲಿ ನೀಡಲಾಗಿರುವುದನ್ನು ಹೊರತುಪಡಿಸಿ ವಿಶ್ವ-ದಾದ್ಯಂತ ಮಾನ್ಯವಾಗಿರುತ್ತದೆ. ಇತರ ಕಾರ್ಡ್‌ಗಳ ಸಂದರ್ಭದಲ್ಲಿ ಭಾರತದಲ್ಲಿ ವಿಸಾ/ವಿಸಾ ಎಲೆಕ್ಟ್ರಾನ್ ಕ್ರೆಡಿಟ್ ಕಾರ್ಡ್‌ಗಳು/ಮಾಸ್ಟರ್‌ಕಾರ್ಡ್/ಎಎಮ್‌ಇಎಕ್ಸ್ ಅನ್ನು ಸ್ವೀಕರಿಸುವ ಮರ್ಚಂಟ್ ಇಸ್ಟಾಬ್ಲಿಶ್‌ಮೆಂಟ್‌ಗಳಲ್ಲಿ (ವ್ಯಾಪಾರಿ ಸಂಸ್ಥೆಗಳಲ್ಲಿ) ಮಾತ್ರ ಬಳಕೆಯನ್ನು ನಿರ್ಬಂಧಿಸಲಾಗಿದೆ. ಹೀಗಿದ್ದಾಗ್ಯೂ, ಐಸಿಐಸಿಐ ಬ್ಯಾಂಕ್ ಹಾಗೂ ಸಂಬಂಧಿಸಿದ ಮರ್ಚಂಟ್ ಇಸ್ಟಾಬ್ಲಿಶಮೆಂಟ್ , ಯಾವುದೇ ಸಮಯದಲ್ಲಿ , ಯಾವುದೇ ಕಾರಣಕ್ಕಾಗಿ ಆ ಮರ್ಚಂಟ್ ಇಸ್ಟಾಬ್ಲಿಶ್‌ಮೆಂಟ್‌ನಲ್ಲಿ ಕ್ರೆಡಿಟ್ ಕಾರ್ಡ್‌ನ ಬಳಕೆಯನ್ನು ನಿರಾಕರಿಸುವ, ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.  ಈ ಕ್ರೆಡಿಟ್ ಕಾರ್ಡ್ ಅನ್ನು ಪ್ರಾಮಾಣಿಕವಾದ ವೈಯಕ್ತಿ ಕ ಅಥವಾ ಅಧಿಕೃತ ಉದ್ದೇಶಗಳಿಗಾಗಿ ಮಾತ್ರ ಬಳಸಬಹುದು ಹಾಗೂ ಅದರ ಬಳಕೆಯನ್ನು ಕಾರ್ಡ್ ಸದಸ್ಯರು ಶೋಷಣೆ ಮಾಡಲು ಬಳಸಿಕೊಳ್ಳಲು ಅನುಮತಿಯಿಲ್ಲ. ಒಂದು ವೇಳೆ ಖರೀದಿ ಅಥವಾ ಇತರ ಸೌಲಭ್ಯದ ಉಪಯೋಗಕ್ಕಾಗಿ ಯಾವುದೇ ಶುಲ್ಕವನ್ನು ಮರ್ಚಂಟ್ ಇಸ್ಟಾಬ್ಲಿಶಮೆಂಟ್ ವಿಧಿಸಿದರೆ, ಕಾರ್ಡ್ ಸದಸ್ಯರ ಮೇಲಾಗುವ ಶುಲ್ಕಗಳ ಬಗ್ಗೆ , ಅದನ್ನು ಮರ್ಚಂಟ್ ಇಸ್ಟಾಬ್ಲಿಶಮೆಂಟ್‌ನಿಂದ ಇತ್ಯರ್ಥಗೊಳಿಸಲಾಗುತ್ತದೆ ಹಾಗೂ ಇದಕ್ಕಾಗಿ ಐಸಿಐಸಿಐ ಬ್ಯಾಂಕ್ ಯಾವುದೇ

ರೀತಿಯಲ್ಲಿ ಜವಾಬ್ದಾರವಾಗಿರುವುದಿಲ್ಲ. ಮರ್ಚ್‌ಂಟ್ ಇಸ್ಟಾಬ್ಲಿಶ್‌ಮೆಂಟ್‌ನಲ್ಲಿ ಕಾರ್ಡ್ ಅನ್ನು ಬಳಸಿದಾಗ, ಕಾರ್ಡ್ ಸದಸ್ಯರು ಚಾರ್ಜ್ -ಸ್ಲಿಪ್‌ಗೆ ಸಹಿಹಾಕುವ ಸಮಯದಲ್ಲಿ ಚಾರ್ಜ್-ಸ್ಲಿಪ್‌ಗಳ ಪ್ರತಿಯನ್ನು ಪಡೆದುಕೊಳ್ಳಬೇಕು. ಕಾರ್ಡ್ ಸದಸ್ಯರು ಚಾರ್ಜ್-ಸ್ಲಿಪ್‌ಗೆ ಸಹಿ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ ; ಕಾರ್ಡ್ ಸದಸ್ಯರಿಂದ ಚಾರ್ಜ್-ಸ್ಲಿಪ್‌ಗೆ ಸಹಿ ಮಾಡದಿದ್ದ ಸಂದರ್ಭದಲ್ಲಿ, ಕಾರ್ಡ್ ಸದಸ್ಯರು ವಹಿವಾಟು/ಗಳು ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲಾ ಶುಲ್ಕಗಳಿಗೆ ಜವಾಬ್ದಾರರಾಗಿರುತ್ತಾರೆ. ಐಸಿಐಸಿಐ ಬ್ಯಾಂಕ್ ಕಾರ್ಡ್ ಸದಸ್ಯರಿಗೆ ಜಾರ್ಜ್-ಸ್ಲಿಪ್‌ಗಳ ಪ್ರತಿಗಳನ್ನು ನೀಡುವುದಿಲ್ಲ; ಹೀಗಿದ್ದಾಗ್ಯೂ ಕಾರ್ಡ್ ಸದಸ್ಯರು ಸಂಬಂಧಿತ ವಹಿವಾಟಿನ ನಲವತ್ತ-ಐದು ದಿನಗಳೊಳಗಡೆ ಅಂತಹ ಕೋರಿಕೆಯನ್ನು ಮಾಡಿದರೆ, ಐಸಿಐಸಿಐ ಬ್ಯಾಂಕ್ , ತನ್ನ ಸ್ವವಿವೇಚನೆಯಲ್ಲಿ, ಟ್ಯಾರಿಫ್ ಅನೆಕ್ಸ್‌ಚರ್‌ನಲ್ಲಿ ನಮೂದಿಸಿದ ಶುಲ್ಕದಲ್ಲಿ ಚಾರ್ಜ್ ಸ್ಲಿಪ್‌ಗಳ ಪ್ರತಿಗಳನ್ನು ನೀಡಬಹುದು. ಐಸಿಐಸಿಐ ಬ್ಯಾಂಕ್ , ತನ್ನ ಸ್ವವಿವೇಚನೆಯಲ್ಲಿ ಕಾರ್ಡ್ ಸದಸ್ಯರಿಗೆ ಮೇಲ್ ಆರ್ಡರ್ ಅಥವಾ ಟೆಲಿಫೋನ್ ಆರ್ಡರ್ ಖರೀದಿಗಳನ್ನು ಜಾರಿಗೊಳಿಸುವ ಸೌಲಭ್ಯವನ್ನು ನೀಡಲು ಒಪ್ಪಿಕೊಳ್ಳಬಹುದು. ಆನ್‌ಲೈನ್ ಕ್ರೆಡಿಟ್ ಕಾರ್ಡ್‌ನ ಬಳಕೆಯನ್ನು ಆನ್‌ಲೈನ್ ವಹಿವಾಟುಗಳು /ಮೇಲ್ ಆರ್ಡರ್‌ಗಳಿಗೆ ಮಾತ್ರ ನಿರ್ಬಂಧಿಸಲಾಗಿದೆ. ಆನ್‌ಲೈನ್ ಕ್ರೆಡಿಟ್ ಕಾರ್ಡ್ ಅನ್ನು ಸಪ್ಲಿಮೆಂಟರಿ ಕಾರ್ಡ್/ಆ್ಯಡ್-ಆನ್ ಕಾರ್ಡ್‌ನಂತೆ ಮಾತ್ರ ನೀಡಲಾಗುತ್ತದೆ ಹಾಗೂ ಪ್ರೈಮರಿ ಕಾರ್ಡ್‌ನಂತೆ ಅಲ್ಲ, ಅಥವಾ ಐಸಿಐಸಿ ಬ್ಯಾಂಕ್,ತನ್ನ ಸ್ವವಿವೇಚನೆಯಲ್ಲಿ ಕಾಲ ಕಾಲಕ್ಕೆ ಸೂಚಿಸಿದಂತೆ ನೀಡಬಹುದು. ವಿಸಾ mCheck ಕಾರ್ಡ್‌ನ ಬಳಕೆಯನ್ನು ಮೊಬೈಲ್ ಮೂಲಕ ಪಾವತಿಗಳು ಹಾಗೂ /ಅಥವಾ ಖರೀದಿಗಳಿಗೆ ನಿರ್ಬಂಧಿಸಲಾಗಿದೆ. ವಿಸಾ mCheck ಕ್ರೆಡಿಟ್ ಕಾರ್ಡ್ ಅನ್ನು ಪೂರಕ್ ಕಾರ್ಡ್ ಆಗಿ ನೀಡಲಾಗುತ್ತದೆ ಹಾಗೂ ಪ್ರೈಮರಿ ಕಾರ್ಡ್ ಆಗಿ ಅಲ್ಲ, ಅಥವಾ ಐಸಿಐಸಿ ಬ್ಯಾಂಕ್,ತನ್ನ ಸ್ವವಿವೇಚನೆಯಲ್ಲಿ ಕಾಲ ಕಾಲಕ್ಕೆ ಸೂಚಿಸಿದಂತೆ ನೀಡಬಹುದು. ಮೇಲ್ ಆರ್ಡರ್,ಟೆಲಿಫೋನ್ ಆರ್ಡರ್ ಅಥವಾ ಮೊಬೈಲ್ ಖರೀದಿಯ ಸಂದರ್ಭದಲ್ಲಿ ,ಕಾರ್ಡ್ ಸದಸ್ಯರಿಂದ ಖರೀದಿಯ ಸಮಯದಲ್ಲಿ ಚಾರ್ಜ್ ಸ್ಲಿಪ್‌ಗಳನ್ನು ಸಹಿಮಾಡಬೇಕಾಗಿರುವುದಿಲ್ಲ ಎಂದು ಕಾರ್ಡ್ ಸದಸ್ಯರಿಗೆ ತಿಳಿದಿರುತ್ತದೆ. ಅದರ ಪ್ರಕಾರ, ಅಂತಹ ಖರೀದಿಯ ಸತ್ಯಾಸತ್ಯತೆ ಅಥವಾ ಮಾನ್ಯತೆ ಅಥವಾ ಶುಲ್ಕಕ್ಕೆ ಸಂಬಂಧಿಸಿದ ಯಾವುದೇ ವಿವಾದದ ಸಂದರ್ಭದಲ್ಲಿಯೂ ಸಹ ಯಾವುದೇ ಕಾರಣಕ್ಕಾಗಿ , ಕಾರ್ಡ್ ಮೇಂಬರ್ ಐಸಿಐಸಿಐ ಬ್ಯಾಂಕ್‌ಗೆ ಪಾವತಿಸಬೇಕಾದ ಎಲ್ಲಾ ಬಾಕಿಮೊತ್ತಗಳನ್ನು ಪಾವತಿಸಬೇಕಾಗುತ್ತದೆ ಎನ್ನುವುದನ್ನು ಕಾರ್ಡ್ ಸದಸ್ಯರು ಸ್ವೀಕರಿಸುತ್ತಾರೆ.

ಬಿ. ಎಲ್ಲಾ ವಿವಾದಗಳು ಈ ನಡುವೆ ಇರುವ ವಿಷಯಗಳಾಗಿರುತ್ತವೆ ಹಾಗೂ ಸಂಬಂಧಪಟ್ಟ ಮರ್ಚಂಟ್ ಇಸ್ಟಾಬ್ಲಿಸ್‌ಮೆಂಟ್‌ನೊಂದಿಗೆ ಕಾರ್ಡ್ ಸದಸ್ಯರು ಇತ್ಯರ್ಥ ಮಾಡಿಕೊಳ್ಳಬೇಕು. ಅದಕ್ಕಾಗಿ ,ಐಸಿಐಸಿಐ ಬ್ಯಾಂಕ್ ಯಾವುದೇ ರೀತಿಯಲ್ಲಿ ಜವಾಬ್ದಾರವಾಗಿರುವುದಿಲ್ಲ.

ಸಿ) ಕಾರ್ಡ್ ಅನ್ನು ಬಳಸಬಹುದು :1) ಕಾರ್ಡ್ ಸದಸ್ಯರಿಗೆ ಐಸಿಐಸಿಐ ಬ್ಯಾಂಕ್‌ನಿಂದ ಸೂಚಿಸಲಾದ ಕ್ರೆಡಿಟ್-ಲಿಮಿಟ್‌ನಲ್ಲಿ ; ಹಾಗೂ 2) ಅದರ ಹೊರ ಭಾಗದಲ್ಲಿ ಕೆತ್ತಿದ ತಿಂಗಳದ ಕೊನೆಯ ದಿನಾಂಕದ ನಂತರ ಬಳಸಲು ಬರುವುದಿಲ್ಲ .

ಡಿ) ಕಾರ್ಡ್ ಅನ್ನು ಬಳಸುವ ಕಾರ್ಡ್ ಸದಸ್ಯರ ಹಕ್ಕನ್ನು ತಕ್ಷಣವೇ ನಿರ್ಧರಿಸಬೇಕು :

1) ಕೆಳಗಿನ ಕ್ಲಾಸ್ V ಕ್ಕೆ ಅನುಸಾರವಾಗಿ ಮುಕ್ತಾಯವಾದ ಸಂದರ್ಭದಲ್ಲಿ ; ಅಥವಾ 2)ಕಾರ್ಡ್ ಕಳೆದುಕೊಳ್ಳುವಿಕೆ / ದುರುಪಯೋಗ ಅಥವಾ ಕಳ್ಳತನದ ಸಂದರ್ಭದಲ್ಲಿ.

ಇ) ಕಾರ್ಡ್ ಬಳಸುವುದರ ಮೂಲಕ , ಐಸಿಐಸಿಐ ಬ್ಯಾಂಕ್ ಕಸ್ಟಮರ್ ಕೇರ್ ಸೆಂಟರ್ /ಇನ್‌ಫಿನಿಟಿಗೆ ಕಾರ್ಡ್ ಸದಸ್ಯರಿಂದಂದ ಸೂಚಿಸಲ್ಪಡದಿದ್ದರೆ ಅಂತಹ ಸಮಯದವರೆಗೆ ಕಾರ್ಡ್‌ನ್ ಅವಧಿಯ ನವೀಕರಣ ಹಾಗೂ/ಅಥವಾ ಬದಲಿ ಕಾರ್ಡ್‌ಗಳನ್ನು ಪ್ರತಿ ಕಾರ್ಡ್ ಸದಸ್ಯರಿಗೆ ನೀಡಬೇಕೆಂದು ಕಾರ್ಡ್ ಸದಸ್ಯರು ಸ್ಥಾಯಿ ಕೋರಿಕೆಯನ್ನು ಮಾಡಿದ್ದಾರೆ ಎಂದು ಪರಿಗಣಿಸಲಾಗುದತ್ತದೆ, ಹಾಗೂ ಅಂತಹ ನವೀಕರಣ ಹಾಗೂ/ಅಥವಾ ಬದಲಿ ಕಾರ್ಡ್ ಐಸಿಐಸಿಐ ಬ್ಯಾಂಕ್‌ನ ಸ್ವವಿವೇಚನೆಗೆ ಒಳಪಟ್ಟಿರುತ್ತದೆ . .

ಎಫ್) ಕ್ರೆಡಿಟ್ ಕಾರ್ಡ್ ಪ್ರೋಗ್ರಾಮ್ ಮುಕ್ತಾಯಗೊಳಿಸುವ ಸಂದರ್ಭದಲ್ಲಿ ಅಥವಾ ಕ್ರೆಡಿಟ್ ಕಾರ್ಡ್ ನವೀಕರಣದ ಸಮಯದಲ್ಲಿ , ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ತನ್ನ ಸ್ವವಿವೇಚನೆಯಲ್ಲಿ ಕಾರ್ಡ್ ಸದಸ್ಯರು ಪ್ರಸ್ತುತದಲ್ಲಿ ಹೊಂದಿರುವ ಕಾರ್ಡ್ ಪ್ರಕಾರಕ್ಕಿಂತ ಭಿನ್ನವಾದ ಕಾರ್ಡ್ ಪ್ರಕಾರವನ್ನು ನೀಡುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ. ಯಾವುದೇ ಸಮಯದಲ್ಲಿ ಯಾವುದೇ ಕ್ರೆಡಿಟ್ ಕಾರ್ಡ್‌ನಲ್ಲಿ ಕ್ರೆಡಿಟ್ ಮಿತಿಗಳು ಹಾಗೂ ನಗದು ಮಿತಿಗಳು ಐಸಿಐಸಿಐ ಬ್ಯಾಂಕ್ ಲಿಮಿಟೆಡ್‌ನ ಸ್ವವಿವೇಚನೆಯ ಪ್ರಕಾರವಿರುತ್ತದೆ.

ಜಿ) ಕಾರ್ಡ್ ಸದಸ್ಯರು ಕಾರ್ಡ್ ಹಾಗೂ ಐಸಿಐಸಿಐ ಬ್ಯಾಂಕ್‌ನೊಂದಿಗೆ ಎಲ್ಲಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಎಲ್ಲಾ ಸಮಯದಲ್ಲಿ ಉತ್ತಮ ನಂಬಿಕೆಯೊಂದಿಗೆ ಕಾರ್ಯನಿರ್ವಹಿಸಬೇಕು.

ಎಚ್) ಕಾರ್ಡ್ ಸದಸ್ಯರಿಗೆ ನೀಡಲಾದ ಅಂತರಾಷ್ಟ್ರೀಯವಾಗಿ ಮಾನ್ಯವಾದ ಕಾರ್ಡ್ ನೇಪಾಳ ಹಾಗೂ ಭೂತಾನ್‌ನಲ್ಲಿನ ಮರ್ಚಂಟ್ ಇಸ್ಟಾಬ್ಲಿಶ್‌ಮೆಂಟ್‌ಗಳಲ್ಲಿ ವಿದೇಶಿ ವಿನಿಮಯದಲ್ಲಿ ಪಾವತಿಸುವುದಕ್ಕಾಗಿ ಹೊರತುಪಡಿಸಿ ವಿಶ್ವ-ದಾದ್ಯಂತ ಮಾನ್ಯವಾಗಿರುತ್ತದೆ. ಭಾರತ/ನೇಪಾಳ/ಭೂತಾನ್‌ನಲ್ಲಿ ಮಾತ್ರ ಬಳಸಲು ನಿರ್ಬಂಧಿಸಲಾಗಿರುವ ಕಾರ್ಡ್‌ಗಳಿಗೆ ಸಂಬಂಧಿಸಿದಂತೆ,ಭಾರತ/ನೇಪಾಳ/ಭೂತಾನ್‌ನ ಹೊರಗಡೆ ಅದರ ಬಳಕೆಯು '' ಫಾರೆನ್ ಎಕ್ಸ್‌ಚೇಂಜ್ ಮ್ಯಾನೇಜ್‌ಮೆಂಟ್ ಆ್ಯಕ್ಟ್'' (ಎಫ್‌ಇಎಮ್‌ಎ) ಅಥವಾ ಯಾವುದೇ ಇತರ ಸಂಬಂಧಿತ ಕಾನೂನಿನ ಉಲ್ಲಂಘನೆಯಾಗಿರುತ್ತದೆ. ಈ ನಿಬಂಧನೆಗಳಿಗೆ ವಿರುದ್ಧವಾಗಿ ಅಕ್ರಮ ಬಳಕೆಗಾಗಿ ಸಂಪೂರ್ಣ ಜವಾಬ್ದಾರಿಯನ್ನು ಕಾರ್ಡ್ ಸದಸ್ಯರು ಒಪ್ಪಿಕೊಳ್ಳುತ್ತಾರೆ ಹಾಗೂ ಕಾರ್ಡ್ ಸದಸ್ಯರು ಅದರ ನಿಬಂಧನೆಗಳ ಉಲ್ಲಂಘನೆಯನ್ನು ಮಾಡುವುದರ ಪರಿಣಾಮವಾಗಿ ಐಸಿಐಸಿಐ ಬ್ಯಾಂಕ್‌ಗೆ ಉಂಟಾಗುವ ಯಾವುದೇ ಹಾನಿ,ನಷ್ಟ, ಬಡ್ಡಿ , ಪರಿವರ್ತನಾ ವೆಚ್ಚ, ಉಂಟಾಗಬಹುದಾದ ಯಾವುದೇ ಇತರ ಹಣಕಾಸಿನ ವೆಚ್ಚವನ್ನು ಹಾಗೂ/ಅಥವಾ ಹೊಂದಬಹುದಾದ ನಷ್ಟವನ್ನು . ಐಸಿಐಸಿಐ ಬ್ಯಾಂಕ್‌ಗೆ ತುಂಬಿಕೊಡಲು ವಾಗ್ದಾನ ಮಾಡುತ್ತಾರೆ ಹಾಗೂ ಒಪ್ಪುತ್ತಾರೆ .

ಐ) ಭಾರತದಲ್ಲಿ ಅಧಿಕೃತ ವಿತರಕರಿಂದ ಖರೀದಿಸಬಹುದಾದ ಅಂತರ್‌ರಾಷ್ಟ್ರೀಯವಾಗಿ ಮಾನ್ಯವಾಗಿರುವ ಕಾರ್ಡ್ ಅನ್ನು ವಿನಿಮಯಕ್ಕಾಗಿ ಇಂಟರ್‌ನೆಟ್‌ನಲ್ಲಿ ಯಾವುದೇ ಉದ್ದೇಶಕ್ಕಾಗಿ ಬಳಸಬಹುದು.

ಜೆ) ಅಂತರಾಷ್ಟ್ರೀಯವಾಗಿ ಮಾನ್ಯವಾಗಿರುವ ಕಾರ್ಡ್ ಹಾಗೂ ಇತರ ಎಲ್ಲಾ ಕಾರ್ಡ್‌ಗಳನ್ನು ಇಂಟರ್‌ನೆಟ್ ಅಥವಾ ಲಾಟರಿ ಟಿಕೇಟ್‌ಗಳು, ನಿಷೇಧಿತ ಅಥವಾ ಬಹಿಷ್ಕೃತ ನಿಯತಕಾಲಿಕೆಗಳು , ಸ್ವೀಫ್‌ಸ್ಟೇಕ್‌ಗಳಲ್ಲಿ ಭಾಗವಹಿಸುವಿಕೆ, ಕಾಲ್‌ಬ್ಯಾಕ್ ಸರ್ವಿಸ್‌ಗಳಿಗಾಗಿ ಪಾವತಿಸುವಿಕೆ, ವಿದೇಶಿ ಫಾರೆಕ್ಸ್ ಟ್ರೇಡಿಂಗ್‌ಗೆ ಯಾವುದೇ ರೂಪದಲ್ಲಿ ಹಣರವಾನೆ, ವಿದೇಶಿ ವಿನಿಮಯಗಳು / ವಿದೇಶಿ ಕೌಂಟರ್ ಪಾರ್ಟಿಗೆ ಮಾರ್ಜಿನ್ ಕಾಲ್‌ಗಳು, ದೇಶೀಯ/ ವಿದೇಶಿಯ ಮಾರ್ಕೆಟ್‌ಗಳು ಮುಂತಾದವುಗಳಲ್ಲಿ ವಿದೇಶಿ ವಿನಿಮಯದಲ್ಲಿ ಟ್ರೇಡಿಂಗ್ ನಂತಹ ನಿಷೇಧಿಸಲಾದ ವಸ್ತುಗಳ ಖರೀದಿಗಾಗಿ ಬಳಸಲಾಗುವುದಿಲ್ಲ.

ಕೆ) ಆಮದುದಾರ ಗ್ರಾಹಕರು ಭಾರತಕ್ಕೆ ಭೇಟಿ ನೀಡುತ್ತಾರೋ ಇಲ್ಲವೋ ಎಂಬುದನ್ನು ಲೆಕ್ಕಿಸದೇ ಭಾರತದಿಂದ ಮಾಡಿದ ರಪ್ತುಗಳಿಗಾಗಿ ಅಧಿಕೃತ ವಿತರಕರು ಕ್ರೆಡಿಟ್ ಕಾರ್ಡ್‌ಗೆ ಡೆಬಿಟ್ ಮೂಲಕ ಪಾವತಿಯನ್ನು ಸ್ವೀಕರಿಸಬಹುದು. ಆದುದರಿಂದ , ಅಧಿಕೃತ ಡೀಲರ್‌ಗಳು ಭಾರತದಿಂದ ರಪ್ತುಮಾಡುವ

ಆಮದುದಾರರ ಕ್ರೆಡಿಟ್ ಕಾರ್ಡ್‌ಗೆ ಡೆಬಿಟ್ ಮೂಲಕ ಪಾವತಿಯನ್ನು ಪಡೆಯಬಹುದಾಗಿದ್ದು, ಅಲ್ಲಿ ಕಾರ್ಡ್ ನೀಡುವ ಬ್ಯಾಂಕ್ /ಸಂಸ್ಥೆಯಿಂದ ಮರುಪಾವತಿಯನ್ನು ವಿದೇಶಿ ವಿನಿಮಯದಲ್ಲಿ ಪಡೆಯಲಾಗುತ್ತದೆ.

ಎಲ್) ಐಸಿಐಸಿಐ ಬ್ಯಾಂಕ್ ಯಾವುದೇ ಕಾರಣವನ್ನು ನೀಡದೇ ಕಾರ್ಡ್‌ನಲ್ಲಿ ಅಧಿಕೃತ ಕೋರಿಕೆಗಳನ್ನು ನಿರಾಕರಿಸಲು ಅಥವಾ ಗೌರವಿಸಲು ಸಂಪೂರ್ಣ ವಿವೇಚನೆ ಹಾಗೂ ಸ್ವಾತಂತ್ರ್ಯವನ್ನು ಕಾಯ್ದಿರಿಸಿಕೊಂಡಿದೆ. ಕೆಲವು ಸಂದರ್ಭಗಳಲ್ಲಿ, ತನ್ನ ವಿವೇಚನೆಗೆ ಒಳಪಟ್ಟು, ಕಾರ್ಡ್ ಮೇಂಬರ್ ಐಸಿಐಸಿಐ ಬ್ಯಾಂಕ್ ಕಸ್ಟಮರ್ ಕೇರ್ ಸೆಂಟರ್ ಅನ್ನು ಸಂಪರ್ಕಿಸಿ ಅದನ್ನು ಅನುಮೋದಿಸುವ ಮೊದಲು ಹಾಗೂ ಕಾರ್ಡ್ ಖಾತೆಗೆ ಶುಲ್ಕವನ್ನು ವಿಧಿಸುವ ಮೊದಲು ವಹಿವಾಟನ್ನು ದೃಢೀಕರಿಸಬೇಕಾಗುತ್ತದೆ.

(I) ಯಾವುದೇ ಕಾನೂನು ಬಾಹೀರ/ ಅಕ್ರಮ ಖರೀದಿ/ಉದ್ದೇಶಗಳಿಗಾಗಿ ಅವರು ಕಾರ್ಡ್‌ಅನ್ನು ಪಾವತಿಯಾಗಿ ಬಳಸುವುದಿಲ್ಲ ಎಂದು ಕಾರ್ಡ್ ಸದಸ್ಯರು ಒಪ್ಪುತ್ತಾರೆ.

(II) ಕ್ರೆಡಿಟ್ ಕಾರ್ಡ್ ಅನ್ನು ವೈಯಕ್ತಿಕ ಖರ್ಚುಗಳು ಹಾಗೂ ಉದ್ದೇಶಗಳಿಗಾಗಿ ಮಾತ್ರ ನೀಡಲಾಗುತ್ತದೆ. ಕಾರ್ಡ್‌ದಾರರು ಕ್ರೆಡಿಟ್ ಕಾರ್ಡ್ ಅನ್ನು ಮರುಮಾರಾಟಕ್ಕಾಗಿ ಯವುದೇ ವಸ್ತುವನ್ನು ಖರೀದಿಸಲು, ವಾಣಿಜ್ಯ ಅಥವಾ ಬಿಸಿನೆಸ್ ಉದ್ದೇಶಗಳಿಗಾಗಿ ಬಳಸಬಾರದು. ಕ್ರೆಡಿಟ್ ಕಾರ್ಡ್ ಅನ್ನು ಕಾನೂನು ಬದ್ಧ, ಪ್ರಾಮಾಣಿಕ ವೈಯಕ್ತಿಕ ಉದ್ದೇಶಗಳಿಗಾಗಿ ಮಾತ್ರ ಬಳಸಬೇಕು ಹಾಗೂ ಯಾವುದೇ ರೀತಿಯ ಮನಿ ಲಾಂಡರಿಂಗ್, ಸಮಾಜ- ವಿರೋಧಿ ಅಥವಾ ಊಹಾತ್ಮಕ ಚಟುವಟಿಕೆಗಳಿಗಾಗಿ ಬಳಸಬಾರದು ಅಥವಾ ಬಿಸಿನೆಸ್‌ನಲ್ಲಿ ( ವರ್ಕಿಂಗ್ ಕೆಪಿಟಲ್‌ನ ಉದ್ದೇಶಕ್ಕಾಗಿ) ವಾಣಿಜ್ಯಕವಾಗಿ ಸ್ವಂತಕ್ಕೆ ಬಳಸಿಕೊಳ್ಳಬಾರದು.

ಎಮ್) ಕ್ರೆಡಿಟ್ ಕಾರ್ಡ್ ಅನ್ನು ನಿಷೇಧಿತ, ನಿರ್ಬಂಧಿತ ವಾಣಿಜ್ಯ ಉದ್ದೇಶಗಳಿಗಾಗಿ ಅಥವಾ ಮೇಲೆ ನಮೂದಿಸಿದ ಯಾವುದೇ ಉದ್ದೇಶಗಳಿಗಾಗಿ ಬಳಸುವುದು ಕಂಡುಬಂದಲಿ, ಐಸಿಐಸಿಐ ಬ್ಯಾಂಕ್ , ಕಾರ್ಡ್‌ದಾರರಿಗೆ ಯಾವುದೇ ಸೂಚನೆ ನೀಡದೇ, ತನ್ನ ಸ್ವವಿವೇಚನೆಯಲ್ಲಿ, ಸಂಬಂಧಿಸಿದ ಕ್ರೆಡಿಟ್ ಕಾರ್ಡ್ ಹಾಗೂ ಆ್ಯಡ್ -ಆನ್ ಕಾರ್ಡ್‌ಗಳನ್ನು ಮುಕ್ತಾಯ ಗೊಳಿಸುವ ಹಕ್ಕನ್ನು ಚಲಾಯಿಸಬಹುದು. ಐಸಿಐಸಿಐ ಬ್ಯಾಂಕ್ ಫೋನ್‌ನಲ್ಲಿ ಅಥವಾ ಔಪಚಾರಿಕ ಸಂವಹನದ ಮೂಲಕ ವಿಚಾರಿಸುವ ಹಾಗೂ ಕ್ರೆಡಿಟ್ ಕಾರ್ಡ್ ವಹಿವಾಟುಗಳು, ಬಳಕೆಯ ಮಾದರಿ ಮುಂತಾದವುಗಳ ಬಗ್ಗೆ ವಿವರಗಳು, ಮಾಹಿತಿ,ಪುರಾವೆಗಳು ಮುಂತಾದವುಗಳನ್ನು ಕೋರುವ ಹಕ್ಕನ್ನು ಹೊಂದಿರುತ್ತದೆ ಹಾಗೂ

ಐಸಿಐಸಿಐ ಬ್ಯಾಂಕ್ ಕೇಳಿದ ಮಾಹಿತಿಯನ್ನು ಕಾಲ ಕಾಲಕ್ಕೆ ಒದಗಿಸಲು ಕಾರ್ಡ್‌ದಾರರು ಒಪ್ಪಂದದಂತೆ ಬದ್ಧವಾಗಿರುತ್ತಾರೆ. ಕಾರ್ಡದಾರರಿಂದ ತೃಪ್ತಿಕರವಲ್ಲದ ಪ್ರತಿಕ್ರಿಯೆಗಳು ಅಥವಾ ಯಾವುದೇ ಪ್ರತಿಕ್ರಿಯೆಗಳಿಲ್ಲದಿರುವುದು ಐಸಿಐಸಿಐ ಬ್ಯಾಂಕ್‌ನಿಂದ ಕ್ರೆಡಿಟ್ ಕಾರ್ಡ್ ಅನ್ನು ನಿರ್ಬಂಧಿಸಲು/ಮುಕ್ತಾಯಗೊಳಿಸಲು ಕಾರಣವಾಗಬಹುದು. (I) ಕಾರ್ಡ್‌ದಾರರು ಕಾರ್ಡ್‌ನಿಂದ ಈ ಹಿಂದೆ ಖರೀದಿಸಿದ ಯಾವುದೇ ಸರಕುಗಳು ಹಾಗೂ ಸೇವೆಗಳಿಗೆ ಮರುಪಾವತಿಸುವುದರ ಹೊರತಾಗಿ ಯಾವುದೇ ಕಾರಣಕ್ಕೂ ಕಾರ್ಡ್‌ದಾರ ಕಾರ್ಡ್ ಖಾತೆಗೆ ಕ್ರೆಡಿಟ್ ಅನ್ನು ಪಡೆಯ ಬಾರದು ಅಥವಾ ಪರಿಚಯಿಸಬಾರದು. ಕ್ರೆಡಿಟ್ ಕಾರ್ಡ್‌ನಲ್ಲಿನ ವಹಿವಾಟುಗಳನ್ನು ಕಾರ್ಡ್ ಖಾತೆಯಲ್ಲಿರುವ ಒಟ್ಟು ಕ್ರೆಡಿಟ್ ಲಿಮಿಟ್‌ನ ಬಳಸದ ಮೊತ್ತದವರೆಗೆ ಮಾತ್ರ ಅವಕಾಶನೀಡಲಾಗುತ್ತದೆ.

## IV. ಪ್ರಸ್ತುತ ಉಳಿತಾಯ ಖಾತೆ ಚಾಲ್ತಿಯಲ್ಲಿದ್ದರೆ, ಖಾತೆಯೊಂದಿಗೆ ಕಾರ್ಡ್ ಅನ್ನು ಲಿಂಕ್ ಮಾಡುವುದರ ಬಗೆ

ಅರ್ಜಿದಾರನು/ಳು ಚಾಲ್ತಿಯಲ್ಲಿರುವ ತಮ್ಮ ಇಸಿಐಸಿಐ ಬ್ಯಾಂಕ್ ಉಳಿತಾಯ ಖಾತೆ ಇದ್ದಲ್ಲಿ, ಆ ಖಾತೆಗೆ ಐಸಿಐಸಿಐ ಬ್ಯಾಂಕ್‌ನ ಇಚ್ಛಾನುಸಾರ ತಮ್ಮ ಕಾರ್ಡ್ ಅನ್ನು ಲಿಂಕ್ ಮಾಡಲು ಒಪ್ಪಿಕೊಂಡಿರುತ್ತಾರೆ. ಮುಂದುವರೆದು,ಚಾಲ್ತಿಯಲ್ಲಿರುವ ತಮ್ಮ ಬಳಕೆದಾರ ಐಡಿ ಬಳಸಿ ಇಸಿಐಸಿಐ ಬ್ಯಾಂಕ್ ಉಳಿತಾಯ ಖಾತೆ ಇದ್ದಲ್ಲಿ, ಆ ಖಾತೆಯ ಮೂಲಕ ತಮ್ಮ ಕಾರ್ಡ್ ಖಾತೆಯನ್ನು ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳು ಹಾಗೂ ಸೌಲಭ್ಯಗಳ ಮೂಲಕ ನಿರ್ವಹಿಸಲು ಅವಕಾಶ ನೀಡುತ್ತದೆ ಎಂದು ಅರ್ಜಿದಾರನು/ಳು ಅರ್ಥಮಾಡಿಕೊಂಡಿರುತ್ತಾರೆ. ಮೇಲೆ ತಿಳಿಸಿರುವ ಉದ್ದೇಶಕ್ಕೆ ಅರ್ಜಿದಾರನು/ಳು ಒದಗಿಸಿರುವ ಕೆವೈಸಿ ವಿವರಗಳನ್ನು ಉಪಯೋಗಿಸಲು ಅರ್ಜಿದಾರರು ಐಸಿಐಸಿಐ ಬ್ಯಾಂಕ್‌ಗೆ ಅಧಿಕಾರ ಹಾಗೂ ಒಪ್ಪಿಗೆಯನ್ನು ನೀಡಿರುತ್ತಾರೆ. ಮುಂದುವರೆದು, ಐಸಿಐಸಿಐ ಬ್ಯಾಂಕ್ ಗ್ರಾಹಕ ಸೇವೆಗೆ ಕರೆ ಮಾಡುವ ಮೂಲಕ ಅರ್ಜಿದಾರನು/ಳು ತಮ್ಮ ಕಾರ್ಡ್ ಅನ್ನು ತಮ್ಮ ಐಸಿಐಸಿಐ ಬ್ಯಾಂಕ್ ಉಳಿತಾಯ ಖಾತೆಯಿಂದ ಬೇರ್ಪಡಿಸಬಹುದು ಎಂದು ಅರ್ಜಿದಾರನು/ಳು ಅರ್ಥಮಾಡಿಕೊಂಡಿದ್ದಾರೆ.

## V ವೈಯಕ್ತಿಕ ಗುರುತಿನ ಸಂಖ್ಯೆ

ಕಾರ್ಡ್‌ನ ಸದಸ್ಯರು ಕಾರ್ಡ್ ಅನ್ನು ಬಳಸಲು, ಅವರಿಗೆ ವೈಯಕ್ತಿಕ ಗುರುತಿನ ಸಂಖ್ಯೆ (APIN) ನೀಡಲಾಗುತ್ತದೆ. ಸದಸ್ಯರಿಗೆ ಆ ವೈಯಕ್ತಿಕ ಗುರುತಿನ ಸಂಖ್ಯೆಯನ್ನು (APIN) ಮೇಲ್ ಮಾಡಲಾಗುತ್ತದೆ. ಒಂದೊಮ್ಮೆ ಆ APIN ಅನ್ನು ಸದಸ್ಯರು ಮೊಹರು ಹಾಕಿದ ಲಕೋಟೆಯಲ್ಲಿ ಸ್ವೀಕರಿಸದಿದ್ದರೆ, ಆಗ ಕಾರ್ಡ್

ಸದಸ್ಯರು ಐಸಿಐಸಿಐ ಬ್ಯಾಂಕ್ ಶಾಖೆಯನ್ನು ಅಥವಾ ಐಸಿಐಸಿಐ ಬ್ಯಾಂಕ್ ಗ್ರಾಹಕ ಸಹಾಯ ಕೇಂದ್ರ ಸಂಪರ್ಕಿಸಬೇಕು. ತದನಂತರ, ಕಾರ್ಡ್ ಸದಸ್ಯರು ತಮ್ಮ ಸ್ವಂತ ಜವಾಬ್ದಾರಿಯ ಮೇರೆಗೆ APINಅನ್ನು ATM ಅಥವಾ ಐಸಿಐಸಿಐ ಬ್ಯಾಂಕ್ ಶಾಖೆಯಲ್ಲಿ ಅಥವಾ ಐಸಿಐಸಿಐ ಬ್ಯಾಂಕ್ ಗ್ರಾಹಕ ಸಹಾಯ ಕೇಂದ್ರದಲ್ಲಿ ಬದಲಾಯಿಸಿಕೊಳ್ಳಬಹುದು. APINಮೂಲಕ ಸದಸ್ಯರು ತಮ್ಮ ಕಾರ್ಡ್‌ನ ಖಾತೆಗೆ ಪ್ರವೇಶಿಸಬಹುದು.ಆ ನಂತರದಿಂದ ಅಂತಹ APIN ಬಳಸಿ APINನ ಬಳಕೆ, ಗೌಪ್ಯತೆ ಕಾಯ್ದುಕೊಳ್ಳುವುದು ಹಾಗೂ ಕಾಪಾಡಿಕೊಳ್ಳುವುದು ಕಾರ್ಡ್ ಸದಸ್ಯರ ಜವಾಬ್ದಾರಿಯಾಗಿರುತ್ತದೆ ಹಾಗೂ ಬಳಸಿದ ಕಾರ್ಡ್ ಖಾತೆಯಲ್ಲಿ ಮಾಡಲಾಗುವ ಎಲ್ಲಾ ಆದೇಶಗಳಿಗೆ ಹಾಗೂ ಮಾಹಿತಿಗಳ ಬದಲಾವಣೆಗೆ ಸದಸ್ಯರೇ ಜವಾಬ್ದಾರಾಗಿರುತ್ತಾರೆ. ಬೇರೆ ಯಾರಿಗೂ ತಿಳಿಯದಂತೆ ಮಾಡಲು ಕಾರ್ಡ್ ಸದಸ್ಯರು APINಅನ್ನು ಯಾವುದೇ ರೂಪದಲ್ಲಿ ಬರೆದಿಡುವುದು ಅಥವಾ ಇತರ ರೀತಿಯಲ್ಲಿ ಶೇಖರಿಸಿಡಬಾರದು. APINನಿಂದ ದೃಢೀಕರಿಸಲ್ಪಟ್ಟಂತೆ ವಹಿವಾಟುಗಳನ್ನು ಕೈಗೊಳ್ಳಲು ಐಸಿಐಸಿಐ ಬ್ಯಾಂಖ್‌ಗೆ ಅಧಿಕಾರವಿರುತ್ತದೆ ಹಾಗೂ ಈ ಅಧಿಕಾರವನ್ನು ಹಿಂದಕ್ಕೆ ಪಡೆಯಲಾಗದು. ಸದಸ್ಯರು ಅಥವಾ ಅವರಿಂದ ಕಳಿಸಲಾಗಿದೆ ಎಂದು ಭಾವಿಸಲಾದ ಯಾವುದೇ ವಹಿವಾಟಿನ ಸೂಚನೆಯ ನೈಜತೆಯನ್ನು ಪರಿಶೀಲೀಸಲು ಐಸಿಐಸಿಐ ಬ್ಯಾಂಕ್ ಯಾವುದೇ ಹೊಣೆಗಾರಿಕೆ ತೆಗೆದುಕೊಳ್ಳುವುದಿಲ್ಲ, ಯಾವುದೇ ವಹಿವಾಟು ನೆರವೇರುವುದಕ್ಕೆ ಕಾರ್ಡ್ ಸದಸ್ಯರ APINಒಂದೇ ಪರಿಶೀಲನೆಯ ಮಾರ್ಗವಾಗಿರುತ್ತದೆ. APINನ ಭದ್ರತೆ ಕಾಯ್ದುಕೊಳ್ಳಲು ಕಾರ್ಡ್ ಸದಸ್ಯರು ಮೇಲೆ ತಿಳಿಸಿರುವ ಕ್ರಮಗಳ ಜೊತೆಗೆ ಎಲ್ಲಾ ಕಾಲಗಳಲ್ಲೂ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಭದ್ರತೆ ಅವಶ್ಯಕತೆಗಳನ್ನು ಪಾಲಿಸುವಲ್ಲಿ ಕಾರ್ಡ್ ಸದಸ್ಯರು ವಿಫಲರಾದರೆ, ‘ಅವರು ಐಸಿಐಸಿಐ ಬ್ಯಾಂಕ್‌ಗೆ ಹೊಣೆಗಾರರಾಗಬಹುದು.

ಐಸಿಐಸಿಐ ಬ್ಯಾಂಕ್, ತನ್ನ ಸಂಪೂರ್ಣ ವಿವೇಚನೆಯಿಂದ, ಅಸ್ತಿತ್ವದಲ್ಲಿರುವ ಕಾರ್ಡ್‌ಗೆ ಹೊಸ APIN ಅನ್ನು ನೀಡಬಹುದು. ಇಲ್ಲಿ ಹೇಳಿರುವ ನಿಬಂಧನೆಗಳಿಗೆ ಒಳಪಟ್ಟು ಹಾಗೂ ಕಾಲಕಾಲಕ್ಕೆ ಐಸಿಐಸಿಐ ಬ್ಯಾಂಕ್‌ನ ಸೂಚನೆಗಳಂತೆ, ಕಾರ್ಡ್ ಮತ್ತು/ ಅಥವಾ APINನ ಯಾವುದೇ ಅಸಮರ್ಪಕ/ ಮೋಸದ/ ಅನಧಿಕೃತ/ ನಕಲಿ/ ತಪ್ಪಾದ ಬಳಕೆಯ ಸಂದರ್ಭದಲ್ಲಿ ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್ ಅನ್ನು ಹೊಣೆಗಾರರಾಗಿಸುವಂತಿಲ್ಲ, ಯಾವುದೇ ಮೂರನೇ ವ್ಯಕ್ತಿಯ ಕೈಗೆ ಕಾರ್ಡ್ ಸಿಗುವ ಅಥವಾ ಯಾವುದೇ ಮೂರನೇ ವ್ಯಕ್ತಿಗೆ APINತಿಳಿದ ಕಾರಣದಿಂದ ಮೂರನೇ ವ್ಯಕ್ತಿಯು ಕಾರ್ಡ್ ಬಳಸಿದ್ದಕ್ಕೆ/ ದುರುಪಯೋಗ ಪಡಿಸಿಕೊಂಡದ್ದಕ್ಕೆ ಸಂಬಂಧಿಸಿದ ಯಾವುದೇ ಪರಿಣಾಮಗಳಿಗೆ ಕೂಡ ಐಸಿಐಸಿಐ ಬ್ಯಾಂಕ್ ಹೊಣೆಗಾರರಾಗಿರುವುದಿಲ್ಲ, ಐಸಿಐಸಿಐ ಬ್ಯಾಂಕ್ ಯಾವುದೇ ಮೂರನೇ ವ್ಯಕ್ತಿಯ ಕಾರ್ಡ್ ಬಳಕೆ/

ದುರುಪಯೋಗಕ್ಕೆ ಸಂಬಂಧಿಸಿದ ಯಾವುದೇ ಪರಿಣಾಮಗಳಿಗೆ ಹೊಣೆಗಾರರಾಗಿರುವುದಿಲ್ಲ, ಕಾರ್ಡ್ ಖಾತೆ ಸೇರಿದಂತೆ ಯಾವುದೇ ಮೂರನೇ ವ್ಯಕ್ತಿಯು ಸೇವೆಗಳಿಗೆ ಪ್ರವೇಶಾವಕಾಶವನ್ನು ಪಡೆದರೆ, ಅಂತಹ ದುರುಪಯೋಗದಿಂದ/ ಅಂತಹ ಪ್ರವೇಶಗಳು ಹಾಗೂ ಬಳಕೆಯ ಆಧಾರದ ಮೇಲೆ ಅಥವಾ ಸಂಬಂಧಪಟ್ಟಂತೆ ಮೂರನೇ ವ್ಯಕ್ತಿಗಳ ಬಳಕೆ, ಅಥವಾ ಅನ್ಯಥಾ ಉಂಟಾಗುವ ಯಾವುದೇ ಹೊಣೆಗಾರಿಕೆ ,ವೆಚ್ಚಗಳು ಅಥವಾ ನಷ್ಟಗಳಿಗೆ ಕಾರ್ಡ್ ಸದಸ್ಯನು ಜವಾಬ್ದಾರನಾಗಿರುತ್ತಾನೆ ಮತು ಐಸಿಐಸಿಐ ಬ್ಯಾಂಕ್‌ಗೆ ಸದಸ್ಯನೇ ನಷ್ಟುವನ್ನು ಭರಿಸಬೇಕು. Visa mCheck ಕ್ರೆಡಿಟ್ ಕಾರ್ಡ್ ಹೊಂದಿರುವವರಿಗೆ ಪಿನ್ ನೀಡಲಾಗುವುದಿಲ್ಲ,

ಕ್ರೆಡಿಟ್ ಕಾರ್ಡ್ ಸದಸ್ಯರಿಗೆ APINಅನ್ನು ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್‌ಎಮ್‌ಎಸ್ ಮೂಲಕ ಕಳುಹಿಸಲಾಗುತ್ತದೆ.

ಮೊಬೈಲ್ ಸಂಖ್ಯೆಯನ್ನು ನೋಂದಾಯಿಸದಿದ್ದಲ್ಲಿ, APINಅನ್ನು ಪ್ರತ್ಯೇಕವಾಗಿ ಮೇಲಿಂಗ್ ವಿಳಾಸಕ್ಕೆ ಕಳುಹಿಸಲಾಗುತ್ತದೆ. APINತಲುಪದಿದ್ದಲ್ಲಿ, ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್ ಕಸ್ಟಮರ್ ಕೇರ್‌ಗೆ ಕರೆ ಮಾಡುವ ಮೂಲಕ ಅಥವಾ ಇಂಟರ್ನೆಟ್ ಬ್ಯಾಂಕಿಂಗ್/ ಐಮೊಬೈಲ್ ಮೂಲಕ ಇಂಟರಾಕ್ಟಿವ್ ವಾಯ್ಸ್ ರೆಸ್ಪಾನ್ಸ್ ಸಿಸ್ಟಂ (ಐವಿಆರ್) ನಲ್ಲಿ ಅದನ್ನು ರಚಿಸಿಕೊಳ್ಳಬಹುದು. ಕಾರ್ಡ್ ಸದಸ್ಯರು ತಪ್ಪಾದ ನೋಂದಾಯಿತ ಮೊಬೈಲ್ ಸಂಖ್ಯೆಯನ್ನು ನೀಡಿದಲ್ಲಿ ಐಸಿಐಸಿಐ ಬ್ಯಾಂಕ್ ಜವಾಬ್ದಾರವಾಗಿರುವುದಿಲ್ಲ,

## VI. ಉಲ್ಲಂಘನೆ ಹಾಗೂ ಮುಕ್ತಾಯ / ಹಿಂಪಡೆಯುವಿಕೆ

(ಎ) ಉಲ್ಲಂಘನೆ: ಯಾವುದೇ ಕಾರ್ಡ್ ಸದಸ್ಯರು ಈ ಯಾವುದೇ ನಿಯಮಗಳು ಹಾಗೂ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ;(ಜಿ) ಈ ನಿಯಮಗಳು ಹಾಗೂ ನಿಬಂಧನೆಗಳ ಯಾವುದೇ ಇತರ ನಿಬಂಧನೆಗಳ ಹೊರತಾಗಿಯೂ, ಅಂತಹ ಉಲ್ಲಂಘನೆಯಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಉಂಟಾಗುವ ಯಾವುದೇ ನಷ್ಟಕ್ಕೆ ಕಾರ್ಡ್ ಸದಸ್ಯರು ಹೊಣೆಗಾರರಾಗಿರುತ್ತಾರೆ; ಹಾಗೂ (ಜಿಜಿ) ಐಸಿಐಸಿಐ ಬ್ಯಾಂಕಿನ ಬೇಡಿಕೆಯ ಮೇರೆಗೆ, ಆ ದಿನಾಂಕದಂದು ಐಸಿಐಸಿಐ ಬ್ಯಾಂಕ್‌ಗೆ ಪಾವತಿಸಬೇಕಿದ್ದರೂ / ಇಲ್ಲದಿದ್ದರೂ, ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ಗೆ ಬಾಕಿ ಉಳಿಸಿಕೊಂಡಿರುವ ಎಲ್ಲಾ ಮೊತ್ತವನ್ನು ಪಾವತಿಸಲು ಕಾರ್ಡ್ ಸದಸ್ಯರು ಬದ್ಧರಾಗಿರುತ್ತಾರೆ. (ಬಿ) ಮುಕ್ತಾಯ / ಹಿಂಪಡೆಯುವಿಕೆ: ಕಾರ್ಡ್ ಸದಸ್ಯರು ಯಾವುದೇ ಸಮಯದಲ್ಲಿ, ಐಸಿಐಸಿಐ ಬ್ಯಾಂಕ್ ಲಿಮಿಟೆಡ್, ಐಸಿಐಸಿಐ ಫೋನ್ ಬ್ಯಾಂಕಿಂಗ್ ಸೆಂಟರ್, ಐಸಿಐಸಿಐ ಬ್ಯಾಂಕ್ ಟವರ್, 7 ನೇ ಮಹಡಿ, ಸರ್ವೆ ನಂ: 115/27, ಪ್ಲಾಟ್ ನಂ. 12, ನಾನಕ್ರಮಗುಡ, ಸೆರಿಲಿಂಗಂಪಲ್ಲಿ, ಹೈದರಾಬಾದ್ - 500032, ಭಾರತ, ಇಲ್ಲಿಗೆ ಲಿಖಿತ ನೋಟಿಸ್ ಮೂಲಕ ಕಾರ್ಡ್ ಖಾತೆಯನ್ನು ಮುಕ್ತಾಯಗೊಳಿಸಲು ವಿನಂತಿಯನ್ನು ಸಲ್ಲಿಸಬಹುದು.

(i) ಹೊಲೊಗ್ರಾಮ್ ಹಾಗೂ ಮ್ಯಾಗ್ನೆಟಿಕ್ ಸ್ಟ್ರಿಪ್ ಎರಡನ್ನೂ ಕತ್ತರಿಸಲಾಗಿದೆಯೆ ಎಂದು ಖಚಿತಪಡಿಸುವಂತೆ (ಆನ್‌ಲೈನ್ ಕ್ರೆಡಿಟ್ ಕಾರ್ಡ್ ಹಾಗೂ Visa mChek ಕ್ರೆಡಿಟ್ ಕಾರ್ಡ್ ಹೊರತುಪಡಿಸಿ) ಕಾರ್ಡಿನ ಮೇಲಿನ ಬಲ ಮೂಲೆಯನ್ನು ಕತ್ತರಿಸಿ ಕಾರ್ಡ್ ಅನ್ನು ವಿರೂಪಗೊಳಿಸಿದ ನಂತರ ಅದು ಐಸಿಐಸಿಐ ಬ್ಯಾಂಕ್‌ಗೆ ತಲುಪುವವರೆಗೆ ಮೇಲೆ ಹೇಳಿದ ಸೂಚನೆಯು ಅನ್ವಯವಾಗುವುದಿಲ್ಲ, ಮೇಲೆ ಹೇಳಿದಂತೆ ಮಾಡುವವರೆಗೆ, ಕಾರ್ಡ್ ಖಾತೆ ಅಥವಾ ಯಾವುದೇ ಕಾರ್ಡ್ ಮುಕ್ತಾಯಗೊಳ್ಳುವುದಿಲ್ಲ (ಜಿಜಿ) ಕಾರ್ಡ್ ಸದಸ್ಯರು ಕಾರ್ಡ್ ಅನ್ನು ನಾಶಪಡಿಸಿದ್ದಾರೆ ಎಂದು ಘೋಷಿಸಿದ್ದು ಆನಂತರ ಕಾರ್ಡ್‌ನಲ್ಲಿ ಶುಲ್ಕಗಳು ಉಂಟಾದರೆ , ಐಸಿಐಸಿಐ ಬ್ಯಾಂಕ್‌ಗೆ ಕಾರ್ಡ್ ತಲುಪದಿದ್ದಲ್ಲಿ ಅದು ದುರುಪಯೋಗದ ಫಲಿತಾಂಶವೇ ಆದರೂ ಅಥವಾ ಐಸಿಐಸಿಐ ಬ್ಯಾಂಕ್‌ಗೆ ಕಾರ್ಡ್ ನಾಶವಾದ ಬಗ್ಗೆ ತಿಳಿಸಲಾಗಿದ್ದರೂ ಸಹ ಕಾರ್ಡ್‌ನ ಮೇಲಿನ ಶುಲ್ಕಗಳಿಗೆ ಕಾರ್ಡ್ ಸದಸ್ಯರು ಸಂಪೂರ್ಣ ಹೊಣೆಗಾರರಾಗಿರುತ್ತಾರೆ

(iii) ಯಾವುದೇ ಸಮಯದಲ್ಲಿ ಐಸಿಐಸಿಐ ಬ್ಯಾಂಕ್ ಸೂಚನೆಯೊಂದಿಗೆ ಅಥವಾ ಸೂಚನೆ ಇಲ್ಲದೆ, ಐಸಿಐಸಿಐ ಬ್ಯಾಂಕ್‌ನ ಸಂಪೂರ್ಣ ವಿವೇಚನೆಗೆ ಅಗತ್ಯವಿರುವಂತೆ, ಕಾರ್ಡ್ ಖಾತೆ ಹಾಗೂ ಕಾರ್ಡ್ ಅನ್ನು ಮುಕ್ತಾಯಗೊಳಿಸಬಹುದು. ಈ ನಿಯಮಗಳು ಹಾಗೂ ನಿಬಂಧನೆಗಳ ಅಡಿಯಲ್ಲಿ ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕಿನಲ್ಲಿ ಎರಡು ಅಥವಾ ಹೆಚ್ಚಿನ ಕಾರ್ಡ್ ಖಾತೆಯನ್ನು ಹೊಂದಿದ್ದರೆ, ಹಾಗೂ ಐಸಿಐಸಿಐ ಬ್ಯಾಂಕಿನ ಯಾವುದಾದರೊಂದು ಕಾರ್ಡ್ ಖಾತೆಯ ಅಡಿಯಲ್ಲಿ ಪಾವತಿ ಮಾಡಲು ತಪ್ಪಿದಲ್ಲಿ, ಸದಸ್ಯರಿಂದ ಡೀಫಾಲ್ಟ್ ಕಾರ್ಡ್ ಖಾತೆಯನ್ನು ಕ್ರಮಬದ್ಧಗೊಳಿಸುವವರೆಗೆ, ಐಸಿಐಸಿಐ ಬ್ಯಾಂಕ್, ಕಾರ್ಡ್ ಸದಸ್ಯರಿಗೆ ಐಸಿಐಸಿಐ ಬ್ಯಾಂಕ್‌ನ ಇತರ ಎಲ್ಲಾ ಕಾರ್ಡ್ ಖಾತೆಗಳ ಅಡಿಯಲ್ಲಿ ನೀಡಿರುವ ಕ್ರೆಡಿಟ್ ಮಿತಿಯನ್ನು ನಿರ್ಬಂಧಿಸಲು, ಹಾಗೂ ಅಂತಹ ಎಲ್ಲಾ ಕಾರ್ಡ್ ಖಾತೆ / ಗಳ ಅಡಿಯಲ್ಲಿ ಲಭ್ಯವಿರುವಂತಹ ಸವಲತ್ತುಗಳನ್ನು / ಪ್ರಯೋಜನಗಳನ್ನು ಹಿಂಪಡೆಯಲು ಅಧಿಕಾರವಿದೆ ಎಂದು ಕಾರ್ಡ್ ಸದಸ್ಯರು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಾರೆ ಹಾಗೂ ಸ್ವೀಕರಿಸುತ್ತಾರೆ . ಮೇಲಿನ ಯಾವುದೇ ವಿಷಯಕ್ಕೆ ಐಸಿಐಸಿಐ ಬ್ಯಾಂಕ್ ಹೆಚ್ಚುವರಿ ಸೂಚನೆಯನ್ನು ನೀಡುವ ಅಗತ್ಯವಿಲ್ಲ ಎಂದು ಸಹ ಕಾರ್ಡ್ ಸದಸ್ಯರು ಒಪ್ಪುತ್ತಾರೆ ಹಾಗೂ ಅಂಗೀಕರಿಸುತ್ತಾರೆ.

(iv) ಕಾರ್ಡ್ ಖಾತೆಯ ಮುಕ್ತಾಯ ಮಾಡಿದ ನಂತರ ಹಾಗೂ ಐಸಿಐಸಿಐ ಬ್ಯಾಂಕ್ ಹಾಗೂ ಕಾರ್ಡ್ ಸದಸ್ಯರ ನಡುವಿನ ಯಾವುದೇ ಪೂರ್ವ ಒಪ್ಪಂದದ ಹೊರತಾಗಿಯೂ: (ಎ) ಹೇಳಿಕೆಯಲ್ಲಿ ಈಗಾಗಲೇ ಪ್ರತಿಬಿಂಬಿತವಾಗಿರುವ ಹಾಗೂ ಪ್ರತಿಬಿಂಬಿತವಾಗದಿರುವ, ಪ್ರಸ್ತುತ ಬಾಕಿ ಇರುವ ಒಟ್ಟು ಶುಲ್ಕಗಳು ಹಾಗೂ (ಬಿ) ಮುಕ್ತಾಯದ ನಂತರ ಉಂಟಾದ ಯಾವುದೇ ಸ್ವಯಂಚಾಲಿತ ಶುಲ್ಕಗಳ ಮೊತ್ತ (ಸಂಬಂಧಿತ ವಹಿವಾಟು ಸೂಚನೆಯ ದಿನಾಂಕದಿಂದ ಅನ್ವಯವಾಗುವಂತೆ), ಶುಲ್ಕಗಳನ್ನು ವಿಧಿಸಿದ ದಿನಾಂಕದಿಂದ ಪ್ರತಿಬಿಂಬಿತವಾದ ಬಾಕಿಗಳು ಹಾಗೂ ಕಾಲಕಾಲಕ್ಕೆ ಅನ್ವಯವಾಗುವಂತಹ ಬಡ್ಡಿಯನ್ನು ಸೇರಿಸಿ ಕಾರ್ಡ್ ಸದಸ್ಯರು ಪಾವತಿಸಬೇಕು,.

(v) ಐಸಿಐಸಿಐ ಬ್ಯಾಂಕ್, ತನ್ನ ವಿವೇಚನೆಯಿಂದ, ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ, ಯಾವುದೇ ಸೂಚನೆಯಿಲ್ಲದೆ ಅಥವಾ ಯಾವುದೇ ಕಾರಣವನ್ನು ನೀಡದೆ ಯಾವುದೇ ಸಮಯದಲ್ಲಿ ಕಾರ್ಡ್ ಮೇಲಿನ ಸವಲತ್ತುಗಳನ್ನು ಹಿಂಪಡೆಯುವ ಮತ್ತು/ಅಥವಾ ಕಾರ್ಡ್ ರದ್ದುಗೊಳಿಸುವ ಹಕ್ಕನ್ನು ಹೊಂದಿರುತ್ತದೆ. ತಾತ್ಕಾಲಿಕವಾಗಿ ಹಿಂಪಡೆದ ಸಂದರ್ಭದಲ್ಲಿ, ಐಸಿಐಸಿಐ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಸವಲತ್ತುಗಳನ್ನು ಮರುಸ್ಥಾಪಿಸಬಹುದು. ಶಾಶ್ವತವಾಗಿ ಹಿಂಪಡೆಯುವ ಸಂದರ್ಭದಲ್ಲಿ, ಐಸಿಐಸಿಐ ಬ್ಯಾಂಕ್ ಕಾರ್ಡ್ ಸದಸ್ಯರಿಗೆ ಸದಸ್ಯತ್ವವನ್ನು ಶಾಶ್ವತವಾಗಿ ನಿರಾಕರಿಸುವ ಹಕ್ಕನ್ನು ಹೊಂದಿದೆ. ಆದಾಗ್ಯೂ, ಹಿಂಪಡೆಯುವಿಕೆಯು (ತಾತ್ಕಾಲಿಕ ಅಥವಾ ಶಾಶ್ವತ) ಕಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಸಹಾಯಕ ಪ್ರಯೋಜನಗಳು, ಸವಲತ್ತುಗಳು ಹಾಗೂ ಸೇವೆಗಳನ್ನು ಸ್ವಯಂಚಾಲಿತವಾಗಿ ಹಿಂತೆಗೆದುಕೊಳ್ಳುತ್ತದೆ ಎಂದು ಸ್ಫುಟವಾಗಿ ಸ್ಪಷ್ಟಪಡಿಸಲಾಗಿದೆ. ಅಂತಹ ತಾತ್ಕಾಲಿಕ ಅಥವಾ ಶಾಶ್ವತ ಹಿಂಪಡೆಯುವಿಕೆಯ ಸಂದರ್ಭದಲ್ಲಿ, ಐಸಿಐಸಿಐ ಬ್ಯಾಂಕ್ ನಿಗದಿಪಡಿಸದ ಹೊರತು, ಅಂತಹ ವಾಪಸಾತಿಗೆ ಮುಂಚಿತವಾಗಿ ಕಾರ್ಡ್‌ನಲ್ಲಿರುವ ಎಲ್ಲಾ ಶುಲ್ಕಗಳಿಗೆ  ಹಾಗೂ ಅದಕ್ಕೆ ಅನ್ವಯವಾಗುವ ಇತರ ಎಲ್ಲಾ ಶುಲ್ಕಗಳಿಗೆ ಕಾರ್ಡ್ ಸದಸ್ಯರು ಸಂಪೂರ್ಣ ಹೊಣೆಗಾರರಾಗಿ ಮುಂದುವರಿಯುತ್ತಾರೆ. ಕಾರ್ಡ್ ಖಾತೆಯಲ್ಲಿನ ಕೆತ್ತಿದ ಮಾನ್ಯತೆಯ ಅವಧಿಯನ್ನು ಉಲ್ಲೇಖಿಸದೆ ಯಾವುದೇ ಸಮಯದಲ್ಲಿ ಕಾರ್ಡ್ ಅನ್ನು ಹಿಂಪಡೆಯಬಹುದು ಹಾಗೂ ಕಾರ್ಡ್ ಖಾತೆಯನ್ನು ಮುಚ್ಚಬಹುದು. ಕಾರ್ಡ್ ಸಲ್ಲಿಸಲು ಮನವಿ ಮಾಡಿದ ಸಂದರ್ಭದಲ್ಲಿ ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್ ಅಥವಾ ಅದರ ಪ್ರತಿನಿಧಿಗೆ ಕಾರ್ಡ್ ಅನ್ನು ಒಪ್ಪಿಸಲು ಅಂಗೀಕರಿಸುತ್ತಾರೆ. ಅದರ ಸವಲತ್ತುಗಳನ್ನು ಹಿಂತೆಗೆದುಕೊಳ್ಳುವ ಸೂಚನೆಯ ನಂತರ ಕಾರ್ಡ್ ಅನ್ನು ಬಳಸುವುದು ವಂಚನೆಯಾಗಿರುತ್ತದೆ ಹಾಗೂ ಕಾರ್ಡ್ ಸದಸ್ಯರನ್ನು ಕಾನೂನು ಪ್ರಕ್ರಿಯೆಗೆ ಒಳಪಡಿಸುತ್ತದೆ.

## VII. ಶುಲ್ಕಗಳು ಹಾಗೂ ಪಾವತಿಗಳು

ಶುಲ್ಕಗಳಲ್ಲಿ ಈ ಕೆಳಗಿನವುಗಳು ಸೇರಿವೆ:

(ಎ) ಐಚ್ಛಿಕ ಶುಲ್ಕಗಳಲ್ಲಿ ಇವುಗಳು ಸೇರಿವೆ: ವಹಿವಾಟು ಸೂಚನೆಯಂತೆ ಮಾಡಿದ ಯಾವುದೇ ಸರಕು ಹಾಗೂ / ಅಥವಾ ಸೇವೆಯ ಖರೀದಿಯ ಮೊತ್ತ; ವಹಿವಾಟಿನ ಸೂಚನೆಯಂತೆ ಒದಗಿಸಲಾದ ಯಾವುದೇ ನಗದು ಮುಂಗಡದ ಮೊತ್ತ; ವಹಿವಾಟು ಸೂಚನೆಯ ಮೂಲಕ ಕಾರ್ಡ್ ಖಾತೆಯನ್ನು ಡೆಬಿಟ್ ಮಾಡಲು ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ಗೆ ವಿನಂತಿಸಿದ ಯಾವುದೇ ಮೊತ್ತ

(ಬಿ) ಅನೈಚ್ಛಿಕ ಶುಲ್ಕಗಳು: ಸೇರ್ಪಡೆ, ವಾರ್ಷಿಕ, ಬದಲಿ, ನವೀಕರಣ, ನಿರ್ವಹಣೆ, ವಿಳಂಬ ಪಾವತಿ ಹಾಗೂ ಇತರ ಶುಲ್ಕಗಳು ಸೇರಿದಂತೆ ಕಾರ್ಡ್ ಖಾತೆ ಅಥವಾ ಕಾರ್ಡ್‌ಗೆ ಸಂಬಂಧಿಸಿದಂತೆ ಐಸಿಐಸಿಐ ಬ್ಯಾಂಕ್ ವಿಧಿಸುವ ಯಾವುದೇ ಶುಲ್ಕಗಳನ್ನು ಒಳಗೊಂಡಿವೆ. ಐಸಿಐಸಿಐ ಬ್ಯಾಂಕಿನ ಚಾಲ್ತಿಯಲ್ಲಿರುವ ದರದಲ್ಲಿ ಸೇರ್ಪಡೆ / ವಾರ್ಷಿಕ ಶುಲ್ಕವನ್ನು ಕಾರ್ಡ್ ಖಾತೆಯಿಂದ ಡೆಬಿಟ್ ಮಾಡಲಾಗುತ್ತದೆ. ಈ ಶುಲ್ಕಗಳನ್ನು

ಮರುಪಾವತಿಸಲಾಗುವುದಿಲ್ಲ, ಕಾರ್ಡ್ ಸದಸ್ಯರು, ಸದಸ್ಯತ್ವದ ನವೀಕರಣದ ವಾರ್ಷಿಕ ಶುಲ್ಕವನ್ನು ಕಾರ್ಡ್‌ನ ಪ್ರಥಮ ವಾರ್ಷಿಕೋತ್ಸವದ ದಿನದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಪಾವತಿಸಬೇಕು. ಐಸಿಐಸಿಐ ಬ್ಯಾಂಕ್ ಕಾಲಕಾಲಕ್ಕೆ ನಿರ್ಧರಿಸಿದ ನಿರ್ದಿಷ್ಟ ರೀತಿಯ ವಹಿವಾಟುಗಳ ಸೇವಾ ಶುಲ್ಕವನ್ನು ವಿಧಿಸಬಹುದು. ಅನೈಚ್ಛಿಕ ಶುಲ್ಕಗಳ ಲೆಕ್ಕಾಚಾರದ ವಿಧಾನವು ಕಾಲಕಾಲಕ್ಕೆ ಐಸಿಐಸಿಐ ಬ್ಯಾಂಕ್ ಸೂಚನೆಯ ಅನುಸಾರ ಇರುತ್ತದೆ.

(ಸಿ) ಸ್ಪಷ್ಟ ದೋಷದ ಅನುಪಸ್ಥಿತಿಯಲ್ಲಿ, ಐಸಿಐಸಿಐ ಬ್ಯಾಂಕಿನ ಮೇಲೆ ಹೇಳಿದ ಯಾವುದೇ ಶುಲ್ಕದ ಮೊತ್ತದ ದಾಖಲೆಯು ಎಲ್ಲಾ ಶಾಸನಬದ್ಧ ತೆರಿಗೆಗಳು, ಜಿಎಸ್‌ಟಿ, ಎಲ್ಲಾ ಇತರ ವಿಧಿಸುವಿಕೆಗಳು, ಸುಂಕಗಳು (ಸ್ಟಾಂಪ್ ಡ್ಯೂಟಿ ಹಾಗೂ ಸಂಬಂಧಿತ ನೋಂದಣಿ ಶುಲ್ಕಗಳು, ಕಾರ್ಡ್‌ಗೆ ಸಂಬಂಧಿಸಿದಂತೆ ಯಾವುದಾದರೂ ಇದ್ದಲ್ಲಿ) ಹಾಗೂ ತೆರಿಗೆಗಳು (ಯಾವುದೇ ವಿವರಣೆಯ) ಕಾರ್ಡ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸರ್ಕಾರ ಅಥವಾ ಯಾವುದೇ ಇತರ ಅಧಿಕೃತರಿಂದ ವಿಧಿಸಬಹುದಾದ ಯಾವುದೇ ಶುಲ್ಕಗಳು ಕಾರ್ಡ್ ಸದಸ್ಯರ ಮೇಲೆ ಅಂತಿಮ ಹಾಗೂ ಬದ್ಧವಾಗಿರುತ್ತದೆ ಹಾಗೂ ಐಸಿಐಸಿಐ ಬ್ಯಾಂಕ್ ಐಚ್ಛಿಕ ಶುಲ್ಕಕ್ಕೆ ಅನುಗುಣವಾಗಿ ಮಾಡಿದ ಯಾವುದೇ ಪಾವತಿಯ ಮೇಲೆ ಯಾವುದೇ ಸಂದರ್ಭದಲ್ಲಿಯೂ ನಿರ್ಣಾಯಕವಾಗಿರುತ್ತದೆ.

(ಡಿ) ವಿಳಂಬ ಅಥವಾ ತಿದ್ದುಪಡಿ ಶುಲ್ಕಗಳು

ಎ) ಹೋಟೆಲ್, ಕಾರು ಬಾಡಿಗೆ ಕಂಪನಿ, ಅಥವಾ ಕ್ರೂಸ್ ಲೈನ್ ವಹಿವಾಟು ಅಥವಾ ಯಾವುದೇ ಇತರ ವಹಿವಾಟುಗಳಿಗೆ ವಿಳಂಬ ಅಥವಾ ತಿದ್ದುಪಡಿ ಮಾಡಿದ ಶುಲ್ಕಗಳಿಗೆ ಕಾರ್ಡ್ ಸದಸ್ಯರು ಒಪ್ಪಿಗೆ ನೀಡಿದ್ದಲ್ಲಿ ವ್ಯಾಪಾರಿಯು ವಿಳಂಬ ಅಥವಾ ತಿದ್ದುಪಡಿ ಮಾಡಿದ ಶುಲ್ಕವನ್ನು ಪ್ರಕ್ರಿಯೆಗೊಳಿಸಬಹುದು.

ಬಿ) ಸಂಬಂಧಿತ ವಹಿವಾಟಿನ ವಿಳಂಬದ ಅಥವಾ ತಿದ್ದುಪಡಿ ಮಾಡಿದ ಶುಲ್ಕವನ್ನು ವಹಿವಾಟು ದಿನಾಂಕದ 90 ಕ್ಯಾಲೆಂಡರ್ ದಿನಗಳಲ್ಲಿ ಕಾರ್ಡ್ ಖಾತೆಗೆ ಪ್ರಕ್ರಿಯೆಗೊಳಿಸಲಾಗುತ್ತದೆ.

ಸಿ) ಈ ವಹಿವಾಟುಗಳು ಕೊಠಡಿ, ಆಹಾರ ಅಥವಾ ಪಾನೀಯ ಶುಲ್ಕಗಳು, ತೆರಿಗೆಗಳು, ಇಂಧನ, ವಿಮೆ, ಬಾಡಿಗೆ ಶುಲ್ಕಗಳು, ಬಾಡಿಗೆ ವಾಹನಗಳಿಗೆ ಹಾನಿ, ಪಾರ್ಕಿಂಗ್ ಟಿಕೆಟ್‌ಗಳು ಹಾಗೂ ಇತರ ಸಂಚಾರ ಉಲ್ಲಂಘನೆಗಳು ಹಾಗೂ ಕ್ರೂಸ್ ಲೈನ್ ನೌಕೆಯಲ್ಲಿ ಸರಕು ಹಾಗೂ ಸೇವೆಗಳ ಖರೀದಿಗಳನ್ನು ಒಳಗೊಂಡಿರಬಹುದು.

(ಇ) ಅಂತಾರಾಷ್ಟ್ರೀಯವಾಗಿ ಮಾನ್ಯವಾಗಿರುವ ಕಾರ್ಡ್‌ಗಳನ್ನು ಹೊರತುಪಡಿಸಿ ಇತರ ಕಾರ್ಡುಗಳ ವಿದೇಶಿ ಕರೆನ್ಸಿಯಲ್ಲಿನ ಶುಲ್ಕಗಳಿಗೆ ಸಂಬಂಧಿಸಿದಂತೆ, ಐಸಿಐಸಿಐ ಬ್ಯಾಂಕ್ ನೇಪಾಳ ಹಾಗೂ ಭೂತಾನ್ ಹೊರತುಪಡಿಸಿ ಇತರ ಪ್ರದೇಶಗಳಲ್ಲಿ ವಿದೇಶಿ ಕರೆನ್ಸಿಯಲ್ಲಿ ವಿಧಿಸಲಾಗುವ ಯಾವುದೇ ಶುಲ್ಕಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ, ಮೇಲೆ ತಿಳಿಸಿದ ವಿಷಯಗಳಿಗೆ ಯಾವುದೇ ಪೂರ್ವಾಗ್ರಹವಿಲ್ಲದೆ, ಐಸಿಐಸಿಐ ಬ್ಯಾಂಕಿನಿಂದ ಮಾಡಲಾದ ಯಾವುದೇ ಶುಲ್ಕವನ್ನು ಪಾವತಿ ಮಾಡುವುದು ಕಾರ್ಡ್ ಸದಸ್ಯನಿಗೆ ಸಂಪೂರ್ಣ ಸಹಾಯವನ್ನು ನೀಡುತ್ತದೆ ಹಾಗೂ ಐಸಿಐಸಿಐನಿಂದ ಅಂತಹ ಶುಲ್ಕಗಳು ಅಥವಾ ಪಾವತಿಗಳಿಗೆ ಸಂಬಂಧಿಸಿದಂತೆ ಯಾವುದೇ ಹೊಣೆಗಾರಿಕೆಯಿಂದ ಕಾರ್ಡ್ ಸದಸ್ಯನನ್ನು ಮುಕ್ತಗೊಳಿಸುವುದನ್ನು ಪರಿಗಣಿಸಲಾಗುವುದಿಲ್ಲ, ಕಾರ್ಡ್ ಸದಸ್ಯರಿಂದ ಮಾಡಲಾದ ಅಂತಹ ಪಾವತಿಗಳ ಎಲ್ಲಾ ಪರಿಣಾಮಗಳ ಪ್ರತಿಯಾಗಿ ಐಸಿಐಸಿಐ ಬ್ಯಾಂಕ್ ಸಂಪೂರ್ಣ ನಷ್ಟವನ್ನು ಭರಿಸುತ್ತದೆ ನಿರುಪದ್ರವವಾಗಿರುತ್ತದೆ.

(ಎಫ್) ರೈಲ್ವೆಯೊಂದಿಗಿನ ವಹಿವಾಟುಗಳು:

ಕ್ರೆಡಿಟ್ ಕಾರ್ಡ್‌ನ ಮೂಲಕ ಟಿಕೆಟ್ ಬುಕ್ ಮಾಡಿದಲ್ಲಿ, ಕಾರ್ಡ್ ಸದಸ್ಯರು, ಅನ್ವಯವಾದಲ್ಲಿ ಯಾವುದೇ ಹೆಚ್ಚುವರಿ ಶುಲ್ಕಗಳಿಗೆ ಒಳಪಟ್ಟು ಟಿಕೆಟ್ ಖರೀದಿಗೆ ಪಾವತಿಸಬೇಕಾಗುತ್ತದೆ. ತದನಂತರ ರದ್ದಾದ ಯಾವುದೇ ಟಿಕೆಟ್‌ನ ಮೊತ್ತವನ್ನು ಅದರ ಕ್ರೆಡಿಟ್ ಐಸಿಐಸಿಐ ಬ್ಯಾಂಕ್‌ಗೆ ಬರುತ್ತಿದ್ದಂತೆ ಕೇವಲ ಕಾರ್ಡ್ ಖಾತೆಗೆ ಜಮಾ ಮಾಡಲಾಗುತ್ತದೆ (ರದ್ದತಿ ಶುಲ್ಕಗಳನ್ನು ಕಳೆದು).

ಆದಾಗ್ಯೂ, ಟಿಕೆಟ್ ರದ್ದಾದ ದಿನಾಂಕದಿಂದ 150 ದಿನಗಳ ಒಳಗೆ ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ಗೆ ಖರೀದಿಯ ದಿನಾಂಕ, ರದ್ದತಿಯ ದಿನಾಂಕಗಳನ್ನು ದೃಢೀಕರಿಸುವ ಪತ್ರ ಹಾಗೂ ಟಿಕೆಟ್ ಖರೀದಿಯ ಡೆಬಿಟ್ ಇರುವ ಹೇಳಿಕೆಯ ಪ್ರತಿಗಳ ಸಹಿತವಾಗಿ ಚಾರ್ಜ್ ಸ್ಲಿಪ್ ಅನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ ಕ್ರೆಡಿಟ್ ಅನ್ನು ಕಾರ್ಡ್ ಸದಸ್ಯರ ಕಾರ್ಡ್ ಖಾತೆಗೆ ಪೋಸ್ಟ್ ಮಾಡಲಾಗುತ್ತದೆ. ಅನ್ವಯವಾಗುವ ವಹಿವಾಟು ಶುಲ್ಕವನ್ನು ವಿಧಿಸಲಾಗುತ್ತದೆ.

(ಜಿ) ಇಂಧನ ಕೇಂದ್ರಗಳಲ್ಲಿನ ವಹಿವಾಟುಗಳು: ಕಾರ್ಡ್ ಸದಸ್ಯರು ಇಂಧನ ಶುಲ್ಕವನ್ನು ಪಾವತಿಸಲು ಕಾರ್ಡ್ ಅನ್ನು ಬಳಸಿದಾಗ, ಶುಲ್ಕಪಟ್ಟಿಯ ಅನುಬಂಧದಲ್ಲಿ ಉಲ್ಲೇಖಿಸಿದಂತೆ ಅವರಿಗೆ ವಹಿವಾಟು ಶುಲ್ಕವನ್ನು ವಿಧಿ ಸಲಾಗುತ್ತದೆ. ನಮ್ಮದಲ್ಲದ ಟರ್ಮಿನಲ್‌ಗಳು ಹಾಗೂ ಎಚ್‌ಪಿಸಿಎಲ್ ಏತರ ಮಳಿಗೆಗಳಲ್ಲಿನ ಇಂಧನ ಖರೀದಿಯಲ್ಲಿ, ಸರ್ಚಾರ್ಜ್ ರಿವರ್ಸಲ್ ಜಿಎಸ್‌ಟಿ ಯನ್ನು ಒಳಗೊಂಡಿರುವುದಿಲ್ಲ

(ಎಚ್)ಕ್ರೆಡಿಟ್ ಕಾರ್ಡ್ ಬಳಸಿ ಪಾವತಿ ಮಾಡಿದ ಕ್ಷಣದಿಂದಲೇ ಕಾರ್ಡ್ ಸದಸ್ಯರು ಹೊಣೆಗಾರರಾಗುತ್ತಾರೆ. ಪಾವತಿ ದಿನಾಂಕದಂದು ಯಾವುದೇ ಪಾವತಿಸದ ಬಾಕಿ (ಬಿಲ್ ಮಾಡಿದ ಅಥವಾ ಮಾಡಿಲ್ಲದ) ಇದ್ದರೆ, ಅಂತಹ ಬಾಕಿಗಳ ಮೇಲೆ ಶುಲ್ಕಪಟ್ಟಿಯ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದ ಶುಲ್ಕಗಳು ಅನ್ವಯವಾಗುತ್ತವೆ. ಶುಲ್ಕವನ್ನು ಸರಾಸರಿ ದೈನಂದಿನ ಶಿಲ್ಕಿನ ವಿಧಾನದಲ್ಲಿ ಲೆಕ್ಕಹಾಕಲಾಗುತ್ತದೆ ಹಾಗೂ ಈ ಕೆಳಗಿನ ಯಾವುದಾದರೊಂದು ದಿನಾಂಕದಿಂದ ವಿಧಿಸಲಾಗುತ್ತದೆ: ಶುಲ್ಕವು ಸರಕು ಅಥವಾ ಸೇವೆಗಳ ಖರೀದಿಗೆ ಸಂಬಂದಿಸಿದಲ್ಲಿ ಐಸಿಐಸಿಐ ಬ್ಯಾಂಕಿನ ದಾಖಲೆಗಳಲ್ಲಿ ಸೇರಿಸಲಾದ ದಿನಾಂಕದಿಂದ, ಶುಲ್ಕವು ನಗದು ಹಿಂಪಡೆಯುವಿಕೆಗೆ ಸಂಬಂಧಿಸಿದಲ್ಲಿ, ಅಂತಹ ಹಿಂಪಡೆಯುವಿಕೆಯ ದಿನಾಂಕದಿಂದ ಐಸಿಐಸಿಐ ಬ್ಯಾಂಕ್‌ಗೆ ಪಾವತಿಯಾಗುವ ದಿನಾಂಕದವರೆಗೆ.

(ಐ) ಕಾರ್ಡ್ ಸದಸ್ಯನ ಹೊಣೆಗಾರಿಕೆಗೆ ಯಾವುದೇ ಪೂರ್ವಾಗ್ರಹವಿಲ್ಲದೆ, ಹೇಳಿಕೆಯಲ್ಲಿ ತಿಳಿಸಿದಂತೆ ಪಾವತಿಯ ದಿನಾಂಕದಂದು ಅಥವಾ ಮುಂಚಿತವಾಗಿ ಎಲ್ಲಾ ಶುಲ್ಕಗಳನ್ನು ಪಾವತಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ, ಕಾರ್ಡ್‌ದಾರರು ಪಾವತಿಯ ದಿನಾಂಕದಂದು ಅಥವಾ ಮುಂಚಿತವಾಗಿ ಹೇಳಿಕೆಯಲ್ಲಿ ಸೂಚಿಸಲಾದ ಕನಿಷ್ಠ ಮೊತ್ತ (MAD) ವನ್ನು ಪಾವತಿಸುವ ಆಯ್ಕೆಯನ್ನು ಚಲಾಯಿಸಬಹುದು. MAD ಬಾಕಿ ಇರುವ ಒಟ್ಟು ಮೊತ್ತದ 5% ಅಥವಾ ಐಸಿಐಸಿಐ ಬ್ಯಾಂಕ್ ತನ್ನ ವಿವೇಚನೆಯಿಂದ ನಿರ್ಧರಿಸಬಹುದಾದಂತಹ ಮೊತ್ತವನ್ನು ಹೊಂದಿರುತ್ತದೆ. ಯಾವುದೇ ಮರುಪಾವತಿಯನ್ನು ಕಂತುಗಳ ಮೂಲಕ ಮಾಡುವ ಸಂದರ್ಭದಲ್ಲಿ, ಹೇಳಿಕೆಯ ಅವಧಿಯಲ್ಲಿ ಪಾವತಿಸಬೇಕಾದ ಕಂತು ಮೊತ್ತವನ್ನು ಕನಿಷ್ಠ ಮೊತ್ತಕ್ಕೆ ಸೇರಿಸಲಾಗುತ್ತದೆ. ಒಟ್ಟು ಬಾಕಿಯು ಕ್ರೆಡಿಟ್ ಅಥವಾ ನಗದು ಮಿತಿಗಿಂತ ಹೆಚ್ಚಿದ್ದರೆ, ಕ್ರೆಡಿಟ್ ಅಥವಾ ನಗದು ಮಿತಿಯನ್ನು ಮೀರಿದ ಮೊತ್ತವನ್ನು ಸಹ MAD ಗೆ ಸೇರಿಸಲಾಗುತ್ತದೆ.

ಬಾಕಿ ಇರುವ ಕನಿಷ್ಠ ಮೊತ್ತದಲ್ಲಿ ಹಿಂದಿನ ಹೇಳಿಕೆಗಳಲ್ಲಿ ಪಾವತಿಸಿರದ ಕನಿಷ್ಠ ಮೊತ್ತವನ್ನು ಕೂಡಾ ಒಳಗೊಂಡಿರುತ್ತದೆ. ಕೇವಲ MAD ಅನ್ನು ಮಾತ್ರ ಪಾವತಿಸಿದ ಸಂದರ್ಭಗಳಲ್ಲಿ, ಬಾಕಿ ಇರುವ ಒಟ್ಟು ಮೊತ್ತಕ್ಕೆ ವಹಿವಾಟಿನ ದಿನಾಂಕದಿಂದ ಬಡ್ಡಿಯನ್ನು ವಿಧಿಸಲಾಗುತ್ತದೆ. MAD ಅನ್ನು ಮಾತ್ರ ಪಾವತಿಸಲು ಅಂತಹ ಆಯ್ಕೆಯನ್ನು ಕಾರ್ಡ್ ಸದಸ್ಯರು ಬಳಸಿದರೆ, ಅದು ಹೆಚ್ಚುವರಿಯಾಗಿ ಈ ಕೆಳಗಿನ ವಿಶೇಷ ನಿಯಮಗಳು ಹಾಗೂ ನಿಬಂಧನೆಗಳಿಗೆ ಒಳಪಡುತ್ತದೆ:

ಎ) ಹೇಳಿಕೆಯನ್ನು ಪಡೆದ ನಂತರ, ಕಾರ್ಡ್‌ದಾರರು ಪಾವತಿಯನ್ನು ಐಸಿಐಸಿಐ ಬ್ಯಾಂಕ್‌ಗೆ ಈ ಕೆಳಗೆ ತಿಳಿಸಿದ ಯಾವುದೇ ವಿಧದಲ್ಲಿ, ಅಂದರೆ, ಇನ್‌ಫಿನಿಟಿ(ಅನಂತ) ಪಾವತಿ, ಚೆಕ್ ಪಾವತಿ, ಡ್ರಾಫ್ಟ್ ಪಾವತಿ, ನಗದು

ಪಾವತಿ, ಆಟೋ ಡೆಬಿಟ್ ಪಾವತಿ, RTGS ಪಾವತಿ, ಪಾವತಿಸಲು ಕ್ಲಿಕ್ ಮಾಡಿ ಅಥವಾ NEFT ಪಾವತಿ ಗಳ ಮೂಲಕ ಹೇಳಿಕೆಯಲ್ಲಿ ತಿಳಿಸಲಾಗಿರುವ ಒಟ್ಟು ಮೊತ್ತವನ್ನು ಅಥವಾ ಪಾವತಿಸಬೇಕಾದ ಕನಿಷ್ಠ ಮೊತ್ತಕ್ಕೆ (MAD) ಸಮನಾದ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ಪಾವತಿ ಮಾಡಬೇಕಾದ ದಿನಾಂಕದ ಒಳಗೆ ಪಾವತಿಸಬಹುದು.

ಬಿ) ಕಾರ್ಡ್ ಬಳಕೆಯಿಂದ ಉಂಟಾದ ಎಲ್ಲಾ ಶುಲ್ಕಗಳು (ಮೇಲಿನ ಷರತ್ತು H)ಅಡಿಯಲ್ಲಿ ತಿಳಿಸಿದ ರೀತಿಯಲ್ಲಿ ಸೇವಾ ಶುಲ್ಕವನ್ನು ಹೊಂದಿರುತ್ತವೆ.

ಸಿ) MAD ನಷ್ಟೇ ಅಥವಾ ಪಾವತಿಸಬೇಕಾದ ಒಟ್ಟು ಮೊತ್ತಕ್ಕಿಂತ ಕಡಿಮೆ ಮೊತ್ತವನ್ನು ಪಾವತಿ ಮಾಡಿದರೆ, ಖರೀದಿಯ ದಿನಾಂಕದಿಂದ ಬಾಕಿ ಉಳಿದಿರುವ ಮೊತ್ತ ಹಾಗೂ ನಂತರದ ಪಾವತಿಯವರೆಗೆ ಮಾಡುವ ಹೊಸ ಖರೀದಿಗಳ ಮೇಲೆ ಬಡ್ಡಿ ಹಾಗೂ ಸೇವಾ ಶುಲ್ಕಗಳನ್ನು ಅನ್ವಯಿಸಲಾಗುತ್ತದೆ. ಈ ಮೇಲೆ ಸೂಚಿಸಿರುವ ಶುಲ್ಕಗಳ ಜೊತೆಗೆ, ಪಾವತಿಸಬೇಕಾದ ಅಂತಿಮ ದಿನಾಂಕದೊಳಗೆ ಕನಿಷ್ಠ ಮೊತ್ತವನ್ನು (MAD) ಪಾವತಿಸದಿದ್ದರೆ ವಿಳಂಬ ಪಾವತಿ ಶುಲ್ಕಗಳು ಅನ್ವಯವಾಗುತ್ತವೆ. ಕಾರ್ಡ್‌ದಾರರಿಂದ ಐಸಿಐಸಿಐ ಬ್ಯಾಂಕ್‌ಗೆ ಪಾವತಿಸಲಾದ MAD ಅಥವಾ ಹೆಚ್ಚಿನ ಪಾವತಿಗೆ, ಪಾವತಿ ದಿನಾಂಕದ ನಂತರ ಯಾವುದೇ ಬಡ್ಡಿ ಬೀಳುವುದಿಲ್ಲ.

*ಐಸಿಐಸಿಐ ಬ್ಯಾಂಕ್, ತನ್ನ ಸ್ವಂತ ವಿವೇಚನೆಯಿಂದ, ಯಾವುದೇ ಸಮಯದಲ್ಲಿ, ಯಾವುದೇ ಮುನ್ಸೂಚನೆಯಿಲ್ಲದೆ, ಯಾವುದೇ ಕಾರ್ಡ್‌ದಾರರಿಗೆ ಸಂಬಂಧಿಸಿದಂತೆ, ಮೇಲಿನ ಷರತ್ತುಗಳಲ್ಲಿ ವಿವರಿಸಿದಂತೆ ಕೇವಲ MAD ಅನ್ನಷ್ಟೇ ಪಾವತಿಸುವ ಆಯ್ಕೆಯನ್ನು ಹಿಂಪಡೆಯಬಹುದು. ಐಸಿಐಸಿಐ ಬ್ಯಾಂಕ್ ಒಪ್ಪದ ಹೊರತು, ನಿರ್ದಿಷ್ಟ ಹೇಳಿಕೆಯಲ್ಲಿ ನಮೂದಿಸಿದ ಮೊತ್ತದ ಪ್ರತಿಯಾಗಿ ಕಾರ್ಡ್‌ದಾರರಿಂದ ಪಡೆದ ಯಾವುದೇ ಪಾವತಿಗಳನ್ನು, ಈ ಕೆಳಗಿನ ಆದೇಶದಲ್ಲಿ ಅಕ್ಟೋಬರ್ 20, 2008 ರಿಂದ ಅನ್ವಯವಾಗುವಂತೆ, ಅಂತಹ ಬಾಕಿಗೆ ಸರಿಹೊಂದಿಸಲಾಗುತ್ತದೆ:

1. ಎಲ್ಲಾ ತೆರಿಗೆಗಳು, ಶುಲ್ಕಗಳು, ಬಡ್ಡಿ ವೆಚ್ಚಗಳು, ಶುಲ್ಕಗಳು, ವೆಚ್ಚಗಳು;

2. ಕ್ರೆಡಿಟ್ ಕಾರ್ಡ್‌ಗಳ ಮೇಲಿನ ವೈಯಕ್ತಿಕ ಸಾಲಗಳಿಗೆ ಹಾಗೂ ಬಾಕಿ ವರ್ಗಾವಣೆ ಸೌಲಭ್ಯದ ಮೇಲೆ ಪಾವತಿಸಬೇಕಾದ ಕಂತುಗಳು;

3. ರಿಟೇಲ್ (ಚಿಲ್ಲರೆ) ಖರೀದಿಯ ಕಂತುಗಳ ಪಾವತಿ (ರಿಟೇಲ್ ಖರೀದಿಗಳ ಪಾವತಿಯನ್ನು ಕಂತುಗಳಾಗಿ ಪರಿವರ್ತಿಸಲಾದ ಸಂದರ್ಭಗಳಲ್ಲಿ);

4. ನಗದು ಹಿಂಪಡೆಯುವಿಕೆ ಹಾಗೂ ಫೋನ್ ಸೌಲಭ್ಯದ ಮೇಲೆ ಡ್ರಾಫ್ಟ್‌ಗಳ ಪಾವತಿ;

5. ಕಾರ್ಡ್‌ದಾರರು ಪಡೆದಿರಬಹುದಾದ ವಿವಿಧ ಬಾಕಿ ವರ್ಗಾವಣೆ ಸೌಲಭ್ಯಗಳ ಪಾವತಿ;

6. ರಿಟೇಲ್ ಖರೀದಿಗಳ ಪಾವತಿ.

ಮೇಲಿನ ಯಾವುದೇ ಅಂಶಗಳ ಹೊರತಾಗಿಯೂ: (i) ಐಸಿಐಸಿಐ ಬ್ಯಾಂಕ್, ತನ್ನ ವಿವೇಚನೆಯಿಂದ, ಸಂಬಂಧಿತ ದಾಖಲೆಗಳಲ್ಲಿ ನಿರ್ದಿಷ್ಟಪಡಿಸಿದ ಕ್ರಮದಲ್ಲಿ ಅಥವಾ ಐಸಿಐಸಿಐ ಬ್ಯಾಂಕಿನಿಂದ ಕಾರ್ಡ್ ಸದಸ್ಯರಿಂದ ಪಡೆದ ಇತರ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಕಾರ್ಡ್ ಸದಸ್ಯರಿಂದ ಪಾವತಿಸಬೇಕಾದ ಬಾಕಿಗೆ ಸೂಕ್ತವಾದ ಪಾವತಿಗಳನ್ನು ಸರಿಹೊಂದಿಸಬಹುದು. ; (ii) ಐಸಿಐಸಿಐ ಬ್ಯಾಂಕ್ ತನ್ನ ವಿವೇಚನೆಯಿಂದ ಸ್ವಾಧೀನ ಆದೇಶವನ್ನು ಮಾರ್ಪಡಿಸಬಹುದು. ಹೆಚ್ಚುವರಿ ಮೊತ್ತಗಳು, ಯಾವುದಾದರೂ ಇದ್ದಲ್ಲಿ, ಅಂತಹ ಸ್ವಾಧೀನಪಡಿಸಿಕೊಂಡ ನಂತರ ಉಳಿದಿರುವ ಮೊತ್ತವನ್ನು ಐಸಿಐಸಿಐ ಬ್ಯಾಂಕ್ ತಯಾರಿಸುವ ತಕ್ಷಣದ ಮುಂದಿನ ಹೇಳಿಕೆ / ಗಳಲ್ಲಿ ನಿರ್ದಿಷ್ಟಪಡಿಸಬೇಕಾದ ಮೊತ್ತಗಳ ವಿರುದ್ಧ ಸ್ವಾಧೀನಪಡಿಸಿಕೊಳ್ಳಬಹುದು. ಐಸಿಐಸಿಐ ಬ್ಯಾಂಕ್ ಕಾರ್ಡ್ ಖಾತೆಗೆ ಕ್ರೆಡಿಟ್-ಮಿತಿಯನ್ನು ನಿಗದಿಪಡಿಸುತ್ತದೆ, ಅದನ್ನು ಯಾವುದೇ ಸಮಯದಲ್ಲಿಯೂ ಮೀರುವಂತಿಲ್ಲ,

ಆದಾಗ್ಯೂ, ಒಟ್ಟು ಬಾಕಿಯು ಕ್ರೆಡಿಟ್-ಮಿತಿಯನ್ನು ಮೀರಿದರೆ, ಹೆಚ್ಚುವರಿ ಮೊತ್ತದ ಮೇಲೆ ಹೆಚ್ಚುವರಿ ಶುಲ್ಕವನ್ನು ವಿಧಿಸಲಾಗುತ್ತದೆ.

ಕಾರ್ಡ್ ಸದಸ್ಯನು ತನ್ನ ಸದಸ್ಯತ್ವದ 12 ತಿಂಗಳ ಪೂರ್ಣಗೊಂಡ ನಂತರ ಕ್ರೆಡಿಟ್ ಮಿತಿ ಹಾಗೂ / ಅಥವಾ ನಗದು ಮಿತಿಯನ್ನು (ಐಸಿಐಸಿಐ ಬ್ಯಾಂಕ್ ಒದಗಿಸಿದ್ದಲ್ಲಿ) ಪರಿಶೀಲನೆ / ವರ್ಧನೆ / ಇಳಿಕೆಗೆ ಅರ್ಜಿ ಸಲ್ಲಿಸಲು ಅರ್ಹನಾಗಿರುತ್ತಾನೆ.

ಪರಿಶೀಲನೆಗಳು, ಏನನ್ನಾದರೂ ಸಲ್ಲಿಸಿದ್ದಲ್ಲಿ, ನಂತರದ ಕ್ರೆಡಿಟ್ ಮಿತಿ ಹಾಗೂ / ಅಥವಾ ನಗದು ಮಿತಿಯ ಬದಲಾವಣೆಗಳು, ಐಸಿಐಸಿಐ ಬ್ಯಾಂಕಿನ ಸ್ವಂತ ವಿವೇಚನೆಗೆ ಒಳಪಟ್ಟಿರುತ್ತದೆ. ಐಸಿಐಸಿಐ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಕ್ರೆಡಿಟ್ ಮಿತಿ ಹಾಗೂ / ಅಥವಾ ಕಾರ್ಡ್‌ನಲ್ಲಿ ನಿಯೋಜಿಸಲಾದ ನಗದು ಮಿತಿಯನ್ನು

ಪರಿಶೀಲಿಸಲು (ವರ್ಧನೆ ಅಥವಾ ಕಡಿತ ಸೇರಿದಂತೆ) ಯಾವುದೇ ಸಮಯದಲ್ಲಿ ಹಾಗೂ ವರ್ಧನೆಗಳು ಮಾತ್ರ ಇದ್ದರೆ, ಕ್ರೆಡಿಟ್ ಮಿತಿ ಹಾಗೂ / ಅಥವಾ ನಗದು ಮಿತಿಗಳನ್ನು ಕಾರ್ಡ್ ಸದಸ್ಯರ ಒಪ್ಪಿಗೆಯೊಂದಿಗೆ ಐಸಿಐಸಿಐ ಬ್ಯಾಂಕ್ ಜಾರಿಗೊಳಿಸುತ್ತದೆ.

ಸೂಚನೆ: ಪಾವತಿಸಬೇಕಾದ ಒಟ್ಟು ಮೊತ್ತವನ್ನು ಪಾವತಿ ಮಾಡಬೇಕಾದ ದಿನಾಂಕ ಅಥವಾ ಅದಕ್ಕಿಂತ ಮೊದಲೇ ಐಸಿಐಸಿಐ ಬ್ಯಾಂಕ್ ಸ್ವೀಕರಿಸಿದಲ್ಲಿ, ಯಾವುದೇ ಸೇವಾ ಶುಲ್ಕವನ್ನು ವಿಧಿಸಲಾಗುವುದಿಲ್ಲ, ಆದಾಗ್ಯೂ, ಎಲ್ಲಾ ನಗದು ವಹಿವಾಟುಗಳು ಹಾಗೂ ಕರಡುಗಳು ವಹಿವಾಟಿನ ದಿನಾಂಕದಿಂದ ಐಸಿಐಸಿಐ ಬ್ಯಾಂಕ್‌ಗೆ ಪಾವತಿ ಆಗುವವರೆಗೆ ಚಾಲ್ತಿಯಲ್ಲಿರುವ ದರದಲ್ಲಿ ಸೇವಾ ಶುಲ್ಕವನ್ನು ಆಕರ್ಷಿಸುತ್ತವೆ.

(ಜೆ) ಐಸಿಐಸಿಐ ಬ್ಯಾಂಕ್‌ನಿಂದ ಕಾರ್ಡ್ ಸದಸ್ಯನು  ತನ್ನ ಕಾರ್ಡ್ ಖಾತೆಗೆ ಕ್ರೆಡಿಟ್ ಮಾಡುವ ಹಾಗೂ ಅದೇ ಹಣದಿಂದ ಕ್ರೆಡಿಟ್ ಕಾರ್ಡ್ ಪಾವತಿಗಳನ್ನು ಪರಿಣಾಮಕಾರಿಯಾಗುವಂತೆ ಮಾಡಲು ಕಾರ್ಡ್ ಸದಸ್ಯರು ನೀಡಿದ ಯಾವುದೇ ಸೂಚನೆಗಳನ್ನು ಪರಿಣಾಮಕಾರಿಯಾಗಿಸಲು ಐಸಿಐಸಿಐ ಬ್ಯಾಂಕ್ ಅರ್ಹವಾಗಿದೆ, ಆದರೆ ಬದ್ಧವಾಗಿರುವುದಿಲ್ಲ, ಕಾರ್ಡ್ ಖಾತೆಗೆ ಜಾರಿಯಾದ ಆದರೆ ಇನ್ನೂ ಶುಲ್ಕ ವಿಧಿಸದೇ ಇರುವ ಯಾವುದೇ ಬಾಕಿ ಉಳಿದಿರುವ ಕಾರ್ಡ್ ವಹಿವಾಟಿನ ಮೊತ್ತದ ಜೊತೆಗೆ ಕಾರ್ಡ್ ಖಾತೆಯಲ್ಲಿನ ಬಾಕಿ ಉಳಿದಿರುವ ಮೊತ್ತವನ್ನು ತಕ್ಷಣವೇ ಕಾರ್ಡ್ ಸದಸ್ಯರು, ಅವರ ಉತ್ತರಾಧಿಕಾರಿಗಳು, ನಾಮನಿರ್ದೇಶಿತರು, ಅವರ ಮರಣದ ಸಂದರ್ಭದಲ್ಲಿ ಅಥವಾ ದಿವಾಳಿಯಾದ ಅಥವಾ ಕಾರ್ಡ್ ಸದಸ್ಯರ ವ್ಯವಹಾರವು ಮುಚ್ಚಿಹೋದ ನಂತರ ಅವರ ಕಾನೂನು ಉತ್ತರಾಧಿಕಾರಿಗಳು (ಕ್ರೆಡಿಟ್ ಶೀಲ್ಡ್ ಲಾಭ★ ಹೊಂದಿಸಿದ ನಂತರ) ಸಂಪೂರ್ಣವಾಗಿ ಐಸಿಐಸಿಐ ಬ್ಯಾಂಕ್‌ಗೆ ಪಾವತಿಸಬೇಕು. ★ವಿವರಗಳಿಗಾಗಿ, ದಯವಿಟ್ಟು icicibank.com ಗೆ ಭೇಟಿ ನೀಡಿ

(ಕೆ) ಕಾರ್ಡ್ ಸದಸ್ಯನು ತಾನು ಯಾವುದೇ ಹಣವನ್ನು ಅದು ಬಾಕಿ ಇರುವ ದಿನಾಂಕಕ್ಕೆ ಮುಂಚಿತವಾಗಿ ಅಥವಾ ಬಾಕಿ ಎಂದು ಘೋಷಿಸಬಹುದಾದ ದಿನಾಂಕದಂದು ಪಾವತಿಸದಿದ್ದಲ್ಲಿ, ಸದಸ್ಯರು ಯಾವುದೇ ಹಣಕಾಸು / ಕ್ರೆಡಿಟ್ / ಇತರ ಸೌಲಭ್ಯವನ್ನು ಆನಂದಿಸುತ್ತಿರುವ ಐಸಿಐಸಿಐ ಬ್ಯಾಂಕಿನೊಂದಿಗಿನ ಒಪ್ಪಂದದ ಅಡಿಯಲ್ಲಿ ಬಾಕಿ ಉಳಿಸಿಕೊಂಡಲ್ಲಿ, ಐಸಿಐಸಿಐ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ, ಪೂರ್ವಾಗ್ರಹವಿಲ್ಲದೆ, ಈ ನಿಯಮಗಳು ಹಾಗೂ ಷರತ್ತುಗಳು ಹಾಗೂ / ಅಥವಾ ಅನ್ವಯವಾಗುವ ಕಾನೂನುಗಳಲ್ಲಿ ಲಭ್ಯವಿರುವ ತನ್ನ ಎಲ್ಲ ಹಕ್ಕುಗಳನ್ನು ಹಾಗೂ ಪರಿಹಾರಗಳನ್ನು ಚಲಾಯಿಸಬಹುದು ಎಂದು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಾನೆ.

(ಎಲ್) ಇದರಡಿಯಲ್ಲಿ ಐಸಿಐಸಿಐ ಬ್ಯಾಂಕಿನ ಇತರ ಹಕ್ಕುಗಳಿಗೆ ಯಾವುದೇ ಪೂರ್ವಾಗ್ರಹವಿಲ್ಲದೆ, ಪಾವತಿಯಲ್ಲಿ ವಿಳಂಬವಾದರೆ ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಅನ್ನು ಮಾನ್ಯಮಾಡದಂತೆ ವ್ಯಾಪಾರಿ ಸಂಸ್ಥೆಗಳಿಗೆ ಸೂಚಿಸುವ ಮೂಲಕ ಕ್ರೆಡಿಟ್ ಕಾರ್ಡ್ ಸವಲತ್ತುಗಳನ್ನು ಹಿಂಪಡೆಯುವ ಹಕ್ಕನ್ನು ಹೊಂದಿದೆ. ಕಾರ್ಡ್ ಸದಸ್ಯನು ತನ್ನ ಸ್ವಂತ ವಿವೇಚನೆಯಿಂದ, ಐಸಿಐಸಿಐ ಬ್ಯಾಂಕ್ ಅಥವಾ ಅದರ ನಿಯೋಜಿತ ಪ್ರತಿನಿಧಿಗಳು / ಏಜೆಂಟರು, ಯಾವುದೇ ಸಮಯದಲ್ಲಿ ಕಾರ್ಡ್‌ನ ಈ ಹಿಂದಿನ ಶುಲ್ಕಗಳ ಪಾವತಿಗಾಗಿ ಆತನನ್ನು ಅನುಸರಿಸಬಹುದು. ಕಾರ್ಡ್ ಸದಸ್ಯರು ಎಲ್ಲಾ ಬಾಕಿಗಳ ಸಂಗ್ರಹದ ಎಲ್ಲಾ ವೆಚ್ಚಗಳನ್ನು (ಕಾನೂನು ವೆಚ್ಚಗಳು ಸೇರಿದಂತೆ) ಹಾಗೂ ಕಾರ್ಡ್ ನವೀಕರಣ / ಬದಲಿಯ ಶುಲ್ಕಗಳು, ಹೇಳಿಕೆಯ ದ್ವಿಪ್ರತಿ / ಚಾರ್ಜ್-ಸ್ಲಿಪ್, ನಗದು ಮುಂಗಡಕ್ಕಾಗಿ ವಹಿವಾಟು ಶುಲ್ಕ, ಹೊರರಾಜ್ಯದ ಚೆಕ್‌ಗಳ ಸಂಗ್ರಹ ಶುಲ್ಕಗಳು, ಹಿಂತಿರುಗಿಸಿದ ಪಾವತಿಗಳು ಹಾಗೂ ವೆಚ್ಚಗಳಂತಹ ದಂಡ ಶುಲ್ಕಗಳು ಸೇರಿದಂತೆ ಸಂಬಂಧಿತ ಹಾಗೂ ಪ್ರಾಸಂಗಿಕ ವಿಷಯಗಳಿಗಾಗಿ ಐಸಿಐಸಿಐ ಬ್ಯಾಂಕ್‌ನಿಂದ ಉಂಟಾಗುವ ಎಲ್ಲಾ ಶುಲ್ಕಗಳು, ಹಾಗೂ ಕಾನೂನು ಕ್ರಮದ ಪ್ರಾರಂಭವಾದ ಸಂದರ್ಭದಲ್ಲಿ, ಎಲ್ಲಾ ಕಾನೂನು ವೆಚ್ಚಗಳು ಹಾಗೂ ಡಿಕ್ರೆಟಲ್ ಮೊತ್ತಗಳನ್ನು ಬಡ್ಡಿಯೊಂದಿಗೆ ಪಾವತಿಸಲು ಒಪ್ಪುತ್ತಾರೆ. ಎಲ್ಲಾ ಶುಲ್ಕಗಳ ವಿವರಗಳಿಗಾಗಿ ಶುಲ್ಕಪಟ್ಟಿ ಅನುಬಂಧವನ್ನು ನೋಡಿ.

(ಎಂ) ಒಂದು ವೇಳೆ ಕಾರ್ಡುದಾರ / ಕಾರ್ಡ್ ಸದಸ್ಯರು ಸೂಕ್ತವಾದ ಅಂತಿಮ ದಿನಾಂಕದೊಳಗೆ ತನ್ನ ಬಾಕಿ ಹಣವನ್ನು ಪಾವತಿಸದಿದ್ದರೆ, ಕಾರ್ಡುದಾರ / ಕಾರ್ಡ್ ಸದಸ್ಯರಿಂದ ಐಸಿಐಸಿಐ ಬ್ಯಾಂಕ್‌ಗೆ ಬಾಕಿ ಉಳಿದಿರುವ ಎಲ್ಲಾ ಕಾರ್ಡುದಾರ / ಕಾರ್ಡ್ ಸದಸ್ಯರ ಬಾಕಿಗಳು / ಸಂಪೂರ್ಣವಾಗಿ ಸೇರುವವರೆಗೆ ಕಾರ್ಡುದಾರ / ಕಾರ್ಡ್ ಸದಸ್ಯರಿಗೆ ಉದ್ಯೋಗದಾತರು ಪಾವತಿಸಬೇಕಾದ ಸಂಬಳ / ವೇತನದಿಂದ ಕಡಿತ / ಗಳನ್ನು ಮಾಡಿ ಅದನ್ನು ಐಸಿಐಸಿಐ ಬ್ಯಾಂಕ್‌ಗೆ ಪಾವತಿಸುವಂತೆ ನಿವೇದಿಸಲು ಐಸಿಐಸಿಐ ಬ್ಯಾಂಕಿನ ವಿವಿಧ ಹಕ್ಕುಗಳು ಹಾಗೂ ಪರಿಹಾರಗಳ ಜೊತೆಗೆ ಇಲ್ಲಿರುವ ಷರತ್ತುಗಳಲ್ಲಿ ಉಲ್ಲೇಖಿಸಲಾದಂತೆ, ಉದ್ಯೋಗದಾತರನ್ನು ಸಂಪರ್ಕಿಸಲು ಬದಲಾಯಿಸಲಾಗದ ಅರ್ಹತೆ ಹಾಗೂ ಅಧಿಕಾರವಿರುತ್ತದೆ. ಐಸಿಐಸಿಐ ಬ್ಯಾಂಕ್ ಕಾರ್ಡ್‌ದಾರರ / ಕಾರ್ಡ್ ಸದಸ್ಯರ ಉದ್ಯೋಗದಾತರಿಗೆ (ಹಾಗೂ ಸೂಚನೆ ನೀಡಬಹುದು) ಸೂಚಿಸಿದ ಮೊತ್ತ ಹಾಗೂ ಅವಧಿಯು ವರೆಗೆ ಕಡಿತಗಳನ್ನು ಮಾಡಬೇಕಾಗುತ್ತದೆ. ಕಾರ್ಡ್‌ದಾರರು / ಕಾರ್ಡ್ ಸದಸ್ಯರು ಅಂತಹ ಕಡಿತಗಳಿಗೆ ಯಾವುದೇ ಆಕ್ಷೇಪಣೆಗಳನ್ನು ಮಾಡುವಂತಿಲ್ಲ ಅಥವಾ ಎತ್ತುವಂತಿಲ್ಲ / ಸೃಷ್ಟಿಸುವಂತಿಲ್ಲ, ಕಾರ್ಡ್‌ದಾರರು / ಕಾರ್ಡ್ ಸದಸ್ಯರು ಹಾಗೂ / ಅಥವಾ ಕಾರ್ಡುದಾರರ / ಕಾರ್ಡ್ ಸದಸ್ಯರ ಉದ್ಯೋಗದಾತರಿಂದ

ಐಸಿಐಸಿಐ ಬ್ಯಾಂಕಿಗೆ ಅಗತ್ಯವಿರುವ ಕಡಿತ ಹಾಗೂ ಪಾವತಿಗಳನ್ನು ಕಾರ್ಡುದಾರನ / ಕಾರ್ಡ್ ಸದಸ್ಯರ ಉದ್ಯೋಗದಾತರ ಯಾವುದೇ ಕಾನೂನು ಅಥವಾ ಒಪ್ಪಂದಗಳು ಯಾವುದೇ ರೀತಿಯಲ್ಲಿ ಐಸಿಐಸಿಐ ಬ್ಯಾಂಕಿನ ಮೇಲಿನ ಹಕ್ಕನ್ನು ತಡೆಯಲು ಅಥವಾ ನಿರ್ಬಂಧಿಸಲು ಸಾಧ್ಯವಿಲ್ಲ.

## VIII.ನಗದು ಹಣ ತೆಗೆದುಕೊಳ್ಳುವುದು

ಕಾರ್ಡ್ ಸದಸ್ಯರು, ಆಯ್ದ ಐಸಿಐಸಿಐ ಬ್ಯಾಂಕ್ ಪ್ರದೇಶಗಳ ಅಥವಾ ಐಸಿಐಸಿಐ ಬ್ಯಾಂಕ್ ಆಗ್ಗಿಂದಾಗ್ಗೆ ನಿರ್ಧರಿಸುವ ಪೂರಕ ಬ್ಯಾಂಕುಗಳು/ಇತರ ಪ್ರದೇಶಗಳು ಹಾಗೂ ಐಸಿಐಸಿಐ ಬ್ಯಾಂಕ್ ಕಾಲಕಾಲಕ್ಕೆ ತನ್ನ ಕಾರ್ಡ್ ಸದಸ್ಯರಿಗೆ ನಿರ್ದಿಷ್ಟಗೊಳಿಸುವ ಐಸಿಐಸಿಐ ಬ್ಯಾಂಕ್ ಶಾಖೆಗಳ ಟೆಲ್ಲರ್ ಕೌಂಟರ್‌ಗಳಿಂದ/ಸ್ವಯಂಚಾಲಿತ ಟೆಲ್ಲರ್ ಮೆಶೀನ್‌ಗಳಿಂದ(ಎಟಿಎಮ್) ತುರ್ತುಸ್ಥಿತಿ ನಗದು ಹಣಕ್ಕೆ ಪ್ರವೇಶಾವಕಾಶ ಪಡೆದುಕೊಳ್ಳಲು ಕಾರ್ಡನ್ನು ಬಳಸಬಹುದು. ಯಾವುದೇ ಸಮಯದಲ್ಲಾದರೂ, ಈ ಸೌಲಭ್ಯದಡಿ ತೆಗೆದುಕೊಳ್ಳಲಾಗುವ ಒಟ್ಟೂ ಮೊತ್ತವು, ಐಸಿಐಸಿಐ ಬ್ಯಾಂಕ್ ಪ್ರತಿಯೊಬ್ಬ ಕಾರ್ಡ್ ಸದಸ್ಯರಿಗೆ ನಿಗದಿಪಡಿಸಿರುವ ಲಭ್ಯವಿರುವ ನಗದುಹಣ ಮಿತಿಯನ್ನು ಮೀರಬಾರದು.

ಎಟಿಎಮ್ ನೀಡುವ ವ್ಯವಹಾರದ ದಾಖಲೆಯನ್ನು ಕಾರ್ಡ್ ಸದಸ್ಯರು ತಮ್ಮೊಂದಿಗೆ ಇಟ್ಟುಕೊಂಡಿರಬೇಕು. ಎಲ್ಲಾ ವ್ಯವಹಾರಗಳ ಮೇಲೆ ವ್ಯವಹಾರ ಶುಲ್ಕ ವಿಧಿಸಲಾಗುತ್ತದೆ ಹಾಗೂ ತದನಂತರ ಅದನ್ನು ಕಾರ್ಡ್ ಸದಸ್ಯರ ಸ್ಟೇಟ್‌ಮೆಂಟ್‌ಗೆ ಬಿಲ್ ಮಾಡಲಾಗುತ್ತದೆ. ಇದಲ್ಲದೆ, ಎಲ್ಲಾ ನಗದುಹಣ ತೆಗೆದುಕೊಳ್ಳುವಿಕೆಗೂ, ಐಸಿಐಸಿಐ ಬ್ಯಾಂಕ್ ಸ್ವೀಕರಿಸಿರುವ ಪಾವತಿಯವರೆಗೆ, ಅಂತಹ ತೆಗೆದುಕೊಳ್ಳುವಿಕೆಯ ದಿನಾಂಕದಿಂದ, ಸರಾಸರಿ ದಿನನಿತ್ಯದ ಬಾಕಿ ಉಳಿಕೆ ವಿಧಾನದ ಆಧಾರದ ಮೇಲೆ ಲೆಕ್ಕಹಾಕಿದಂತೆ, ಸೇವಾಶುಲ್ಕ ವಿಧಿಸಲಾಗುತ್ತದೆ. ಸೇವಾಶುಲ್ಕಗಳನ್ನು ಕಾರ್ಡ್ ಖಾತೆಗೆ ಡೆಬಿಟ್ ಮಾಡಲಾಗುತ್ತದೆ.ಮೇಲೆ ತಿಳಿಸಲಾಗಿರುವ ವ್ಯವಹಾರ ಶುಲ್ಕ ಹಾಗೂ ಸೇವಾಶುಲ್ಕಗಳನ್ನು ಮರುಪಾವತಿ ಮಾಡಲಾಗುವುದಿಲ್ಲ. ಆಯ್ದ ಕಾರ್ಡ್‌ನ ಮೇಲಿನ ನಗದುಹಣ ಮಿತಿಯು, ಐಸಿಐಸಿಐ ಬ್ಯಾಂಕ್ ನಿರ್ದಿಷ್ಟಗೊಳಿಸಿದಂತೆ, ಕಾರ್ಡ್ ನೀಡಿದ ದಿನಾಂಕದಿಂದ ಮೊದಲ ಒಂದು ನೂರ ಎಂಭತ್ತು (180) ದಿನಗಳವರೆಗೆ ಶೂನ್ಯವಾಗಿರುತ್ತದೆ. ಮೊದಲ 180 ದಿನಗಳು ತೀರಿದ ನಂತರ, ನಗದುಹಣ ಮಿತಿಯು, ಐಸಿಐಸಿಐ ಬ್ಯಾಂಕ್‌ನ ಇಚ್ಛಾನುಸಾರ ಹಾಗೂ ಅದು ಕಾಲಕಾಲಕ್ಕೆ ಸೂಚನೆ ನೀಡುವ ಅಂತಹ ನಿಬಂಧನೆಗಳಿಗೆ ಒಳಪಟ್ಟು ಇರುತ್ತದೆ.

## IX. ಫೋನ್‌ನಲ್ಲಿ ಡ್ರಾಫ್ಟ್

ಐಸಿಐಸಿಐ ಬ್ಯಾಂಕ್ ಕಸ್ಟಮರ್ ಕೇರ್ ಕೇಂದ್ರದ ಮೂಲಕ ದೂರವಾಣಿಯಲ್ಲಿ ಕಾರ್ಡ್ ಖಾತೆಯ ಮೇಲೆ ಡ್ರಾಫ್ಟ್ ಪಡೆಯಲು ಕೋರಿಕೆ ಸಲ್ಲಿಸಬಹುದು. ಎಲ್ಲಾ ಡ್ರಾಫ್ಟ್‌ಗಳನ್ನು, ಲಭ್ಯವಿರುವ ನಗದುಹಣ ಮಿತಿಯನ್ನು ಮೀರದ ಮೊತ್ತಗಳಿಗೆ ಮಾತ್ರ ನೀಡಲಾಗುತ್ತದೆ ಹಾಗೂ ಎಲ್ಲಾ ಡ್ರಾಫ್ಟ್‌ಗಳ ಮೇಲೆ ವ್ಯವಹಾರ ಶುಲ್ಕ ವಿಧಿಸಲಾಗುತ್ತದೆ ಹಾಗೂ ಅದನ್ನು ಕಾರ್ಡ್ ಸದಸ್ಯರ ಸ್ಟೇಟ್‌ಮೆಂಟ್‌ಗೆ ಬಿಲ್ ಮಾಡಲಾಗುತ್ತದೆ. ವ್ಯವಹಾರ ಶುಲ್ಕದ ಜೊತೆಗೆ, ಎಲ್ಲಾ ಡ್ರಾಫ್ಟ್‌ಗಳ ಮೇಲೆ ಸೇವಾಶುಲ್ಕವನ್ನೂ ವಿಧಿಸಲಾಗುತ್ತದೆ ಹಾಗೂ ಅದನ್ನು ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ಗೆ ಅಂತಹ ಡ್ರಾಫ್ಟ್‌ಗಳನ್ನು ನೀಡಿದ ದಿನಾಂಕದಿಂದ ಮರುಪಾವತಿ ಮಾಡಬೇಕಾದ ದಿನಾಂಕದವರೆಗೆ ಕಟ್ಟಬೇಕಾಗುತ್ತದೆ. ಈ ಸೇವಾಶುಲ್ಕವನ್ನು ಐಸಿಐಸಿಐ ಬ್ಯಾಂಕ್‌ನ ಪ್ರಚಲಿತ ದರದಲ್ಲಿ ಕಾರ್ಡ್ ಖಾತೆಗೆ ಡೆಬಿಟ್ ಮಾಡಲಾಗುತ್ತದೆ.

ಮೇಲೆ ತಿಳಿಸಲಾದ ವ್ಯವಹಾರ ಶುಲ್ಕ ಹಾಗು ಸೇವಾಶುಲ್ಕಗಳನ್ನು ಮರುಪಾವತಿಸಲಾಗುವುದಿಲ್ಲ. ಯಾವುದೇ ಮುನ್ಸೂಚನೆ ನೀಡದೆ ಹಾಗೂ ಕಾರ್ಡ್ ಸದಸ್ಯರಿಗೆ ಯಾವುದೇ ಜವಾಬ್ದಾರಿಯಿಲ್ಲದೆ, ಯಾವುದೇ ಸಮಯದಲ್ಲಾದರೂ ಈ ಸೌಲಭ್ಯವನ್ನು ನಿಲ್ಲಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾದಿರಿಸುತ್ತದೆ. ಒಮ್ಮೆ ನೀಡಲಾದ ಡ್ರಾಫ್ಟ್‌ಅನ್ನು, ಐಸಿಐಸಿಐ ಬ್ಯಾಂಕ್‌ನ ದಾಖಲೆಗಳಲ್ಲಿ ದಾಖಲಿಸಲಾದ ಕಾರ್ಡ್ ಸದಸ್ಯರ ಕೊನೆಯ ಅಂಚೆವಿಳಾಸಕ್ಕೆ/ಮೇಲ್‌ಗೆ ಕಳುಹಿಸಲಾಗುತ್ತದೆ/ಕೊರಿಯರ್ ಮಾಡಲಾಗುತ್ತದೆ. ಐಸಿಐಸಿಐ ಬ್ಯಾಂಕ್-ಕಸ್ಟಮರ್ ಕೇರ್ ಸೆಂಟರ್‌ನಿಂದ ಸ್ವೀಕರಿಸಲಾದ ಕೋರಿಕೆಯ ಸಮಯದಿಂದ 4 ಕಾರ್ಯಸ್ಥ ದಿನಗಳೊಳಗೆ ಡ್ರಾಫ್ಟ್‌ಅನ್ನು ಕಳುಹಿಸಿಕೊಡಲು ಸಕಲ ಪ್ರಯತ್ನಗಳನ್ನು ಮಾಡಲಾಗುತ್ತದೆಯಾದರೂ, ಈ ಕುರಿತು ಯಾವುದೇ ಖಾತರಿಯನ್ನು ನೀಡಲಾಗುವುದಿಲ್ಲ. ಡ್ರಾಫ್ಟ್‌ಗಳು ಡೆಲಿವರಿಯಾಗದಿರುವುದಕ್ಕೆ, ಡೆಲಿವರಿಯಲ್ಲಿ ವಿಳಂಬವಾದುದಕ್ಕೆ ಅಥವಾ ಅಸ್ವೀಕೃತಿಗೆ ಐಸಿಐಸಿಐ ಬ್ಯಾಂಕ್ ಜವಾಬ್ದಾರಿ ವಹಿಸಿಕೊಳ್ಳುವುದಿಲ್ಲ. ಡ್ರಾಫ್ಟ್ ಕಳೆದುಹೋದರೆ ಅಥವಾ ಅದನ್ನು ರದ್ದುಪಡಿಸಬೇಕಾದರೆ, ಐಸಿಐಸಿಐ ಬ್ಯಾಂಕ್-ಕಸ್ಟಮರ್ ಕೇರ್ ಸೆಂಟರ್‌ಗೆ ಕೂಡಲೇ ತಿಳಿಸಬೇಕು. ಕಾರ್ಡ್ ಸದಸ್ಯರಿಂದ ಭರ್ತಿ ಮಾಡಿದ ಭದ್ರತೆ(ಐಸಿಐಸಿಐ ಬ್ಯಾಂಕ್ ಅಂಗೀಕರಿಸುವ ವಿಧಾನದಲ್ಲಿ)ಯನ್ನು ಸ್ವೀಕರಿಸಿದ ಬಳಿಕವಷ್ಟೇ ಡ್ರಾಫ್ಟ್‌ನ ಮೂಲ ಮೊತ್ತವನ್ನು ಅವರ ಕಾರ್ಡ್ ಖಾತೆಗೆ ಜಮಾ ಮಾಡಲಾಗುತ್ತದೆ. ಡ್ರಾಫ್ಟ್ ರದ್ದುಪಡಿಸಬೇಕಾದ ಸಂದರ್ಭದಲ್ಲಿ, ಡ್ರಾಫ್ಟ್‌ಅನ್ನು ಹಿಂದಿರುಗಿಸಬೇಕಾಗುತ್ತದೆ ಹಾಗೂ ರದ್ದತಿ ಶುಲ್ಕಗಳನ್ನು ವಿಧಿಸಲಾಗುತ್ತದೆ. ಡ್ರಾಫ್ಟ್ ಕಳೆದುಹೋದರೆ/ಕಳುವಾದರೆ, ಐಸಿಐಸಿಐ ಬ್ಯಾಂಕ್ ಅದನ್ನು ಬದಲಾಯಿಸುವುದಾಗಲೀ ಅಥವಾ ಪರಿಹಾರ ನೀಡುವುದಕ್ಕಾಗಲೀ ಹೊಣೆಗಾರಿಕೆ ವಹಿಸಿಕೊಳ್ಳುವುದಿಲ್ಲ.

## X ವಿಮಾ ಸೌಲಭ್ಯ

ವಿಮಾ ಸಂಸ್ಥೆಯೊಂದಿಗಿನ ಸಹಭಾಗಿತ್ವದ ಮೂಲಕ ಐಸಿಐಸಿಐ ಬ್ಯಾಂಕ್, ಕಾಲಕಾಲಕ್ಕೆ ಹಲವಾರು ವಿಮಾ ಸೌಲಭ್ಯಗಳನ್ನು ಕಾರ್ಡ್ ಸದಸ್ಯರಿಗೆ ನೀಡಬಹುದಾಗಿದೆ.ಕ್ಲೇಮಿನ ಎಲ್ಲಾ ಸಂದರ್ಭಗಳಲ್ಲೂ, ಕ್ಲೇಮಿನ ಇತ್ಯರ್ಥಕ್ಕೆ ವಿಮಾ ಸಂಸ್ಥೆಯೇ ಸಂಪೂರ್ಣವಾಗಿ ಹೊಣೆಯಾಗಿರುತ್ತದೆಯೇ ಹೊರತು, ಪರಿಹಾರಕ್ಕಾಗಲೀ, ಪರಿಹಾರದ ರಿಕವರಿಗಾಗಲೀ, ಕ್ಲೇಮುಗಳ ಪ್ರಕ್ರಿಯೆಗಾಗಲೀ, ಅಥವಾ ಬೇರೆ ಯಾವುದೇ ಕಾರಣಕ್ಕೂ ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕನ್ನು ಹೊಣೆಗಾರನನ್ನಾಗಿ ಮಾಡಲಾಗದು. ಕೆಳಗಿನ ಖಂಡಗಳಲ್ಲಿ ಇರುವ ನಿಬಂಧನೆಗಳಿಗೆ ಒಳಪಟ್ಟು, ಕಾರ್ಡ್ ಸದಸ್ಯರು ಸ್ವತಃ ಅಥವಾ ಐಸಿಐಸಿಐ ಬ್ಯಾಂಕ್ ಮೂಲಕ ವಿಮಾ ಸಂಸ್ಥೆಗೆ ನೀಡಿದ ವಿಮಾ ನಾಮನಿರ್ದೇಶನ ನಮೂನೆಯಲ್ಲಿ ಕಂಡುಬರುವ, ಸಾಕ್ಷಿಯಿರುವ, ಹೆಸರು ಹಾಗು ಸಹಿ ಇರುವ ಕಾರ್ಡ್ ಸದಸ್ಯರ ನಾಮನಿರ್ದೇಶಿತರಿಗೆ ಎಲ್ಲಾ ಅನುಮೋದಿತ ಬಾಕಿಗಳನ್ನು ತೀರಿಸಿದ ಬಳಿಕ, ವಿಮಾ ಸಂಸ್ಥೆಯನ್ನು ಅದರ ಹೊಣೆಗಾರಿಕೆಯಿಂದ ಮುಕ್ತಗೊಳಿಸಲಾಗುತ್ತದೆ. ನಾಮನಿರ್ದೇಶನದಲ್ಲಿ ಯಾವುದೇ ಬದಲಾವಣೆ ಇದ್ದರೂ, ಕಾರ್ಡ್ ಸದಸ್ಯರು ಅದನ್ನು ಲಿಖಿತ ರೂಪದಲ್ಲಿ ಐಸಿಐಸಿಐ ಬ್ಯಾಂಕ್‌ಗೆ ತಿಳಿಸಿರಬೇಕು.ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ನ ಕಾರ್ಡ್ ಸದಸ್ಯರಾಗಿದ್ದರೆ, ಇನ್ನೂ ಕಾರ್ಡ್ ಸದಸ್ಯರಾಗಿಯೇ ಉಳಿದಿದ್ದರೆ, ಹಾಗೂ ಅವರ ಕಾರ್ಡ್ ಖಾತೆಯು ಉತ್ತಮವಾಗಿ ನಿಯಮಿತವಾಗಿದ್ದು, ಯಾವುದೇ ತಪ್ಪಿಹೋದ ಸಂದರ್ಭಗಳಿಲ್ಲಿಲ್ಲದಿದ್ದರೆ ಮಾತ್ರ ಆ ಕಾರ್ಡ್ ಸದಸ್ಯರಿಗೆ ಲಭ್ಯವಿರುವ ವಿಮಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ ಎಂಬುದನ್ನು ಅವರು ಒಪ್ಪಿಕೊಂಡಿರಬೇಕು.

ಕಾರ್ಡ್ ಸದಸ್ಯರು, ಕಾರ್ಡ್ ಮೇಲಿರುವ ಎಲ್ಲಾ ಬಾಕಿಗಳನ್ನು ತೃಪ್ತಿಕರವಾಗಿ ತೀರಿಸುವವರೆಗೆ, ಐಸಿಐಸಿಐ ಬ್ಯಾಂಕ್‌ನ ನಿರ್ದೇಶನದ ಮೇರೆಗೆ, ವಿಮಾ ಕ್ಲೇಮಿನ ಪ್ರಕ್ರಿಯೆಗಳನ್ನು ವಿಮಾ ಸಂಸ್ಥೆಯು ಹಿಡಿದಿಟ್ಟುಕೊಂಡಿರುತ್ತದೆ ಎಂಬುದನ್ನೂ ಕಾರ್ಡ್ ಸದಸ್ಯರು ಒಪ್ಪಿಕೊಂಡಿರಬೇಕು. ಯಾವುದೇ ಕಾರಣಕ್ಕಾಗಿಯಾದರೂ ಕಾರ್ಡ್ ಸೌಲಭ್ಯವನ್ನು ರದ್ದುಗೊಳಿಸಿದ್ದರೆ, ಅಂತಹ ಎಲ್ಲಾ ವಿಮಾ ಸೌಲಭ್ಯಗಳೂ, ಸದಸ್ಯತ್ವದ ರದ್ದತಿಯ ದಿನಾಂಕದಿಂದ, ತಾನೇತಾನಾಗಿ ಹಾಗೂ ಅದೇ ಕಾರಣಕ್ಕಾಗಿ ಅಲಭ್ಯವಾಗುತ್ತವೆ. ಯಾವುದೇ ಸಮಯದಲ್ಲಾದರೂ ಐಸಿಐಸಿಐ ಬ್ಯಾಂಕ್ ಈ ವಿಮಾ ಸೌಲಭ್ಯಗಳನ್ನು ಬದಲಾಯಿಸಬಹುದು, ರದ್ದುಗೊಳಿಸಬಹುದು, ಹಿಂದೆಗೆದುಕೊಳ್ಳಬಹುದು(ತನ್ನ ಇಚ್ಛಾನುಸಾರ, ಆ ವಿಷಯದಲ್ಲಿ ಯಾವುದೇ ಪೂರ್ವ ಸೂಚನೆ ನೀಡದೆ) ಹಾಗೂ ಈ ಸೌಲಭ್ಯಗಳ ಮುಂದುವರಿಕೆಗೆ ಐಸಿಐಸಿಐ ಬ್ಯಾಂಕ್‌ಗೆ ಯಾವುದೇ ಬಂಧನವಿರುವುದಿಲ್ಲ

## XI ಕಳೆದು ಹೋದ, ಕಳುವಾದ ಅಥವಾ ದುರ್ಬಳಕೆ ಮಾಡಲ್ಪಟ್ಟ ಕಾರ್ಡ್‌ಗಳು

ಕಾರ್ಡ್ ಕಳೆದುಹೋದರೆ, ಅಥವಾ ಕಳುವಾದರೆ ಅದನ್ನು ಕೂಡಲೇ ಐಸಿಐಸಿಐ ಬ್ಯಾಂಕ್-ಕಸ್ಟಮರ್ ಕೇರ್‌ಗೆ ತಿಳಿಸಬೇಕು. ಆದರೆ, ಕಾರ್ಡ್ ಕಳುವಾಗಿದ್ದರೆ, ಕಾರ್ಡ್ ಸದಸ್ಯರು ಸ್ಥಳೀಯ ಪೋಲಿಸ್ ಠಾಣೆಯಲ್ಲಿ ದೂರು ನೀಡಿ, ಐಸಿಐಸಿಐ ಬ್ಯಾಂಕ್ ಕೋರಿದಾಗ ಅದರ ಪ್ರತಿಯನ್ನು ಸಲ್ಲಿಸಬೇಕಾಗುತ್ತದೆ. ಸೂಕ್ತ ಪರಿಶೀಲನೆಯ ಬಳಿಕ ಐಸಿಐಸಿಐ ಬ್ಯಾಂಕ್, ಕಾರ್ಡ್ ಖಾತೆಯನ್ನು ರದ್ದುಗೊಳಿಸಿ, ಅದಕ್ಕೆ ಸಂಬಂಧಿಸಿದ ಎಲ್ಲಾ ಸೌಲಭ್ಯಗಳನ್ನೂ ರದ್ದುಗೊಳಿಸುತ್ತದೆ ಹಾಗೂ ಅದರಿಂದ ಕಾರ್ಡ್ ಸದಸ್ಯರಿಗೆ ಅನಾನುಕೂಲತೆ ಏರ್ಪಟ್ಟಲ್ಲಿ ಅದರ ಹೊಣೆಗಾರಿಕೆ ವಹಿಸಿಕೊಳ್ಳುವುದಿಲ್ಲ ಒಂದು ಕಾರ್ಡ್ ಕಳೆದುಹೋಗಿದೆ, ಹಾಳಾಗಿದೆ ಅಥವಾ ಕಳುವಾಗಿದೆ ಎಂದು ವರದಿ ಮಾಡಿದ್ದಲ್ಲಿ, ನಂತರ ಅದು ದೊರಕಿದರೂ ಆ ಕಾರ್ಡನ್ನು ಪುನಃ ಬಳಸುವಂತಿಲ್ಲ ಎಂಬುದನ್ನು ಕಾರ್ಡ್ ಸದಸ್ಯರು ನೆನಪಿನಲ್ಲಿಟ್ಟುಕೊಂಡಿರಬೇಕು.ಒಂದು ಕಾರ್ಡ್ ಕಳೆದುಹೋಗಿದೆ, ಹಾಳಾಗಿದೆ ಅಥವಾ ಕಳುವಾಗಿದೆ ಎಂದು ವರದಿ ಮಾಡಿದ್ದಲ್ಲಿ, ನಂತರ ಅದು ಹಾಳಾಗದಿರುವ ಸ್ಥಿತಿಯಲ್ಲೇ ದೊರಕಿದರೂ ಆ ಕಾರ್ಡನ್ನು ಪುನಃ ಬಳಸುವುದಿಲ್ಲ ಎಂದು ಕಾರ್ಡ್ ಸದಸ್ಯರು ಘೋಷಿಸಬೇಕು. ಅಂತಹ ಸಂದರ್ಭಗಳಲ್ಲಿ, ಕಾರ್ಡ್ ಸದಸ್ಯರು ಆ ಕಾರ್ಡನ್ನು ಕೂಡಲೇ 4 ತುಂಡುಗಳಾಗಿ ಕತ್ತರಿಸಿ ಅದನ್ನು ರದ್ದು ಮಾಡುವುದಕ್ಕೆ ಐಸಿಐಸಿಐ ಬ್ಯಾಂಕ್‌ಗೆ ಕಳುಹಿಸಿಕೊಡಬೇಕು. ಕಾರ್ಡ್‌ನ ಸುರಕ್ಷತೆ ಕಾರ್ಡ್ ಸದಸ್ಯರದ್ದೇ ಆಗಿದ್ದು ಕಾರ್ಡ್ ದುರ್ಬಳಕೆಯಾಗದಂತೆ ಕಾರ್ಡ್ ಸದಸ್ಯರು ಖಾತರಿಪಡಿಸಬೇಕು. ಮೇಲೆ ತಿಳಿಸಿದಂತೆ ಕಾರ್ಡ್ ಕಳೆದುಹೋದ/ಕಳುವಾದ/ಹಾಳಾದ ಸಂದರ್ಭದಲ್ಲಿ, ಕಾರ್ಡ್ ಸದಸ್ಯರು ಮೇಲೆ ತಿಳಿಸಲಾದ ಕ್ರಮಗಳನ್ನು ತೆಗೆದುಕೊಳ್ಳಲು ವಿಫಲರಾದಲ್ಲಿ, ಆ ರೀತಿ ಕಳೆದುಹೋದ, ಕಳುವಾದ, ಅಥವಾ ಹಾಳಾದ ಕಾರ್ಡ್‌ನಿಂದ ಏರ್ಪಡುವ ಅನುಮಾನಾಸ್ಪದ ಹಾಗು ಹಣಕಾಸು ಜವಾಬ್ದಾರಿಯು ಕಾರ್ಡ್ ಸದಸ್ಯರದ್ದೇ ಆಗಿರುತ್ತದೆ ಹಾಗೂ ಇದರಿಂದ ಕಾರ್ಡ್ ಖಾತೆ ರದ್ದುಗೊಳ್ಳಲೂ ಬಹುದು.

ಐಸಿಐಸಿಐ ಬ್ಯಾಂಕ್ ಕಾರ್ಡ್ ಖಾತೆಯನ್ನು ರದ್ದುಗೊಳಿಸಿದ ನಂತರ ಹಾಗೂ ಕಾರ್ಡ್ ಕಳೆದುಹೋದ/ಕಳುವಾದ/ಹಾಳಾದ ವರದಿಯ ನಂತರ ಯಾವುದೇ ಅನಧಿಕೃತ ವ್ಯವಹಾರಗಳನ್ನು ಮಾಡಿದುದಕ್ಕಾಗಿ ಕಾರ್ಡ್ ಸದಸ್ಯರನ್ನು ಹೊಣೆಗಾರರನ್ನಾಗಿ ಮಾಡಲಾಗುವುದಿಲ್ಲ, ಕಾರ್ಡ್‌ನ ಕಳೆದುಹೋಗುವಿಕೆ/ಕಳುವು/ಹಾಳಾಗುವಿಕೆಯ ನಂತರ ಏರ್ಪಡುವ ಯಾವುದೇ ವ್ಯವಹಾರಕ್ಕೆ ಬ್ಯಾಂಕ್ ಹೊಣೆಗಾರಿಕೆ ವಹಿಸಿಕೊಳ್ಳುತ್ತದೆ. ಆದರೆ, ಮೇಲೆ ತಿಳಿಸಿದ ಕಾರ್ಡ್ ಕಳೆದುಹೋಗಿದೆ/ಕಳುವಾಗಿದೆ/ ದುರ್ಬಳಕೆಯಾಗಿದೆ ಎಂದು ವರದಿ ಮಾಡಿದ ಬಳಿಕ, ಅಂತಹ ವರದಿ ಮಾಡುವಿಕೆಯ ಸಮಯ ಹಾಗೂ _/ಅಥವಾ ಕಾರ್ಡ್‌ನಿಂದ ಮಾಡಲಾದ ವ್ಯವಾಹಾರ/ಗಳ ಸಮಯಕ್ಕೆ ಕುರಿತಂತೆ ಏನಾದರೂ ವ್ಯಾಜ್ಯ ಏರ್ಪಟ್ಟಲ್ಲಿ, ಅಂತಹ ವಿವಾದಿತ ವ್ಯವಹಾರದ ಸಮಯ ಹಾಗೂ _/ಅಥವಾ ನಿಖರತೆಯನ್ನು ತೀರ್ಮಾನಿಸುವ ಹಕ್ಕನ್ನು

ಐಸಿಐಸಿಐ ಬ್ಯಾಂಕ್ ಕಾದಿರಿಸಿಕೊಳ್ಳುತ್ತದೆ. ಕಾರ್ಡ್ ಸದಸ್ಯರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಕಾರ್ಡ್ ಖಾತೆಯನ್ನು ಯಾವುದೇ ರೀತಿಯಲ್ಲಾದರೂ ದುರ್ಬಳಕೆ ಮಾಡುವುದನ್ನು ತಡೆಗಟ್ಟಲು, ರಾಜಿಯಾಗುವ ಸಂದೇಹಾಸ್ಪದ ಅಪಾಯಕ್ಕಾಗಿ ಕ್ರೆಡಿಟ್ ಕಾರ್ಡನ್ನು ಬ್ಲಾಕ್ ಮಾಡುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾದಿರಿಸಿಕೊಳ್ಳುತ್ತದೆ. ಈ ರೀತಿ ಬ್ಲಾಕ್ ಮಾಡಿದ ಕಾರ್ಡನ್ನು ಕಾರ್ಡ್ ಸದಸ್ಯರು ಯಾವುದೇ ವ್ಯವಹಾರಕ್ಕಾಗಿ/ಗಳಿಗಾಗಿ ಬಳಸುವಂತಿಲ್ಲ ಹಾಗೂ 7(ಏಳು) ಕಾರ್ಯಸ್ಥ ದಿನಗಳೊಳಗೆ ಬದಲಾವಣೆ ಕಾರ್ಡ್ ಸ್ವೀಕರಿಸುವರು.

ಐಸಿಐಸಿಐ ಬ್ಯಾಂಕ್ ಸಾಧ್ಯಂತ ವಂಚನೆಯ ಅಪಾಯವನ್ನು ಕಾರ್ಡ್ ಸದಸ್ಯರಿಗೆ ಸೂಚಿಸಿದ ಹೊರತಾಗಿಯೂ ಅವರು ಕಾರ್ಡ್ ಬ್ಲಾಕ್ ಮಾಡದಿರುವಂತೆ ಕೋರಿದರೆ, ಕಾರ್ಡ್‌ನ ತಪ್ಪಾದ ಬಳಕೆ ಅಥವಾ ದುರ್ಬಳಕೆಯ ಕಾರಣದಿಂದಾಗಿ ತದನಂತರದಲ್ಲಿ ವರದಿಯಾಗುವ ಯಾವುದೇ ರೀತಿಯ ವಂಚನೆಯ ವ್ಯವಹಾರಗಳಿಗೆ ಐಸಿಐಸಿಐ ಬ್ಯಾಂಕ್ ಹೊಣೆಗಾರಿಕೆ ವಹಿಸಿಕೊಳ್ಳುವುದಿಲ್ಲ.

## XII ಹೊಣೆಗಾರಿಕೆಯ ಹೊರತುಪಡಿಸುವಿಕೆ

ಐಸಿಐಸಿಐ ಬ್ಯಾಂಕ್‌ಗೆ ಅಥವಾ ಈ ನಿಬಂಧನೆಗಳಿಗೆ ಲಭ್ಯವಿರುವ ಪರಿಹಾರಗಳಿಗೆ ಪೂರ್ವಗ್ರಹವಿಲ್ಲದೆ, ಈ ಕೆಳಕಂಡ ಕಾರಣಗಳಿಂದಾಗಿ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಏರ್ಪಡುವ ಯಾವುದೇ ನಷ್ಟ ಅಥವಾ ಹಾನಿಯ ವಿಷಯದಲ್ಲಿ, ಐಸಿಐಸಿಐ ಬ್ಯಾಂಕ್ ಕಾರ್ಡ್ ಸದಸ್ಯರೆಡೆಗೆ ಯಾವುದೇ ಹೊಣೆಗಾರಿಕೆ ವಹಿಸುವುದಿಲ್ಲ;

ಎ)ಸರಬರಾಜು ಮಾಡಲಾದ ಯಾವುದೇ ವಸ್ತು ಹಾಗೂ ಸಾಮಗ್ರಿಗಳು;

ಬಿ)ಕಾರ್ಡ್‌ಅನ್ನು ಅಂಗೀಕರಿಸಲು ಅಥವಾ ಸ್ವೀಕರಿಸಲು ಯಾವುದೇ ವ್ಯಕ್ತಿ/ವ್ಯಾಪಾರ ಸಂಸ್ಥೆಯ ನಿರಾಕರಣೆ;

ಸಿ) ಯಾವುದೇ ಕಂಪ್ಯೂಟರ್ ಟರ್ಮಿನಲ್‌ನ ಕಾರ್ಯವೈಫಲ್ಯ;

ಡಿ) ಕಾರ್ಡ್ ಸದಸ್ಯರು ಹೊರತುಪಡಿಸಿ, ಬೇರೆ ಯಾವುದೇ ವ್ಯಕ್ತಿ ವ್ಯವಹಾರ ಸೂಚನೆಗಳನ್ನು ನೀಡಿದ್ದರೆ;

ಇ) ಕಾರ್ಡ್ ಸದಸ್ಯರು, ಕಾರ್ಡನ್ನು ಐಸಿಐಸಿಐ ಬ್ಯಾಂಕ್ ಅಥವಾ ಅದರ ಪ್ರತಿನಿಧಿಗಳಿಗಲ್ಲದೆ ಬೇರೆ ಇತರರಿಗೆ ಕಾರ್ಡ್ ಕೊಟ್ಟಿದ್ದರೆ;

ಎಫ್)ಕಾರ್ಡ್ ಮೇಲೆ ಬರೆದಿರುವ ಅವಧಿ ತೀರುವಳಿ ದಿನಾಂಕಕ್ಕಿಂತ ಮುಂಚಿತವಾಗಿ ಕಾರ್ಡ್ ಸರಂಡರ್ ಮಾಡುವಂತೆ ಕೇಳುವ ತನ್ನ ಅಧಿಕಾರವನ್ನು ಚಲಾಯಿಸಿ ಐಸಿಐಸಿಐ ಬ್ಯಾಂಕ್ ಬೇಡಿಕೆ ಸಲ್ಲಿಸಿಪಡೆದುಕೊಂಡಿದ್ದರೆ; ಐಸಿಐಸಿಐ ಬ್ಯಾಂಕ್‌ನಿಂದಲೇ ಇದ್ದರೂ;

ಜಿ) ಯಾವುದೇಕಾರ್ಡ್ ಅಥವಾ ಕಾರ್ಡ್ ಖಾತೆಯನ್ನು ರದ್ದುಗೊಳಿಸುವ ಐಸಿಐಸಿಐ ಬ್ಯಾಂಕ್‌ನ ಹಕ್ಕನ್ನು ಅದು ಚಲಾಯಿಸಿದ್ದರೆ; ಹೆಚ್) ಕಾರ್ಡನ್ನು ಮರಳಿಪಡೆದ ಬಳಿಕ ಕಾರ್ಡ್ ಸದಸ್ಯರ ಚರಿತ್ರೆ ಅಥವಾ ಘನತೆಗೆ ಹಾನಿಯುಂಟಾಗಿದೆ ಎಂದು ದೂರಿದ್ದರೆ ಹಾಗೂ /ಅಥವಾ ಅದರ ಹಿಂದಿರುಗಿಸುವಿಕೆಯ ಕೋರಿಕೆ ಸಲ್ಲಿಸಿದ್ದರೆ ಅಥವಾ ಯಾವುದೇ ವ್ಯಾಪಾರ ಸಂಸ್ಥೆ/ಮೇಲ್ ಆರ್ಡರ್ ಸಂಸ್ಥೆ ಕಾರ್ಡನ್ನು ಸ್ವೀಕರಿಸಲು ಅಥವಾ ಅಂಗೀಕರಿಸಲು ನಿರಾಕರಿಸಿದ್ದರೆ; ಐ) ಐಸಿಐಸಿಐ ಬ್ಯಾಂಕ್ ಬಹಿರಂಗಪಡಿಸಿರುವ ಯಾವುದೇ ವಿವರಗಳ ತಪ್ಪು ಹೇಳಿಕೆಗಳು, ತಪ್ಪು ಪ್ರಾತಿನಿಧ್ಯ, ಲೋಪದೋಷಗಳು; ಐಸಿಐಸಿಐ ಬ್ಯಾಂಕ್ ಅಥವಾ ಐಸಿಐಸಿಐ ಬ್ಯಾಂಕ್ ಪರವಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಯು, ಕಾರ್ಡ್ ಸದಸ್ಯರ ಯಾವುದೇ ಬಾಕಿ ಇರುವ ಮೊತ್ತಕ್ಕೆ ಬೇಡಿಕೆ ಅಥವಾ ಇತ್ಯರ್ಥ ಕ್ಲೇಮ್ ಸಲ್ಲಿಸಿದ್ದರೆ, ಕಾರ್ಡ್ ಸದಸ್ಯರು ಅಂತಹ ಬೇಡಿಕೆ ಅಥವಾ ಕ್ಲೇಮನ್ನು, ಯಾವುದೇ ರೀತಿಯಲ್ಲಾದರೂ ಕಾರ್ಡ್ ಸದಸ್ಯರ ಮಾನನಷ್ಟ ಪ್ರಕ್ರಿಯೆ ಎಂದೋ ಅಥವಾ ಪೂರ್ವಗ್ರಹಪೀಡಿತ ಕಾರ್ಯವೆಂದೋ,ಚಾರಿತ್ರ್ಯದ ಪ್ರತಿಫಲನೆ ಎಂದೋ ಪರಿಗಣಿಸುವುದಿಲ್ಲ ಎನ್ನುವುದನ್ನು ಕಾರ್ಡ್ ಸದಸ್ಯರು ಅಂಗೀಕರಿಸಬೇಕು;

ಕ್ರೆಡಿಟ್ ಕಾರ್ಡ್ ಸೌಲಭ್ಯಕ್ಕೆ ಅರ್ಜಿ ಸಲ್ಲಿಸುವಾಗ, ಕಾರ್ಡ್‌ದಾರರು ಒದಗಿಸುವ ಮೊಬೈಲ್ ಫೋನ್ ಸಂಖ್ಯೆ,ಇ-ಮೇಲ್ ವಿಳಾಸಕ್ಕೆ ಎಚ್ಚರಿಕೆಗಳನ್ನು ಸ್ವೀಕರಿಸುವ ಸೌಲಭ್ಯದ ನಿಯಮವು, ಐಸಿಐಸಿಐ ಬ್ಯಾಂಕ್ ತೊಡಗಿಸಿಕೊಳ್ಳುವ ಅಥವಾ ಇತರ ಸೇವಾ ಸರಬರಾಜುದಾರರು ಒದಗಿಸುವ ಮೂಲಸೌಕರ್ಯ, ಸಂಪರ್ಕಸೌಲಭ್ಯ ಹಾಗೂ ಸೇವೆಗಳ ಮೇಲೆ ಅವಲಂಬಿತವಾಗಿರುತ್ತದೆ ಎಂಬುದನ್ನು ಕಾರ್ಡ್‌ದಾರರು ಅರಿತುಕೊಳ್ಳಬೇಕು. ಐಸಿಐಸಿಐ ಬ್ಯಾಂಕ್ ಕಳುಹಿಸುವ ಎಚ್ಚರಿಕೆ ಸಂದೇಶಗಳ ಕಾಲಮಿತಿಗಳು, ನಿಖರತೆ ಹಾಗು ಓದುವಿಕೆಯು, ಐಸಿಐಸಿಐ ಬ್ಯಾಂಕ್ ತೊಡಗಿಸಿಕೊಂಡಿರುವ ಇತರ ಸೇವಾ ಸರಬರಾಜುದಾರರ ಮೇಲೆ ಪ್ರಭಾವ ಬೀರುವಂತಹ ಅಥವಾ ಬೇರೆ ವಿಷಯಗಳ ಮೇಲೆ ಅವಲಂಬಿತವಾಗಿರುತ್ತದೆ ಎಂಬುದನ್ನೂ ಕಾರ್ಡ್‌ದಾರರು ಅಂಗೀಕರಿಸಬೇಕು. ಕಾರ್ಡ್‌ದಾರರಿಗೆ ಕಳುಹಿಸುವ ಎಚ್ಚರಿಕೆಗಳ ಪ್ರಸರಣದಲ್ಲಿ ಏರ್ಪಡುವ ತಲುಪದಿರುವಿಕೆ, ತಡವಾಗಿ ತಲುಪುವಿಕೆ, ತಪ್ಪು ನಷ್ಟ ಅಥವಾ ವಿರೂಪಕ್ಕೆ ಐಸಿಐಸಿಐ ಬ್ಯಾಂಕ್ ಜವಾಬ್ದಾರಿ ವಹಿಸಿಕೊಳ್ಳುವುದಿಲ್ಲ.

**ಗಿಐಐಐ ಉಳಿಕೆ(ಬ್ಯಾಲೆನ್ಸ್) ವರ್ಗಾವಣೆ ಸೌಲಭ್ಯ**

''ಸೌಲಭ್ಯ'' ಎಂದರೆ, ಐಸಿಐಸಿಐ ಬ್ಯಾಂಕ್‌ನ ಇಚ್ಚೆಗೆ ಒಳಪಟ್ಟು, ಲಭ್ಯವಿರುವ ಸಾಲಮಿತಿಯನ್ನು ಮೀರದಂತೆ, ಕಾರ್ಡ್ ಸದಸ್ಯರ ಕಾರ್ಡ್‌ಗೆ ಒದಗಿಸಲಾಗಿರುವ/ಐಸಿಐಸಿಐ ಬ್ಯಾಂಕ್ ಒದಗಿಸಲು ಒಪ್ಪಿರ್ಕೊಂಡಿರುವ, ಕಾರ್ಡ್ ಸದಸ್ಯರ ಇತರ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳ ಮೇಲಿನ ಬಾಕಿ ಉಳಿಕೆಯ ಮೊತ್ತದ ವರ್ಗಾವಣೆ. ''ಈಸಿ ಬಿಟಿ ''ಎಂದರೆ, ಕಾರ್ಡ್ ಸದಸ್ಯರು ಸೌಲಭ್ಯದ ಮರುಪಾವತಿಯ ವಿಧಾನವನ್ನು ಸಮಾನ ಮಾಸಿಕ ಕಂತುಗಳಿಗೆ ಪರಿವರ್ತಿಸಲು ಇಚ್ಚಿಸಿದ ಸಂದರ್ಭದಲ್ಲಿ ನೀಡಲಾಗುವ ಸೌಲಭ್ಯ.

''ಇಎಮ್ಐ''ಅಥವಾ ''ಸಮಾನ ಮಾಸಿಕ ಕಂತು'' ಎಂದರೆ, ಸೌಲಭ್ಯದ ವಿಷಯದಲ್ಲಿ ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ಗೆ ನೀಡಬೇಕಾದ ಮೊತ್ತದ ಸಮಾನ ಮಾಸಿಕ ಕಂತಾಗಿದ್ದು, ಇದು ಸೌಲಭ್ಯದ ಅಸಲು ಮೊತ್ತ ಹಾಗು ಅದರ ಮೇಲಿನ ಬಡ್ಡಿಯನ್ನು ಒಳಗೊಂಡಿರುತ್ತದೆ.

''ಬಡ್ಡಿ ರಹಿತ ಬ್ಯಾಲೆನ್ಸ್ ವರ್ಗಾವಣೆ''ಎಂದರೆ, ಕಾರ್ಡ್‌ದಾರರು, ಐಸಿಐಸಿಐ ನಿರ್ದಿಷ್ಟಗೊಳಿಸಿರುವ ಒಂದು ಖಚಿತ ಅವಧಿಗಾಗಿ 0% ಬಡ್ಡಿದರದಲ್ಲಿ ಸೌಲಭ್ಯ ಪಡೆದುಕೊಳ್ಳುವುದು ಎಂದರ್ಥ.

''ಎಲ್‌ಟಿಬಿಟಿ''(ಲೈಫ್-ಟೈಮ್ ಬ್ಯಾಲೆನ್ಸ್ ಟ್ರಾನ್ಸ್‌ಫರ್-ಜೀವಿತಾವಧಿ ಬಾಕಿ ವರ್ಗಾವಣೆ) ಎಂದರೆ, ಕಾರ್ಡ್‌ದಾರರು, ಸೌಲಭ್ಯವನ್ನು ಪಡೆದುಕೊಳ್ಳುವ ಸಮಯದಲ್ಲಿ, ಐಸಿಐಸಿಐ ಬ್ಯಾಂಕ್ ನಿಗದಿಪಡಿಸಿರುವ ದರದಲ್ಲಿ ಅನಿಶ್ಚಿತ ಅವಧಿಯವರೆಗೆ ಸೌಲಭ್ಯವನ್ನು ಪಡೆದುಕೊಳ್ಳುವುದು ಎಂದರ್ಥ.

**ಸೌಲಭ್ಯದ ಉಪಯೋಗ ಮಾಡಿಕೊಳ್ಳುವುದು:**

ಈ ಸೌಲಭ್ಯದಡಿ, ಐಸಿಐಸಿಐ ಬ್ಯಾಂಕ್ ತನ್ನ ಇಚ್ಚೆಯ ಮೇರೆಗೆ, ಕಾರ್ಡ್‌ದಾರರು, ಇತರ ಬ್ಯಾಂಕ್‌ಗಳು/ಸಂಸ್ಥೆಗಳು ನೀಡಿದ ಕ್ರೆಡಿಟ್ ಕಾರ್ಡ್‌ಗಳ ಮೇಲೆ ಬಾಕಿ ಇರುವ ಎಲ್ಲಾ ಅಥವಾ ಭಾಗಶಃ ಮೊತ್ತವನ್ನು ತನ್ನ ಕಾರ್ಡ್ ಖಾತೆಗೆ ವರ್ಗಾವಣೆ ಮಾಡಿಕೊಳ್ಳಲು ಅನುಮತಿ ನೀಡುತ್ತದೆ. ಇಂತಹ ವರ್ಗಾವಣೆಯನ್ನು, ಐಸಿಐಸಿಐ ಬ್ಯಾಂಕ್‌ನಲ್ಲಿ ಕಾರ್ಡ್ ಸದಸ್ಯರು ಕೊನೆಯ ಬಾರಿ ನೋಂದಾಯಿಸಿರುವ ಅಂಚೆ/ಮೇಲ್ ವಿಳಾಸಕ್ಕೆ ಡಿಮಾಂಡ್ ಡ್ರಾಫ್ಟ್ ಮೂಲಕ ಕಳುಹಿಸಲಾಗುತ್ತದೆ ಹಾಗೂ ಇದು, ಅನುಮೋದಿತ ಸೌಲಭ್ಯ ಮೊತ್ತಕ್ಕಾಗಿ, ಕಾರ್ಡ್ ಸದಸ್ಯರು ಇತರ ಬ್ಯಾಂಕ್/ಸಂಸ್ಥೆಗಳ ಕಾರ್ಡ್ ಖಾತೆಯನ್ನು ಜಮಾ ಮಾಡುವುದಕ್ಕಾಗಿ, ಕ್ರೆಡಿಟ್ ಕಾರ್ಡ್ ನೀಡಿದ ಇತರ ಬ್ಯಾಂಕ್/ಸಂಸ್ಥೆಯ ಹೆಸರಿನಲ್ಲಿರುತ್ತದೆ.

ಐಸಿಐಸಿಐ ಬ್ಯಾಂಕ್ ಅನುಮೋದಿಸಿದ/ಅನುಮೋದಿಸಲು ಒಪ್ಪಿಕೊಂಡ ಸೌಲಭ್ಯದ ನಂತರ, ಕಾರ್ಡ್ ಸದಸ್ಯರ ಇತರ ಕ್ರೆಡಿಟ್ ಕಾರ್ಡ್ ವಿಷಯಕ್ಕೆ ಕುರಿತಂತೆ, ಅವರಿಗೆ ಏರ್ಪಡಬಹುದಾದ ಯಾವುದೇ ಹೆಚ್ಚುವರಿ ಪಾವತಿಗಳು

ಅಥವಾ ಸೇವಾ ಶುಲ್ಕಗಳನ್ನು ಐಸಿಐಸಿಐ ಬ್ಯಾಂಕ್ ಭರಿಸುವುದಿಲ್ಲ, ಬೇರೆ ಕ್ರೆಡಿಟ್ ಕಾರ್ಡ್ ನೀಡುವ ಬ್ಯಾಂಕ್/ಸಂಸ್ಥೆಯು ತನಗೆ ವರ್ಗಾವಣೆ ಮಾಡಲಾದ ಸೌಲಭ್ಯದ ಮೊತ್ತವನ್ನು ಸ್ವೀಕರಿಸುವವರೆಗೆ, ಕಾರ್ಡ್ ಸದಸ್ಯರು ಆ ಬೇರೆ ಕ್ರೆಡಿಟ್ ಕಾರ್ಡ್ ನೀಡುವ ಬ್ಯಾಂಕ್/ಸಂಸ್ಥೆಗೆ ಪಾವತಿಗಳನ್ನು ಮುಂದುವರಿಸುತ್ತಿರಬೇಕು. ಹೆಚ್ಚುವರಿಯಾಗಿ, ಕಾರ್ಡ್ ಸದಸ್ಯರು, ಅವರ ಕಾರ್ಡ್ ಖಾತೆಯನ್ನು ಇತರ ಕ್ರೆಡಿಟ್ ಕಾರ್ಡ್ ನೀಡುವ ಬ್ಯಾಂಕ್/ಸಂಸ್ಥೆಯೊಂದಿಗೆ ಜಮಾ ಮಾಡಲಾಗಿದೆ ಎಂದು ಖಾತರಿಪಡಿಸುವ ಒಂದು ಸ್ಟೇಟ್‌ಮೆಂಟನ್ನೂ ತಮ್ಮ ಮುಂದಿನ ಸ್ಟೇಟ್‌ಮೆಂಟ್‌ನಲ್ಲಿ ಸ್ವೀಕರಿಸುವರು. ಈ ಸೌಲಭ್ಯವು ಪ್ರಾಥಮಿಕ ಹಾಗು ದ್ವಿತೀಯ ಕಾರ್ಡ್ ಸದಸ್ಯರು ಇಬ್ಬರಿಗೂ ಲಭ್ಯವಿದ್ದರೂ, ಅದು, ಲಭ್ಯವಿರುವ ನಗದುಹಣ-ಮಿತಿ ಹಾಗೂ /ಅಥವಾ ಕ್ರೆಡಿಟ್ ಮಿತಿಗೆ ಒಳಪಟ್ಟಿದ್ದು, ಸೌಲಭ್ಯವನ್ನು ಕೋರುವ ಕಾರ್ಡ್ ಸದಸ್ಯರಿಗೆ ಮಾತ್ರ ನೀಡಲಾಗುತ್ತದೆ.

ಕಾರ್ಡ್ ಸದಸ್ಯರಿಗೆ ಅನುಮೋದಿಸಲಾದ ಸೌಲಭ್ಯದ ಮೊತ್ತವನ್ನು, ಕಾರ್ಡ್ ಮೇಲಿನ ನಗದುಹಣ-ಮಿತಿ ಹಾಗೂ/ಅಥವಾ ಕ್ರೆಡಿಟ್ ಮಿತಿಯಿಂದ ಬ್ಲಾಕ್ ಮಾಡಲಾಗುತ್ತದೆ. ಕಾರ್ಡ್ ಸದಸ್ಯರು, ತಾರಿಫ್ ಅನುಬಂಧದಲ್ಲಿ ನಿರ್ದಿಷ್ಟಗೊಳಿಸಲಾಗಿರುವ, ಕಾರ್ಡ್ ಸದಸ್ಯರಿಗೆ ಐಸಿಐಸಿಐ ಬ್ಯಾಂಕ್ ನಿರ್ದಿಷ್ಟಗೊಳಿಸಿರುವ ಶೇಕಡಾವಾರು ಮೊತ್ತದವರೆಗೆ, ಸೌಲಭ್ಯದ ಮೇಲೆ ಮರುಪಾವತಿಸಲಾಗದ ಪ್ರಕ್ರಿಯಾಶುಲ್ಕ ಕಟ್ಟಬೇಕಾಗುತ್ತದೆ. ಈ ಪ್ರಕ್ರಿಯಾ ಶುಲ್ಕದ ಮೇಲೆ ಜಿಎಸ್‌ಟಿ ಹಾಗೂ ಐಸಿಐಸಿಐ ಬ್ಯಾಂಕ್‌ನ ಪ್ರಚಲಿತ ದರಗಳಲ್ಲಿ ಬಡ್ಡಿ ಮೊತ್ತ ಅನ್ವಯವಾಗುತ್ತದೆ. ಅಂತಹ ಮೊತ್ತವು ಆ ನಿರ್ದಿಷ್ಟ ತಿಂಗಳಿನ ಸ್ಟೇಟ್‌ಮೆಂಟ್‌ನಲ್ಲಿ ಪ್ರತಿಫಲಿತವಾಗುತ್ತದೆ. ಕಾರ್ಡ್ ಸದಸ್ಯರು ಸೌಲಭ್ಯವನ್ನು ಕೋರಿ ಐಸಿಐಸಿಐಇ ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿದ ಬಳಿಕ, ಸೌಲಭ್ಯವನ್ನು ಯಾವ ಇತರ ಬ್ಯಾಂಕ್‌ನ ಕ್ರೆಡಿಟ್ ಕಾರ್ಡ್‌ಗಾಗಿ ಕೋರಲಾಗಿದೆಯೋ ಆ ಬ್ಯಾಂಕ್‌ಗೆ ಐಸಿಐಸಿಐ ಬ್ಯಾಂಕ್ ಹತ್ತು ರೂ.ಗಳ (ರೂ.10) ಒಂದು ನಕಲಿ ಅಧಿಕೃತಕರಣ ನೆರವೇರಿಸುತ್ತದೆ. ಈ ಅಧಿಕರಣವು ಯಶಸ್ವಿಯಾದರೆ, ಐಸಿಐಸಿಐ ಬ್ಯಾಂಕ್‌ನ ಇಚ್ಛಾನುಸಾರ, ಇತರ ನಿಯಮಗಳು ಹಾಗು ನಿಬಂಧನೆಗಳಿಗೆ ಒಳಪಟ್ಟು, ಬಾಕಿಮೊತ್ತ ವರ್ಗಾವಣೆ ವ್ಯವಹಾರವನ್ನು ಪ್ರಕ್ರಿಯೆಗೊಳಪಡಿಸಲಾಗುತ್ತದೆ.

ಮರುಪಾವತಿ:

ಸೌಲಭ್ಯವು ಈಸಿ ಬಿಟಿಯ ಸಂದರ್ಭವಾಗಿದ್ದರೆ, ಕಾರ್ಡ್ ಸದಸ್ಯರು ಸಮಾನ ಮಾಸಿಕ ಕಂತುಗಳಲ್ಲಿ(ಇಎಮ್‌ಐ) ಸೌಲಭ್ಯದ ಮೊತ್ತ ಹಾಗೂ ಅದರ ಮೇಲಿನ ಬಡ್ಡಿಯನ್ನು ಮರುಪಾವತಿಸಬೇಕಾಗುತ್ತದೆ. ಬಡ್ಡಿದರವು, ಸೌಲಭ್ಯಕ್ಕೆ ಕೊಡುಗೆ ಸಲ್ಲಿಸಿರುವ ಸಮಯದಲ್ಲಿ, ಕಾರ್ಡ್ ಸದಸ್ಯರಿಗೆ ಐಸಿಐಸಿಐ ಬ್ಯಾಂಕ್ ಸೂಚಿಸಿರುವ ದರವಾಗಿರುತ್ತದೆ ಹಾಗೂ ಅದನ್ನು ತದನಂತರ ಕಾರ್ಡ್ ಸದಸ್ಯರಿಗೆ ಸಂವಹನದ ಮೂಲಕ ತಿಳಿಸಲಾಗಿರುತ್ತದೆ. ಕಾರ್ಡ್ ಸದಸ್ಯರು

ಈಸಿ ಬಿಟಿಗೆ ಸಂಬಂಧಿಸಿದಂತೆ ಖಾತರಿಗೊಳಿಸಿದ ಕೋರಿಕೆಯ ಸಮಯದಿಂದ ಬಡ್ಡಿ ಲೆಕ್ಕ ಆರಂಭವಾಗುತ್ತದೆ.ಸೌಲಭ್ಯದ ಇತರ ವಿವರಗಳೊಂದಿಗೆ (ಬಡ್ಡಿದರ ಒಳಗೊಂಡಂತೆ) ಇಎಮ್ಐನ ಮೊತ್ತವನ್ನು ಕಾರ್ಡ್ ಸದಸ್ಯರಿಗೆ ಅವರ ಮೇಲ್ ಮಾಡುವ ವಿಳಾಸಕ್ಕೆ ಕೂಡ ಕಳುಹಿಸಲಾಗುತ್ತದೆ.

ಒಂದು ನಿರ್ದಿಷ್ಟ ತಿಂಗಳಿನಲ್ಲಿ ಬಾಕಿ ಇರುವ ಇಎಮ್ಐ ಮೊತ್ತವನ್ನು ಆ ನಿರ್ದಿಷ್ಟ ತಿಂಗಳ ಸ್ಟೇಟ್‌ಮೆಂಟ್‌ನಲ್ಲೇ ಸೂಚಿಸಿರಲಾಗುತ್ತದೆ. ಸ್ಟೇಟ್‌ಮೆಂಟ್ ಮೂಲಕ ಕಾರ್ಡ್ ಸದಸ್ಯರಿಗೆ ಸೂಚಿಸಲಾಗಿರುವಂತೆ, ಒಂದು ನಿರ್ದಿಷ್ಟ ತಿಂಗಳಿನಲ್ಲಿ ಬಾಕಿ ಇರುವ ಇಎಮ್ಐ ಮೊತ್ತವನ್ನು ಮಾಸಿಕ ಆಧಾರದ ಮೇಲೆ ಕಾರ್ಡ್ ಸದಸ್ಯರ ಕಾರ್ಡ್ ಖಾತೆಗೆ ಡೆಬಿಟ್ ಮಾಡಲು, ಕಾರ್ಡ್ ಸದಸ್ಯರು  ಐಸಿಐಸಿಐ ಬ್ಯಾಂಕ್‌ಗೆ ಅಧಿಕಾರ ನೀಡಿರುತ್ತಾರೆ. ಕಾರ್ಡ್ ಸದಸ್ಯರು ಮರುಪಾವತಿ ಮಾಡಿದ ನಂತರ, ನಗದುಹಣ ಮಿತಿ/ಕ್ರೆಡಿಟ್ ಮಿತಿಯನ್ನು, ಕಾರ್ಡ್ ಸದಸ್ಯರು ಮರುಪಾವತಿಸಿದ ಇಎಮ್ಐ ಮೊತ್ತದ ಮಿತಿಯವರೆಗೆ ವಿಸ್ತರಿಸಲಾಗುತ್ತದೆ.

ಕಾರ್ಡ್ ಸದಸ್ಯರು, ಸ್ಟೇಟ್‌ಮೆಂಟ್‌ನಲ್ಲಿ ಸೂಚಿಸಿರುವಂತೆ,  ಪೇಮೆಂಟ್ ಡ್ಯೂಡೇಟ್‌ನಲ್ಲಿ ಆ ನಿರ್ದಿಷ್ಟ ತಿಂಗಳ ಇಎಮ್ಐನ ಒಟ್ಟೂ ಮೊತ್ತವನ್ನು ಪಾವತಿಸಬೇಕು ಹಾಗೂ ಅದನ್ನು ಮುಂದಿನ ಸ್ಟೇಟ್‌ಮೆಂಟ್‌ಗೆ ಕೊಂಡೊಯ್ಯುವುದಕ್ಕೆ/ಸೇರಿಸುವುದಕ್ಕೆ ಅನುಮತಿ ಇಲ್ಲ, ನಿರ್ದಿಷ್ಟಗೊಳಿಸಲಾಗಿರುವಂತೆ ಪೇಮೆಂಟ್ ಡ್ಯೂಡೇಟ್‌ನಲ್ಲಿ ಪಾವತಿ ಮಾಡದಿದ್ದಲ್ಲಿ, ಅದನ್ನು ಕಾರ್ಡ್ ಸದಸ್ಯರ ಪಾವತಿ ವೈಫಲ್ಯ ಎಂದು ಪರಿಗಣಿಸಿ ಕಾರ್ಡ್ ಸದಸ್ಯರು ಬಡ್ಡಿಸಮೇತ ಆ ಮೊತ್ತವನ್ನು ಮರುಪಾವತಿಸಬೇಕಾಗುತ್ತದೆ, ಹಾಗೂ ತಾರಿಫ್ ಅನುಬಂಧದಲ್ಲಿ ನಿರ್ದಿಷ್ಟಗೊಳಿಸಲಾಗಿರುವಂತೆ,  ಅವರ ಸೌಲಭ್ಯ ಹಾಗು ವಿಳಂಬಿತ ಪಾವತಿ ಶುಲ್ಕಗಳನ್ನೂ ಭರಿಸಬೇಕಾಗುತ್ತದೆ.

ಈಸಿ ಬಿಟಿಯಲ್ಲದೆ ಬೇರೆ ಸಂದರ್ಭಗಳಲ್ಲಿ ಸೌಲಭ್ಯದ ಮೊತ್ತವು ಒಟ್ಟೂ ಮೊತ್ತದ  ಭಾಗವಾಗಿರುತ್ತದೆ

ಬಾಕಿ ಹಾಗೂ /ಅಥವಾ ಇಎಮ್ಐ ಮೊತ್ತ ಬಾಕಿಯನ್ನು ಕ್ರಮವಾಗಿ, ಅನುಬಂಧ VI ಹಾಗೂ XXXIV ರಲ್ಲಿ ಒದಗಿಸಿರುವ ವಿಧಾನದಲ್ಲೇ ಮರುಪಾವತಿಸಬೇಕು.

ಒಂದು ವೇಳೆ ಕಾರ್ಡ್ ಸದಸ್ಯರು ಬಡ್ಡಿರಹಿತ ಬ್ಯಾಲೆನ್ಸ್ ವರ್ಗಾವಣೆ ಸೌಲಭ್ಯ ಪಡೆದುಕೊಂಡಲ್ಲಿ, ನಿರ್ದಿಷ್ಟ ಅವಧಿಗೆ ವರ್ಗಾವಣೆ ಮಾಡಲಾದ ಅಸಲು ಮೊತ್ತ ಮಾತ್ರ ಬಡ್ಡಿರಹಿತವಾಗಿರುತ್ತದೆ. ಈ ಸೌಲಭ್ಯವನ್ನು ಪಡೆದುಕೊಂಡ ನಂತರ ಕಾರ್ಡ್  ಸದಸ್ಯರು ಒಟ್ಟೂ ಮೊತ್ತ  ಬಾಕಿಯಲ್ಲಿ ಭಾಗಶಃ ಮೊತ್ತವನ್ನು ಮಾತ್ರ ಮರುಪಾವತಿಸಿದರೆ, ಮೊತ್ತವನ್ನು ಸರಿಪಡಿಸಿ, ಮೇಲಿನ ಅನುಬಂಧ VI (I) ರಲ್ಲಿ ತಿಳಿಸಲಾಗಿರುವ ನಿಯಮಗಳು ಹಾಗು ನಿಬಂಧನೆಗಳ ಪ್ರಕಾರ,  ಅದಕ್ಕೆ ಬಡ್ಡಿ ಹಾಗೂ ಸೇವಾಶುಲ್ಕಗಳನ್ನು ವಿಧಿಸಲಾಗುತ್ತದೆ.

ಒಂದು ವೇಳೆ ಕಾರ್ಡ್ ಸದಸ್ಯರು ಎಲ್‌ಟಿಬಿಟಿ ಸೌಲಭ್ಯ ಪಡೆದುಕೊಂಡರೆ, ಐಸಿಐಸಿಐ ಬ್ಯಾಂಕ್ ನಿರ್ದಿಷ್ಟಗೊಳಿಸಿರುವ ಬಡ್ಡಿದರವು ವರ್ಗಾವಣೆಯಾದ ಅಸಲು ಮೊತ್ತಕ್ಕೆ ಮಾತ್ರ ಅನ್ವಯಿಸುತ್ತದೆ. ಈ ಸೌಲಭ್ಯವನ್ನು ಪಡೆದುಕೊಂಡ ನಂತರ ಕಾರ್ಡ್ ಸದಸ್ಯರು ಒಟ್ಟೂ ಮೊತ್ತ ಬಾಕಿಯಲ್ಲಿ ಭಾಗಶಃ ಮೊತ್ತವನ್ನು ಮಾತ್ರ ಮರುಪಾವತಿಸಿದರೆ, ಮೊತ್ತವನ್ನು ಸರಿಪಡಿಸಿ, ಮೇಲಿನ ಅನುಬಂಧ VI (I) (c)ದಲ್ಲಿ ತಿಳಿಸಲಾಗಿರುವ ನಿಯಮಗಳು ಹಾಗು ನಿಬಂಧನೆಗಳ ಪ್ರಕಾರ, ಅದಕ್ಕೆ ಬಡ್ಡಿ ಹಾಗೂ ಸೇವಾಶುಲ್ಕಗಳನ್ನು ವಿಧಿಸಲಾಗುತ್ತದೆ. ಕನಿಷ್ಟ ಮೊತ್ತ ಬಾಕಿಯನ್ನು ಲೆಕ್ಕ ಹಾಕುವಾಗ, ವರ್ಗಾವಣೆ ಮಾಡಿದ ಅಸಲು ಬಾಕಿಯ 5%ಅನ್ನು ಪರಿಗಣಿಸಲಾಗುತ್ತದೆ.

**ಸೌಲಭ್ಯದ ಮುಂಗಡ ಇತ್ಯರ್ಥ(ಫೋರ್‌ಕ್ಲೋಶರ್):**

ಪಡೆದುಕೊಂಡ ಸೌಲಭ್ಯವು ಈಸಿ ಬಿಟಿ ಆಗಿದ್ದ ಸಂದರ್ಭದಲ್ಲಿ ಸೌಲಭ್ಯವನ್ನು ಸೌಲಭ್ಯದ ಮರುಪಾವತಿ ಅವಧಿಯ ಮುನ್ನವೇ ಇತ್ಯರ್ಥಗೊಳಿಸಿದರೆ/ಮುಗಿಸಿದರೆ, ಇತ್ಯರ್ಥಗೊಳಿಸುವ/ಮುಗಿಸುವ ಸಮಯದಲ್ಲಿ ಬಾಕಿ ಇರುವ ಸೌಲಭ್ಯದ ಮೊತ್ತ, ಅದರ ಮೇಲಿನ ಬಡ್ಡಿ ಹಾಗು ಸೌಲಭ್ಯಕ್ಕೆ ಸಂಬಂಧಿಸಿದ ಇತರ ಎಲ್ಲಾ ಹಣವನ್ನೂ ಕಾರ್ಡ್ ಸದಸ್ಯರು ಕೂಡಲೇ ಮರುಪಾವತಿಸಬೇಕಾಗುತ್ತದೆ. ಮುಂಗಡ ಇತ್ಯರ್ಥವನ್ನು ಪಡೆದುಕೊಳ್ಳಲು ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ನ ಕಸ್ಟಮರ್ ಕೇರ್ ಸೆಂಟರ್‌ಅನ್ನು ಯಾವ ಸಮಯದಲ್ಲಾದರೂ ಸಂಪರ್ಕಿಸಬಹುದು. ಸೌಲಭ್ಯವನ್ನು ಅನುಮೋದಿಸುವ ಸಮಯದಲ್ಲಿ ಕಾರ್ಡ್ ಸದಸ್ಯರಿಗೆ ಕಳುಹಿಸಲಾದ ಸಂವಹನದಲ್ಲಿ ಐಸಿಐಸಿಐ ಬ್ಯಾಂಕ್ ಸೂಚಿಸಿರುವಂತೆ, ಕಾರ್ಡ್ ಸದಸ್ಯರು ಅಂತಹ ಮುಂಗಡ ಇತ್ಯರ್ಥ/ತೀರುವಳಿ ಶುಲ್ಕಗಳನ್ನು ಮರುಪಾವತಿಸಬೇಕಾಗುತ್ತದೆ.

ಐಸಿಐಸಿಐ ಬ್ಯಾಂಕ್, ಎಲ್ಲಾ ಹಕ್ಕುಗಳು ಹಾಗೂ ಪರಿಹಾರಗಳಿಗೆ ಯಾವುದೇ ಪೂರ್ವಾಗ್ರಹವಿಲ್ಲದಂತೆ, ಕಾರ್ಡ್ ಸದಸ್ಯರು ಸತತವಾಗಿ ಎರಡು ತಿಂಗಳು ಇಎಮ್‌ಐಗಳನ್ನು ಪಾವತಿಸಲು ವಿಫಲರಾದಲ್ಲಿ, ಸೌಲಭ್ಯ, ಅದರ ಬಡ್ಡಿ ಹಾಗೂ ಸೌಲಭ್ಯಕ್ಕೆ ಸಂಬಂಧಿಸಿದ ಇತರ ಎಲ್ಲಾ ಹಣವನ್ನೂ ಕೂಡಲೇ ಮರುಪಾವತಿಸುವಂತೆ ಕಾರ್ಡ್ ಸದಸ್ಯರಿಗೆ ಸೂಚನೆ ನೀಡುವ ಅಧಿಕಾರವನ್ನು ಹೊಂದಿರುತ್ತದೆ ಹಾಗೂ ಆ ರೀತಿಯ ಬೇಡಿಕೆಯ ನಂತರ, ಕಾರ್ಡ್ ಸದಸ್ಯರು ಅಂತಹ ಎಲ್ಲಾ ಮೊತ್ತವನ್ನೂ ಕಡ್ಡಾಯವಾಗಿ ಮರುಪಾವತಿಸಬೇಕಾಗುತ್ತದೆ.

**ಸೌಲಭ್ಯದ ರದ್ದತಿ :**

ಕಾರ್ಡ್ ಸದಸ್ಯರು,ಐಸಿಐಸಿಐ ಬ್ಯಾಂಕ್‌ನ ಕಸ್ಟಮರ್ ಕೇರ್ ಸೆಂಟರ್‌ಅನ್ನು ಸಂಪರ್ಕಿಸುವ ಮೂಲಕ ಸೌಲಭ್ಯದ ಅನುಮೋದನೆಯ 15 ದಿನಗಳೊಳಗೆ ಅದನ್ನು ರದ್ದುಗೊಳಿಸಿಕೊಳ್ಳಬಹುದು. ಅಂತಹ ರದ್ದತಿಗಳಿಗೆ ಡಿಮಾಂಡ್ ಡ್ರಾಫ್ಟ್‌ಅನ್ನು ಕ್ರೆಡಿಟ್ ಕಾರ್ಡ್ ಆಪರೇಶನ್ಸ್, ಐಸಿಐಸಿಐ ಬ್ಯಾಂಕ್ ಲಿಮಿಟೆಡ್,ಸಿ ವಿಂಗ್,ಆಟಮ್ನ್ ಎಸ್ಟೇಟ್ಸ್.

ಚಾಂದಿವಿಲಿ ಫಾರ್ಮ್ ರೋಡ್ ,ಚಾಂದಿವಲಿ, ನೆಕ್ಸ್ಟು ಚಾಮದಿವಲ್ಲಿ ಸ್ಟುಡಿಯೋ, ಮ್ಹಾಡಾ ಎದುರು. ಅಂಧೇರಿ -ಪೂರ್ವ, ಮುಂಬಯಿ - 400072ಗೆ ಹಿಂದಿರುಗಿಸುವ ಮೂಲಕ, ಹಾಗೂ ಕಾರ್ಡ್ ಸದಸ್ಯರು ಅಥವಾ ಫಲಾನುಭವಿಗಳು ಡಿಮಾಂಡ್ ಡ್ರಾಫ್ಟ್‌ಅನ್ನು ನಗದೀಕರಿಸಿಕೊಳ್ಳದಿರುವ ಮೂಲಕ ನೆರವೇರಿಸಿಕೊಳ್ಳಬಹುದು.

## XIV ಸಪ್ಲಿಮೆಂಟರಿ ಕಾರ್ಡ್

ಪ್ರಾಥಮಿಕ ಕಾರ್ಡ್ ಸದಸ್ಯರ ಕುಟುಂಬದವರಿಗಾಗಿ ಆ್ಯಡ್-ಆನ್ ಕಾರ್ಡ್‌ಗಾಗಿ ಪ್ರಾಥಮಿಕ ಕಾರ್ಡ್ ಸದಸ್ಯರ ಕೋರಿಕೆಯನ್ನು ಪಡೆದ ನಂತರ, ಐಸಿಐಸಿಐ ಬ್ಯಾಂಕ್ ಕಾಲಕಾಲಕ್ಕೆ ನಿರ್ಧರಿಸಿದಂತಹ ನಿಯಮಗಳು ಹಾಗೂ ನಿಬಂಧನೆಗಳಿಗೆ ಅನುಗುಣವಾಗಿ ಐಸಿಐಸಿಐ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಪ್ರಾಥಮಿಕ ಕಾರ್ಡ್‌ನ ಕುಟುಂಬ ಸದಸ್ಯರಿಗೆ ಸಪ್ಲಿಮೆಂಟರಿ ಕಾರ್ಡ್ ಅನ್ನು ನೀಡುತ್ತದೆ.

ಸಪ್ಲಿಮೆಂಟರಿ ಕಾರ್ಡಿನ ಬಳಕೆಯಿಂದ ಈ ನಿಯಮಗಳು ಹಾಗೂ ನಿಬಂಧನೆಗಳನ್ನು ಸ್ವೀಕರಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಯಾವುದೇ ಸಪ್ಲಿಮೆಂಟರಿ ಕಾರ್ಡ್ ಹೊಂದಿದವರು ಹಾಗೂ ಅದರ ವಿತರಣೆಗೆ ಅಧಿಕಾರ ನೀಡುವ ಪ್ರಾಥಮಿಕ ಕಾರ್ಡ್ ಸದಸ್ಯರು, ಈ ನಿಯಮಗಳು ಹಾಗೂ ನಿಬಂಧನೆಗಳು / ಪಾವತಿಗಾಗಿ ಜಂಟಿಯಾಗಿ ಹಾಗೂ ಪ್ರತ್ಯೇಕವಾಗಿ ಬದ್ಧ / ಹೊಣೆಗಾರರಾಗಿರುತ್ತಾರೆ, ಆದರೆ ಸಪ್ಲಿಮೆಂಟರಿ ಕಾರ್ಡ್ ಅಡಿಯಲ್ಲಿನ ಬಾಕಿ ಹಾಗೂ ಪಾವತಿಸಬೇಕಾದ ಎಲ್ಲಾ ಶುಲ್ಕಗಳ ಪಾವತಿಯನ್ನು ಖಚಿತಪಡಿಸಿಕೊಳ್ಳುವುದು ಪ್ರಾಥಮಿಕ ಕಾರ್ಡ್ ಸದಸ್ಯರ ಜವಾಬ್ದಾರಿಯಾಗಿರುತ್ತದೆ. ಸಪ್ಲಿಮೆಂಟರಿ ಕಾರ್ಡ್, ಐಸಿಐಸಿಐ ಬ್ಯಾಂಕ್ ಕಾಲಕಾಲಕ್ಕೆ ನಿಗದಿಪಡಿಸಬಹುದಾದಂತಹ ಶುಲ್ಕ / ದರದಲ್ಲಿ ವಿಶೇಷ ಸೌಲಭ್ಯವಾಗಿದ್ದು ಸಪ್ಲಿಮೆಂಟರಿ ಕಾರ್ಡ್ ಸದಸ್ಯರ ಸದಸ್ಯತ್ವದ ಮುಂದುವರಿಕೆಯು ಪ್ರಾಥಮಿಕ ಕಾರ್ಡ್ ಸದಸ್ಯರ ಸದಸ್ಯತ್ವದ ಮುಂದುವರಿಕೆಯ ಮೇಲೆ ಅವಲಂಬಿತವಾಗಿರುತ್ತದೆ.

## XV. ಬಿಲ್ಲಿಂಗ್

ಕಾರ್ಡ್ ಬಳಕೆಯಿಂದ ಉಂಟಾಗುವ ಎಲ್ಲಾ ಶುಲ್ಕಗಳು ಹಾಗೂ ಕಾರ್ಡ್ ಖಾತೆಗೆ ಅನ್ವಯವಾಗುವ ಎಲ್ಲಾ ಶುಲ್ಕಗಳಿಗೆ ಮಾಸಿಕ ಆಧಾರದ ಮೇಲೆ ಎಲ್ಲಾ ಕಾರ್ಡ್‌ನ ಸದಸ್ಯರಿಗೂ ಬಿಲ್ ಮಾಡಲಾಗುತ್ತದೆ. ಕಾರ್ಡ್ ಸದಸ್ಯರಿಗೆ ಹೇಳಿಕೆಯನ್ನು ರವಾನಿಸುವಲ್ಲಿ ಯಾವುದೇ ವಿಳಂಬವಾಗದಂತೆ ಐಸಿಐಸಿಐ ಬ್ಯಾಂಕ್ ಪ್ರಯತ್ನಿಸುತ್ತದೆ.

ಆದಾಗ್ಯೂ, ಹಿಂದಿನ ತಿಂಗಳ ಅವಧಿಯಲ್ಲಿ ಯಾವುದೇ ಬಾಕಿ ಉಳಿದಿರದಿದ್ದಲ್ಲಿ ಹಾಗೂ ಕಾರ್ಡ್ ಖಾತೆಯಲ್ಲಿ ಯಾವುದೇ ವಹಿವಾಟು ಇಲ್ಲದಿದ್ದಲ್ಲಿ ಯಾವುದೇ ಹೇಳಿಕೆಯನ್ನು ತಯಾರಿಸದೇ ಇರಬಹುದು.

ಕೇವಲ ಕಾರ್ಡ್ ಸದಸ್ಯರಿಗೆ ಮಾತ್ರ ಹೇಳಿಕೆಯು ದೊರೆಯುವುದನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಭದ್ರತೆಯೊಂದಿಗೆ ಆನ್‌ಲೈನ್‌ನಲ್ಲಿ ಸ್ಟೇಟ್‌ಮೆಂಟ್ ನೀಡಲು ಐಸಿಐಸಿಐ ಬ್ಯಾಂಕ್ ಪ್ರಯತ್ನಿಸುತ್ತದೆ. ಯಾವುದೇ ಕಾರಣಕ್ಕೂ ಹೇಳಿಕೆಗಳನ್ನು ಕಳುಹಿಸಲು ಐಸಿಐಸಿಐ ಬ್ಯಾಂಕಿನಿಂದ ಯಾವುದೇ ವಿಳಂಬವಿಲ್ಲದೆಯೇ ಹೇಳಿಕೆಯು ದೊರೆಯದಿದ್ದಲ್ಲಿ, ಕಾರ್ಡ್ ಸದಸ್ಯರು ಚಾರ್ಜ್ ಸ್ಲಿಪ್‌ಗಳ ಪ್ರತಿಗಳನ್ನು ಬಳಸಿ ಅಥವಾ ಐಸಿಐಸಿಐ ಬ್ಯಾಂಕ್ ಗ್ರಾಹಕ ಸೇವಾ ಕೇಂದ್ರಕ್ಕೆ ಕರೆ ಮಾಡುವ ಮೂಲಕ ಎಲ್ಲಾ ಬಾಕಿಗಳ ಮೊತ್ತವನ್ನು ಲೆಕ್ಕಮಾಡಿ, ಐಸಿಐಸಿಐ ಬ್ಯಾಂಕ್‌ಗೆ ಪಾವತಿ ಮಾಡಬೇಕಾದ ದಿನಾಂಕದಂದು ಪಾವತಿಸಬೇಕು.

''ಇಎಂಐ'' ಅಥವಾ ''ಸಮನಾದ ಮಾಸಿಕ ಕಂತು'' ಎಂದರೆ ಐಸಿಐಸಿಐ ಬ್ಯಾಂಕ್‌ಗೆ ಕಾರ್ಡ್ ಸದಸ್ಯರು ಪಾವತಿಸುವ ಮೊತ್ತದ ಸಮನಾದ ಮಾಸಿಕ ಕಂತು, ಇದರಲ್ಲಿ ಮೂಲ ಮೊತ್ತ, ಬಡ್ಡಿ ಹಾಗೂ ಯಾವುದೇ / ಅಥವಾ ಇತರ ಶುಲ್ಕಗಳು ಸೇರಿರುತ್ತವೆ.

ಇಎಂಐ ಆಗಿ ಪರಿವರ್ತಿಸುವ ಆಯ್ಕೆ ಲಭ್ಯವಿರುವ ಐಸಿಐಸಿಐ ಬ್ಯಾಂಕ್ ಇಡಿಸಿ (ಎಲೆಕ್ಟ್ರಾನಿಕ್ ಡೇಟಾ ಕ್ಯಾಪ್ಚರ್) ಟರ್ಮಿನಲ್ ನಲ್ಲಿ ಕಾರ್ಡ್ ಬಳಸಿ ನಡೆಸುವ ವಹಿವಾಟುಗಳು ಹಾಗೂ / ಅಥವಾ ಅಂತಹ ಆನ್‌ಲೈನ್ ವಹಿವಾಟುಗಳನ್ನು ಕಾರ್ಡ್ ಸದಸ್ಯರ ಕೋರಿಕೆಯ ಮೇರೆಗೆ ಇಎಂಐ ಆಗಿ ಪರಿವರ್ತಿಸುವುದನ್ನು ''ಇನ್ಸ ಟಂಟ್ ಇಎಂಐ'' ಎನ್ನುತ್ತಾರೆ. ಐಸಿಐಸಿಐ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ, ಕಾರ್ಡ್ ಸದಸ್ಯನ ಚಾರ್ಜ್‌ನ ತಕ್ಷಣದ ಪಾವತಿಯನ್ನು ಮಾಡುವ ಬಾಧ್ಯತೆಗೆ ಯಾವುದೇ ಪೂರ್ವಾಗ್ರಹವಿಲ್ಲದೆ ಪ್ರತ್ಯೇಕ ಕಾರ್ಡ್ ಸದಸ್ಯರಿಗೆ, ಕ್ರೆಡಿಟ್ ಕಾರ್ಡ್‌ನಲ್ಲಿ ಇನ್ಸ್ಟಂಟ್ ಇಎಂಐ ಲಭ್ಯವಾಗುವಂತೆ ಮಾಡಲು ಅರ್ಹವಾಗಿದೆ, ಐಸಿಐಸಿಐ ಬ್ಯಾಂಕ್ ಗ್ರಾಹಕ ಸೇವಾ ಕೇಂದ್ರದ ಮೂಲಕ ಕಾರ್ಡ್ ಸದಸ್ಯರಿಗೆ ತಿಳಿಸಿದಂತೆ ಹಾಗೂ ಕಾರ್ಡ್ ಸದಸ್ಯರಿಗೆ ಕಳುಹಿಸಿದ ಹೇಳಿಕೆಯಲ್ಲಿ ಸೂಚಿಸಿದಂತೆ ಸಮನಾದ ಮಾಸಿಕ ಕಂತುಗಳ (ಇಎಂಐ) ಮೂಲಕ ಕೆಲವು ಖರೀದಿಗಳಿಗೆ ಪಾವತಿಸುವ ಆಯ್ಕೆಯನ್ನು ಕಾರ್ಡ್ ಸದಸ್ಯರು ಮಾಡಬಹುದಾಗಿದ್ದು, ಅದು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ:

(i) ಒಮ್ಮೆ ಕಾರ್ಡ್ ಸದಸ್ಯರು ಇನ್ಸ್ಟಂಟ್ ಇಎಂಐ ಪಾವತಿಯನ್ನು ಆರಿಸಿಕೊಂಡಲ್ಲಿ, ನಂತರದ ಯಾವುದೇ ಬದಲಾವಣೆಯು, ಖರೀದಿಯ ಸ್ವರೂಪವನ್ನು ಅವಲಂಬಿಸಿ ಐಸಿಐಸಿಐ ಬ್ಯಾಂಕ್ ಕಾಲಕಾಲಕ್ಕೆ ನಿಗದಿಪಡಿಸಬಹುದಾದ ಪೂರ್ವ-ಮುಕ್ತಾಯದ ಶುಲ್ಕವನ್ನು ಆಕರ್ಷಿಸುತ್ತದೆ. ಇಎಂಐ ಮುಕ್ತಾಯದ ಸೌಲಭ್ಯವನ್ನು ಪಡೆಯಲು ಐಸಿಐಸಿಐ ಬ್ಯಾಂಕಿನ ಗ್ರಾಹಕ ಸೇವೆಯನ್ನು ಸಂಪರ್ಕಿಸುವ ಮೂಲಕ ಕಾರ್ಡ್ ಸದಸ್ಯರು ಯಾವುದೇ ಸಮಯದಲ್ಲಿ ಸೌಲಭ್ಯವನ್ನು (ಬಾಕಿ ಮೊತ್ತದ ಪೂರ್ವಪಾವತಿ) ಮುಕ್ತಾಯ ಮಾಡಬಹುದು. ಬಾಕಿ ಇರುವ ಅಸಲು ಮೊತ್ತದ ಮೇಲೆ 3% ಪೂರ್ವ-ಮುಕ್ತಾಯದ ಶುಲ್ಕಗಳು

ಹಾಗೂ ಮುಂದಿನ ತಿಂಗಳ ಬಡ್ಡಿಯನ್ನು ಕಾರ್ಡ್ ಖಾತೆಗೆ ವಿಧಿಸಲಾಗುತ್ತದೆ. ಸೌಲಭ್ಯದ ಸಂಪೂರ್ಣ ಪೂರ್ವಪಾವತಿಗಾಗಿ ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್ ಗ್ರಾಹಕ ಸೇವೆಯನ್ನು ಕಡ್ಡಾಯವಾಗಿ ಸಂಪರ್ಕಿಸಬೇಕು .;

(ii) ಬಿಲ್ ಹಾಗೂ ಬಾಕಿ ಇರುವ ಶುಲ್ಕಗಳ ಯಾವುದೇ ಭಾಗವನ್ನು ಇನ್ಸ್ಟಂಟ್ ಇಎಂಐಗಳಲ್ಲಿ ಪಾವತಿಸಲು ಅನುಮತಿಸದಿದ್ದಲ್ಲಿ ಹಾಗೂ ಅಂತಹ ಭಾಗವನ್ನು ಪಾವತಿ ದಿನಾಂಕದೊಳಗೆ ಪಾವತಿಸದಿದ್ದರೆ, ಅದಕ್ಕೆ ಅನುಚ್ಛೇದ VI ರಲ್ಲಿ ಹೇಳಿದ ರೀತಿಯಲ್ಲಿ ಬಡ್ಡಿ, ಸೇವಾ ಶುಲ್ಕ ಹಾಗೂ ವಿಳಂಬ ಪಾವತಿ ಶುಲ್ಕಗಳನ್ನು ವಿಧಿಸಲಾಗುತ್ತದೆ;

(iii) ಇನ್‌ಸ್ಟಂಟ್ ಇಎಂಐ ಸೌಲಭ್ಯವು ಕ್ರೆಡಿಟ್ ಕಾರ್ಡ್‌ಗೆ ಸಂಬಂಧಿಸಿದಂತೆ ಲಭ್ಯವಿದ್ದು, ಅದು ಪ್ರಸ್ತುತ ಈ ಕೆಳಗಿನ ಖರೀದಿಗಳನ್ನು ಒಳಗೊಂಡಿದೆ, ಅಂದರೆ, (ಎ) ವ್ಯಾಪಾರಿ ಸಂಸ್ಥೆಯಲ್ಲಿ ಹೊಸ ಖರೀದಿಗಳು; (ಬಿ) ಐಸಿಐಸಿಐ ಬ್ಯಾಂಕ್ ಗ್ರಾಹಕ ಸೇವಾ ಕೇಂದ್ರದ ಮೂಲಕ ವ್ಯಾಪಾರಿ ಸಂಸ್ಥೆಯಲ್ಲಿ ಮಾಡಿದ ಹಿಂದಿನ ಖರೀದಿಗಳ ಪರಿವರ್ತನೆಗಳು.

(iv) ಇನ್ಸ್ಟಂಟ್ ಇಎಂಐ ಸೌಲಭ್ಯವು ಕಾರ್ಡ್ ಸದಸ್ಯರಿಗೆ ಐಸಿಐಸಿಐ ಬ್ಯಾಂಕಿನ ಸ್ವಂತ ವಿವೇಚನೆಯಿಂದ ಲಭ್ಯವಿರುತ್ತದೆ ಹಾಗೂ ಅಂತಹ ಸೌಲಭ್ಯವು ಇವುಗಳಿಗೆ ಲಭ್ಯವಿರುತ್ತದೆ:

(ಎ) ಐಸಿಐಸಿಐ ಬ್ಯಾಂಕ್ ನಿರ್ಧರಿಸಬಹುದಾದ ವ್ಯಾಪಾರಿ ಸಂಸ್ಥೆಗಳು ಹಾಗೂ ಅವಧಿಗೆ;

(ಬಿ) ಇನ್ಸ್ಟಂಟ್ ಇಎಂಐಗಳ ಬಡ್ಡಿಯ ಅಂಶವು ಐಸಿಐಸಿಐ ಬ್ಯಾಂಕ್ ನಿರ್ಧರಿಸಿದಂತೆ ಕಾರ್ಡ್ ಸದಸ್ಯ ನಿರ್ದಿಷ್ಟ ಹಾಗೂ ವ್ಯಾಪಾರಿ ನಿರ್ದಿಷ್ಟವಾಗಿರುತ್ತದೆ;

(ಸಿ) ಡೌನ್ ಪೇಮೆಂಟ್ ಮೊತ್ತ, ವಹಿವಾಟು ಶುಲ್ಕದ ಮೊತ್ತ, ಇನ್ಸ್ಟಂಟ್ ಇಎಂಐ ಪಾವತಿಯ ಅವಧಿ ಹಾಗೂ ಇತರ ಪಾವತಿ ವಿವರಗಳು ಐಸಿಐಸಿಐ ಬ್ಯಾಂಕ್ ನಿರ್ಧಾರದಂತೆ ಕಾರ್ಡ್ ಸದಸ್ಯ ನಿರ್ದಿಷ್ಟ ಹಾಗೂ ವ್ಯಾಪಾರಿ ನಿರ್ದಿಷ್ಟವಾಗಿರುತ್ತದೆ. ಇನ್ಸ್ಟಂಟ್ ಇಎಂಐನ ಈ ಸೌಲಭ್ಯವು ಬಿಸಿನೆಸ್ ಕಾರ್ಡ್, ಕಾರ್ಪೊರೇಟ್ ಕಾರ್ಡ್, ಇಎಂಐ ಕಾರ್ಡ್ ಹಾಗೂ ಅಮೇರಿಕನ್ ಎಕ್ಸ್‌ಪ್ರೆಸ್ ಕಾರ್ಡ್‌ಗಳಲ್ಲಿ ಲಭ್ಯವಿಲ್ಲ

## XVII ಆಟೋ ಡೆಬಿಟ್ ಸೌಲಭ್ಯ

ಕಾರ್ಡ್ ಬಾಕಿ ಪಾವತಿಗಳನ್ನು ಮಾಡಲು ಕಾರ್ಡ್ ಸದಸ್ಯರು ಆಟೋ ಡೆಬಿಟ್ ಸೌಲಭ್ಯವನ್ನು ಪಡೆಯಬಹುದು. ಆಟೋ ಡೆಬಿಟ್ ಸೌಲಭ್ಯವನ್ನು ಪಡೆದ ನಂತರ, ಕಾರ್ಡ್ ಸದಸ್ಯರಿಗೆ ಕಳುಹಿಸಿದ ಹೇಳಿಕೆಯಲ್ಲಿ ಸೂಚಿಸಿದಂತೆ ಪಾವತಿ ಮಾಡಬೇಕಾದ ದಿನಾಂಕದಂದು ಕಾರ್ಡ್ ಸದಸ್ಯರ ಬ್ಯಾಂಕ್ ಖಾತೆಗೆ (ಅದರ ವಿವರಗಳನ್ನು ಐಸಿಐಸಿಐ

ಬ್ಯಾಂಕ್‌ಗೆ ನೀಡಬೇಕಾಗುವುದು) ಡೆಬಿಟ್ ಮಾಡಲಾಗುತ್ತದೆ.  ಆದಾಗ್ಯೂ, ಪಾವತಿ ಮಾಡಬೇಕಾದ ದಿನಾಂಕವು ವ್ಯವಹಾರದ ದಿನವಾಗಿರಬೇಕು ಇಲ್ಲದಿದ್ದಲ್ಲಿ ಮುಂದಿನ ವ್ಯವಹಾರದ ದಿನದಂದು ಬ್ಯಾಂಕ್ ಖಾತೆಯನ್ನು ಡೆಬಿಟ್ ಮಾಡಲಾಗುತ್ತದೆ. ಈ ಬ್ಯಾಂಕ್ ಖಾತೆಯಲ್ಲಿ ಪಾವತಿ ದಿನಾಂಕದಂದು ಅವಶ್ಯವಾದಷ್ಟು ಹಣವಿಲ್ಲದಿದ್ದಲ್ಲಿ, ಕಾರ್ಡ್ ಸದಸ್ಯನು ಕಾರ್ಡ್ ಬಾಕಿಯ ಜೊತೆಗೆ ಅನ್ವಯವಾಗುವ ಎಲ್ಲಾ ಶುಲ್ಕಗಳನ್ನು ಪಾವತಿಸಬೇಕಾಗುತ್ತದೆ. ಆಟೋ ಡೆಬಿಟ್ ಸೌಲಭ್ಯವನ್ನು ಪಡೆಯಲು ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ಗೆ ಸಲ್ಲಿಸಿದ ಎಲ್ಲಾ ವಿವರಗಳು ಸರಿಯಾಗಿವೆ ಹಾಗೂ ಪೂರ್ಣವಾಗಿವೆ ಎಂದು ಕಾರ್ಡ್ ಸದಸ್ಯರು ಒಪ್ಪಿ ದೃಢೀಕರಿಸುತ್ತಾರೆ. ಅಪೂರ್ಣ ಅಥವಾ ತಪ್ಪು ಮಾಹಿತಿ ಅಥವಾ ಬೇರಾವುದೇ ಕಾರಣದಿಂದ ಆಟೋ ಡೆಬಿಟ್ ವಹಿವಾಟು ವಿಳಂಬವಾದಲ್ಲಿ ಅಥವಾ ಕಾರ್ಯಗತವಾಗದಿದ್ದಲ್ಲಿ, ಯಾವುದೇ ಕಾರಣಕ್ಕೂ ಐಸಿಐಸಿಐ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ. ಐಸಿಐಸಿಐ ಬ್ಯಾಂಕಿನ ಪರವಾಗಿ ನೀಡಲಾದ ಕಾರ್ಡ್ ಸದಸ್ಯರ ಆಟೋ ಡೆಬಿಟ್ ಸೂಚನೆಗಳನ್ನು ಬ್ಯಾಂಕ್‌ಗೆ ತಿಳಿಸಲು ಹಾಗೂ ಐಸಿಐಸಿಐ ಬ್ಯಾಂಕಿನ ಪೂರ್ವಾನುಮತಿಯಿಲ್ಲದೆ ಈ ಬ್ಯಾಂಕ್ ಖಾತೆಯನ್ನು ಮುಚ್ಚದಿರಲು ಕಾರ್ಡ್ ಸದಸ್ಯರು ಒಪ್ಪುತ್ತಾರೆ. ಐಸಿಐಸಿಐ ಬ್ಯಾಂಕಿನ ಲಿಖಿತ ಒಪ್ಪಿಗೆಯ ಹೊರತಾಗಿ ಅಂತಹ ಸೂಚನೆಗಳನ್ನು ಹಿಂಪಡೆಯಲು / ರದ್ದುಗೊಳಿಸಲು ಸಾಧ್ಯವಿಲ್ಲ.

## XVIII ಹಿಂತಿರುಗಿಸಿದ ಪಾವತಿಗಳು

ಒಂದು ವೇಳೆ ಕಾರ್ಡ್ ಸದಸ್ಯರು ಪಾವತಿಸಬೇಕಾದ ಬಾಕಿ ಪಾವತಿಗೆ ನೀಡಲಾದ ಚೆಕ್, ಅಥವಾ ಇತರ ಯಾವುದೇ ಪಾವತಿ ಲಿಖಿತಪತ್ರ ಅಥವಾ ಸೂಚನೆಗಳನ್ನು ಮಾನ್ಯವಾಗದಿದ್ದಲ್ಲಿ ಅಥವಾ ಅದನ್ನು ಪ್ರಕ್ರಿಯೆಗೊಳಿಸಲಾಗದ ಕಾರಣದಿಂದ ಕಾರ್ಡ್ ಸದಸ್ಯರಿಗೆ ಹಿಂತಿರುಗಿಸಬೇಕಾದಲ್ಲಿ, ಕಾರ್ಡ್ ಸದಸ್ಯರ ವಿರುದ್ಧ ಕಾನೂನು ಕ್ರಮಗಳನ್ನು ಚಲಾಯಿಸುವ ಹಾಗೂ ತನ್ನ ಸ್ವಂತ ವಿವೇಚನೆಯಿಂದ ಶುಲ್ಕವನ್ನು ವಿಧಿಸುವ ಹಾಗೂ / ಅಥವಾ ತಾತ್ಕಾಲಿಕವಾಗಿ / ಶಾಶ್ವತವಾಗಿ ಕಾರ್ಡ್ ರದ್ದುಗೊಳಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಹೊಂದಿರುತ್ತದೆ. ಐಸಿಐಸಿಐ ಬ್ಯಾಂಕ್ ನಿರ್ಧರಿಸಿದಂತೆ ಚೆಕ್ ಹಿಂತಿರುಗುವಿಕೆಯ ಶುಲ್ಕಗಳು ಹಾಗೂ ವಿಳಂಬ ಪಾವತಿ ಶುಲ್ಕಗಳು ಅಥವಾ ಯಾವುದೇ ಇತರ ಶುಲ್ಕಗಳನ್ನು ಪಾವತಿಸಲು ಕಾರ್ಡ್ ಸದಸ್ಯರು ಜವಾಬ್ದಾರರಾಗಿರುತ್ತಾರೆ.

## XIX. ವಿವಾದಗಳು

ಕ್ರೆಡಿಟ್ ಕಾರ್ಡ್ ಕಳೆದು ಹೋದ, ಕಳುವಾದ ಅಥವಾ ಮೋಸದಿಂದ ದುರುಪಯೋಗವಾದ ಹಾಗೂ ಮೇಲಿನ ಅನುಚ್ಛೇದ IX ರಲ್ಲಿ ನೀಡಲಾಗಿರುವಂತೆ ವರದಿ ಮಾಡದ ಹೊರತು, ಚಾರ್ಜ್ ಸ್ಲಿಪ್ ಅಥವಾ ಇತರ ವಿನಂತಿಯ ಮೇಲೆ ದಾಖಲಾದ ಶುಲ್ಕವನ್ನು ಕಾರ್ಡ್ ಸದಸ್ಯರು ಯುಕ್ತವಾಗಿ ಭರಿಸಿದ್ದಾರೆ ಎಂಬುದಕ್ಕೆ ಪಾವತಿಗಾಗಿ ಐಸಿಐಸಿಐ ಬ್ಯಾಂಕ್ ಸ್ವೀಕರಿಸಿದ ಯಾವುದೇ ಚಾರ್ಜ್ ಸ್ಲಿಪ್ ಅಥವಾ ಇತರ ಪಾವತಿ ವಿನಂತಿಯು ನಿರ್ಣಾಯಕ ಪುರಾವೆಯಾಗಿರುತ್ತದೆ, ಹಾಗೂ ಪುರಾವೆಗಳ ಹೊರೆಯು ಕಾರ್ಡ್ ಸದಸ್ಯರ ಮೇಲೆ ಇರುತ್ತದೆ. ಈ ಅನುಚ್ಛೇದದಲ್ಲಿ ಉಲ್ಲೇಖಿಸಲಾದ ಇತರೆ ಪಾವತಿ ವಿನಂತಿಯು  ಕಾರ್ಡ್‌ದಾರನಿಂದ ಉಂಟಾದ ವ್ಯಾಪಾರಿ

ಸಂಸ್ಥೆಯಲ್ಲಿನ ಅನುಮತಿಸುವ ವೆಚ್ಚಗಳಿಗೆ ಸಂಬಂಧಿಸಿದ ಕಾರ್ಡ್‌ಗಳ ಬಳಕೆಯಿಂದ ಚಾರ್ಜ್ ಆಗಿ ದಾಖಲಾಗಿಲ್ಲದ ಪ್ರತಿಯೊಂದು ಹಾಗೂ ಎಲ್ಲಾ ಪಾವತಿಗಳನ್ನು ಒಳಗೊಂಡಿರುತ್ತದೆ. ಅಂತಹ ಚಾರ್ಜ್ ಸ್ಲಿಪ್‌ಗಳಲ್ಲಿನ ಕಾರ್ಡ್ ಸದಸ್ಯರ ಸಹಿ ಹಾಗೂ ಅದರಲ್ಲಿ ನಮೂದಿಸಿದ ಕಾರ್ಡ್ ಸಂಖ್ಯೆಯು ಕಾರ್ಡ್ ಸದಸ್ಯರ ಸಾಲದ ನಿರ್ಣಾಯಕ ಸಾಕ್ಷಿಯಾಗಿರುತ್ತದೆ. ಎಪಿಐಎನ್ / ಪಾಸ್‌ವರ್ಡ್ / ಯೂಸರ್-ಐಡಿ ಉಪಯೋಗಿಸಿ ಐಸಿಐಸಿಐ ಬ್ಯಾಂಕ್ ಗ್ರಾಹಕ ಸೇವಾ ಕೇಂದ್ರ / ಇನ್ಫಿನಿಟಿ ಪ್ರವೇಶದ ಮೂಲಕ ಐಸಿಐಸಿಐ ಬ್ಯಾಂಕ್ ಗ್ರಾಹಕ ಸೇವಾ ಕೇಂದ್ರ / ಇನ್ಫಿನಿಟಿ ಗೆ ಸೌಲಭ್ಯವನ್ನು ಪಡೆದ ಸಂದರ್ಭದಲ್ಲಿ, ಅದು ಕಾರ್ಡ್ ಸದಸ್ಯರು ವಹಿವಾಟನ್ನು ನಿರ್ವಹಿಸಿದ್ದರ ನಿರ್ಣಾಯಕ ಪುರಾವೆಯಾಗಿರುತ್ತದೆ. ಕಾರ್ಡ್ ಸದಸ್ಯರು ಖರೀದಿಸಿದ ಸರಕು ಅಥವಾ ಸೇವೆಗಳನ್ನು ಸರಿಯಾಗಿ ಸ್ವೀಕರಿಸಿದ್ದಾರೆ ಎಂದು ಐಸಿಐಸಿಐ ಬ್ಯಾಂಕ್‌ಗೆ ಖಚಿತಪಡಿಸಿಕೊಳ್ಳುವ ಅಗತ್ಯವಿರುವುದಿಲ್ಲ. ಹೇಳಿಕೆಯಲ್ಲಿ ಸೂಚಿಸಲಾದ ಶುಲ್ಕವನ್ನು ಕಾರ್ಡ್ ಸದಸ್ಯರು ಒಪ್ಪದಿದ್ದಲ್ಲಿ, ಹೇಳಿಕೆಯನ್ನು ಪಡೆದ 60 (ಅರವತ್ತು) ದಿನಗಳೊಳಗೆ ಐಸಿಐಸಿಐ ಬ್ಯಾಂಕ್‌ಗೆ ಇದನ್ನು ತಿಳಿಸಬೇಕು, ಹಾಗೆ ಮಾಡಲು ವಿಫಲವಾದಲ್ಲಿ ಹೇಳಿಕೆಯಲ್ಲಿ ಸೂಚಿಸಲಾದ ಎಲ್ಲಾ ಶುಲ್ಕಗಳು ಸರಿಯಾಗಿವೆ ಎಂದು ಅರ್ಥೈಸಲಾಗುತ್ತದೆ.

## XX ಭದ್ರತೆ

ಒಂದು ಸುರಕ್ಷಿತ ಕ್ರೆಡಿಟ್ ಕಾರ್ಡ್‌ನ ಸಂದರ್ಭದಲ್ಲಿ, ಇಲ್ಲಿ ನಮೂದಿಸಿದಂತೆ ಒಟ್ಟಾರೆ ಕಾರ್ಡ್ ಖಾತೆಯಲ್ಲಿನ ಉಳಿದಿರುವ ಬಾಕಿ ಹಾಗೂ ಬಡ್ಡಿಸಹಿತವಾದ ಬಾಕಿ ಉಳಿದಿರುವ ಕಾರ್ಡ್ ವಹಿವಾಟುಗಳ ಮೊತ್ತ ಹಾಗೂ ಕಾರ್ಡ್ ಸದಸ್ಯರಿಂದ ಕ್ರೆಡಿಟ್ ಕಾರ್ಡ್ ಬಳಕೆಯ ಸಮಯದಲ್ಲಿ ಪರಿಣಾಮಕಾರಿಯಾಗಿದ್ದು ಆದರೆ ಈ ಸಮಯದಲ್ಲಿ ಕಾರ್ಡ್ ಖಾತೆಗೆ ವಿಧಿಸಿಲ್ಲದ ಇತರ ಎಲ್ಲ ವೆಚ್ಚಗಳು ಹಾಗೂ ಶುಲ್ಕಗಳು, ಐಸಿಐಸಿಐ ಬ್ಯಾಂಕ್ ಅನುಮೋದಿಸಿದಂತಹ ಕಾರ್ಡ್ ಸದಸ್ಯರ ಹೆಸರಿನಲ್ಲಿ ಏಕಾಂಗಿಯಾಗಿ ಅಥವಾ ಜಂಟಿಯಾಗಿ ಯಾವುದೇ ವ್ಯಕ್ತಿ ಅಥವಾ ಮೂರನೇ ವ್ಯಕ್ತಿಯ ಹೆಸರಿನಲ್ಲಿನ ಭದ್ರತೆಗಳು / ಸ್ಥಿರ ಠೇವಣಿಗಳು / ಇತರ ಸ್ವತ್ತುಗಳನ್ನು ಐಸಿಐಸಿಐ ಬ್ಯಾಂಕ್ ಸೂಚಿಸಿದ ವಿಧಾನ / ಹೈಪೋಥೆಕೇಶನ್ ಮೂಲಕ ಸುಭದ್ರಗೊಳಿಸಲಾಗುವುದು. ಭದ್ರತೆಗಾಗಿ ಕಾರ್ಡ್ ಸದಸ್ಯರು ಆ ಎಲ್ಲಾ ದಾಖಲೆಗಳನ್ನು ಐಸಿಐಸಿಐ ಬ್ಯಾಂಕ್‌ಗೆ ಒಪ್ಪಿಗೆಯಾಗುವ ರೂಪ ಹಾಗೂ ವಿಧಾನದಲ್ಲಿ ನೀಡಬೇಕು. ಭದ್ರತೆಯ ರಚನೆ ಹಾಗೂ ಮುದ್ರಾಂಕ ಶುಲ್ಕ ಸೇರಿದಂತೆ, ಆದರೆ ಅದಷ್ಟೇ ಅಲ್ಲದೆ, ಇತರ ಎಲ್ಲಾ ಔಪಚಾರಿಕತೆಗಳನ್ನು ಪೂರ್ಣಗೊಳಿಸುವಲ್ಲಿ ಉಂಟಾಗುವ ವೆಚ್ಚಗಳನ್ನು ಕಾರ್ಡ್ ಸದಸ್ಯರು ಭರಿಸಬೇಕು.

## XXI. ಸಂಗ್ರಹಣೆಗಳು

ಕಾರ್ಡ್ ಸದಸ್ಯರ ಬಾಕಿ ವಸೂಲಿಗಾಗಿ ಹಾಗೂ / ಅಥವಾ ಕಾರ್ಡ್ ಸದಸ್ಯರಿಂದ ಒದಗಿಸಲಾದ ಯಾವುದೇ ಭದ್ರತೆಯನ್ನು ಕಾರ್ಡ್ ಸದಸ್ಯರ ವೈಯಕ್ತಿಕ ಅಪಾಯ ಹಾಗೂ ವೆಚ್ಚದಿಂದಲೇ ಜಾರಿಗೊಳಿಸಲು ಐಸಿಐಸಿಐ ಬ್ಯಾಂಕ್‌ಗೆ ಅಧಿಕಾರವಿರುತ್ತದೆ ಹಾಗೂ ಐಸಿಐಸಿಐ ಬ್ಯಾಂಕ್‌ಗೆ ಸೂಕ್ತವೆನಿಸುವಂತಹ ಕಾರ್ಡ್ ಸದಸ್ಯರು ಹಾಗೂ

ಭದ್ರತೆಗೆ ಸಂಬಂಧಿಸಿದ ಅಂಕಿಅಂಶಗಳನ್ನು ಅಂತಹ ವ್ಯಕ್ತಿಗಳಿಗೆ (ಮಾಹಿತಿ) ಐಸಿಐಸಿಐ ಬ್ಯಾಂಕ್ (ಅಂತಹ ಉದ್ದೇಶಗಳಿಗಾಗಿ) ನೀಡಬಹುದು. ಐಸಿಐಸಿಐ ಬ್ಯಾಂಕ್‌ಗೆ ಸೂಕ್ತವೆಂದು ತೋರುವ, ಎಲ್ಲಾ ಕೆಲಸ, ಕಾರ್ಯಗಳು, ವಿಷಯಗಳು ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕ ವಿಷಯಗಳನ್ನು ಕಾರ್ಯಗತಗೊಳಿಸುವ ಹಾಗೂ ನಿರ್ವಹಿಸುವ ಹಕ್ಕು ಹಾಗೂ ಅಧಿಕಾರವನ್ನು ಐಸಿಐಸಿಐ ಬ್ಯಾಂಕ್ ಅಂತಹ ವ್ಯಕ್ತಿಗಳಿಗೆ ನಿಯೋಜಿಸಬಹುದು.

## XXII. ಸರಕುಗಳು ಹಾಗೂ ಸೇವೆಗಳ ಗುಣಮಟ್ಟ

ಐಸಿಐಸಿಐ ಬ್ಯಾಂಕ್, ಯಾವುದೇ ರೀತಿಯಲ್ಲಿ, ವ್ಯಾಪಾರಿ ಸಂಸ್ಥೆಗಳಿಂದ ಕಾರ್ಡ್ ಸದಸ್ಯರು ಖರೀದಿಸಿದ ಅಥವಾ ಪಡೆದ ಸರಕು, ಸರಕು ಖಾತರಿ ಅಥವಾ ವಿತರಣೆಯಲ್ಲಿ ವಿಳಂಬ, ವಿತರಣೆಯಾಗದಿರುವುದು, ಸರಕುಗಳನ್ನು ಪಡೆಯದಿರುವುದು ಅಥವಾ ಕಾರ್ಡ್ ಸದಸ್ಯರಿಂದ ದೋಷಯುಕ್ತ ಸರಕುಗಳನ್ನು ಸ್ವೀಕರಿಸುವುದು ಸೇರಿದಂತೆ ಯಾವುದೇ ಸೇವೆಗಳಿಗೆ ಜವಾಬ್ದಾರರಾಗಿರುವುದಿಲ್ಲ, ಕ್ರೆಡಿಟ್ ಕಾರ್ಡ್ ಎನ್ನುವುದು ಸಂಪೂರ್ಣವಾಗಿ ಕಾರ್ಡ್ ಸದಸ್ಯರಿಗೆ ಸರಕುಗಳನ್ನು ಖರೀದಿಸಲು ಹಾಗೂ / ಅಥವಾ ಸೇವೆಗಳನ್ನು ಪಡೆಯಲು ಕೇವಲ ಒಂದು ಸೌಲಭ್ಯವಾಗಿದೆ ಎಂಬುದನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಬೇಕು, ಸರಕುಗಳ ಗುಣಮಟ್ಟ, ವಿತರಣೆ ಅಥವಾ ಇನ್ನಿತರ ಸೇವೆಗಳ ಬಗ್ಗೆ ಐಸಿಐಸಿಐ ಬ್ಯಾಂಕ್ ಯಾವುದೇ ರೀತಿ ಪ್ರತಿನಿಧಿಸುವುದಿಲ್ಲ ಅಥವಾ ಯಾವುದೇ ಖಾತರಿ ನೀಡುವುದಿಲ್ಲ, ಕಾರ್ಡ್ ಸದಸ್ಯರು ಸರಕುಗಳಿಗೆ ಸಂಬಂಧಿಸಿದ ಯಾವುದೇ ವಿವಾದ ಅಥವಾ ಹಕ್ಕನ್ನು ವ್ಯಾಪಾರಿ ಸಂಸ್ಥೆಯೊಂದಿಗೆ ಪರಿಹರಿಸಿಕೊಳ್ಳಬೇಕು. ಹಕ್ಕು ಅಥವಾ ವಿವಾದಗಳಿರುವ ಕಾರಣದಿಂದ ಕಾರ್ಡ್ ಸದಸ್ಯರಿಗೆ ಐಸಿಐಸಿಐ ಬ್ಯಾಂಕ್‌ಗೆ ಶುಲ್ಕಗಳನ್ನು ಪಾವತಿಸುವ ಬಾಧ್ಯತೆಯಿಂದ ಮುಕ್ತಿ ಸಿಗುವುದಿಲ್ಲ ಹಾಗೂ ಕಾರ್ಡ್ ಸದಸ್ಯರು ಅಂತಹ ಶುಲ್ಕಗಳನ್ನು ತಕ್ಷಣವೇ ಪಾವತಿಸಲು ಒಪ್ಪುತ್ತಾರೆ.

## XXIII ಕ್ರೆಡಿಟ್ ವಹಿವಾಟುಗಳು

ಖರೀದಿಗಾಗಿ ಡೆಬಿಟ್ ಹಾಗೂ ಸರಕು / ಸೇವೆಗಳ ರದ್ದತಿಗಾಗಿ ನಂತರದ ಕ್ರೆಡಿಟ್ ಎರಡೂ ಪ್ರತ್ಯೇಕ ವಹಿವಾಟುಗಳಾಗಿವೆ. ಯಾವುದೇ ಹೆಚ್ಚುವರಿ ಶುಲ್ಕಗಳನ್ನು ವಿಧಿಸುವುದನ್ನು ತಪ್ಪಿಸಲು ಹೇಳಿಕೆಯಲ್ಲಿ ಇರುವಂತೆ ಕಾರ್ಡ್ ಸದಸ್ಯರು ಖರೀದಿ ವಹಿವಾಟಿಗೆ ಪಾವತಿಸಲೇಬೇಕು. ರದ್ದತಿಯ ನಂತರ ಐಸಿಐಸಿಐ ಬ್ಯಾಂಕ್ ಮರುಪಾವತಿಯನ್ನು (ರದ್ದತಿ ಶುಲ್ಕಗಳನ್ನು ಕಳೆದು) ಪಡೆದ ಮೇಲೆ ಕಾರ್ಡ್ ಖಾತೆಗೆ ಜಮಾ ಮಾಡಲಾಗುತ್ತದೆ. ಆದಾಗ್ಯೂ, ಕಾರ್ಡ್ ಸದಸ್ಯರು ಕ್ರೆಡಿಟ್ ಚಾರ್ಜ್ ಸ್ಲಿಪ್ ಅನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ, ಕ್ರೆಡಿಟ್ ಅನ್ನು ಕಾರ್ಡ್ ಖಾತೆಗೆ ಪೋಸ್ಟ್ ಮಾಡಲಾಗುತ್ತದೆ. ಸಮಂಜಸವಾದ ಸಮಯದೊಳಗೆ ಕ್ರೆಡಿಟ್ ಅನ್ನು ಕಾರ್ಡ್ ಖಾತೆಗೆ ಪೋಸ್ಟ್ ಮಾಡದಿದ್ದರೆ, ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ಗೆ ಸೂಚನೆಯನ್ನು ನೀಡಬೇಕು.

## XXIV. ವಿದೇಶಗಳಲ್ಲಿ ಮಾಡಲಾದ ಖರ್ಚುಗಳು

ಕಾರ್ಡ್ ಸದಸ್ಯರು ತಾವು ಪಡೆದ ಕ್ರೆಡಿಟ್ ಕಾರ್ಡ್ ಅನ್ನು ವಿದೇಶದಲ್ಲಿ ಬಳಸಿದರೆ ಸಂಬಂಧಿಸಿದ ವಿನಿಮಯ ನಿಯಂತ್ರಣ ನಿಯಮಗಳಿಗೆ ಹಾಗೂ ಆರ್‌ಬಿಐ ಕಾಲಕಾಲಕ್ಕೆ ಮಾಡಿದ ತಿದ್ದುಪಡಿಗಳಿಗೆ ಅನುಸಾರವಾಗಿ ಕಟ್ಟುನಿಟ್ಟಾಗಿ ಬಳಸಲಾಗುವುದು ಎಂದು ಕಾರ್ಡ್ ಸದಸ್ಯರು ಘೋಷಿಸಬೇಕು. ಕಾರ್ಡ್ ಸದಸ್ಯನು ತನ್ನ ಹಕ್ಕುಗಳನ್ನು ಮೀರಿದರೆ, ಆರ್‌ಬಿಐನ ವಿನಿಮಯ ನಿಯಂತ್ರಣ ಮಾರ್ಗಸೂಚಿಗಳ ಪ್ರಕಾರ ಕಾರ್ಡ್ ಸದಸ್ಯರು ಅದನ್ನು ತಕ್ಷಣವೇ ಲಿಖಿತವಾಗಿ ಐಸಿಐಸಿಐ ಬ್ಯಾಂಕಿನ ಗಮನಕ್ಕೆ ತರಬೇಕು. ಒಂದುವೇಳೆ, ಆರ್‌ಬಿಐ ನಿಗದಿಪಡಿಸಿದಂತಹ ಯಾವುದೇ ಶುಲ್ಕಗಳಿಗೆ ಪಾಸ್‌ಪೋರ್ಟ್ ಅನ್ನು ದೃಢೀಕರಿಸಬೇಕಾದಲ್ಲಿ, ಪಾಸ್‌ಪೋರ್ಟ್ ಅನ್ನು ದೃಢೀಕರಿಸುವ ಜವಾಬ್ದಾರಿ ಸಂಪೂರ್ಣವಾಗಿ ಕಾರ್ಡ್ ಸದಸ್ಯರ ಮೇಲಿರುತ್ತದೆ. ಆರ್‌ಬಿಐ ಹೊರಡಿಸಿರುವ ಪ್ರಸ್ತುತ ವಿನಿಮಯ ನಿಯಂತ್ರಣ ಮಾರ್ಗಸೂಚಿಗಳನ್ನು ಅನುಸರಿಸುವಲ್ಲಿ ಕಾರ್ಡ್ ಸದಸ್ಯರು ವಿಫಲವಾದಲ್ಲಿ, ಕಾಲಕಾಲಕ್ಕೆ ತಿದ್ದುಪಡಿ ಮಾಡಿದ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ 1999 ರ ಅಡಿಯಲ್ಲಿ ಯಾವುದೇ ಕ್ರಮಕ್ಕೆ ಅವರು ಹೊಣೆಗಾರನಾಗಿರುತ್ತಾರೆ ಅಲ್ಲದೇ ಐಸಿಐಸಿಐ ಬ್ಯಾಂಕ್ ಅಥವಾ ಆರ್‌ಬಿಐ ಮೂಲಕ ಕಾರ್ಡ್ ಸೌಲಭ್ಯದಿಂದ ಡಿಬಾರ್ ಮಾಡಲಾಗುವುದು. ತನ್ನ ಮಿತಿಯನ್ನು ದಾಟಿದ ಕಾರ್ಡ್ ಸದಸ್ಯರ ಬಗ್ಗೆ ಐಸಿಐಸಿಐ ಬ್ಯಾಂಕ್‌ಗೆ ತಿಳಿದುಬಂದ ಸಂದರ್ಭದಲ್ಲಿ ಕಾಲಕಾಲಕ್ಕೆ ಆರ್‌ಬಿಐ ನಿಂದ ಹೊರಡಿಸಲಾದ ಮಾರ್ಗಸೂಚಿಗಳಿಂದ ಸೂಚಿಸಲಾದ ವಿದೇಶಿ ವಿನಿಮಯ ಹಕ್ಕುಗಳನ್ನು ಮೀರಿದ ಕಾರಣದಿಂದ ನಿರಾಕರಿಸಲ್ಪಟ್ಟ ವಹಿವಾಟುಗಳಿಂದ ಉಂಟಾಗುವ ಶುಲ್ಕದ ಯಾವುದೇ ನಷ್ಟ ಅಥವಾ ಹಾನಿಗೆ ಐಸಿಐಸಿಐ ಬ್ಯಾಂಕ್ ಮೇಲೆ ಯಾವುದೇ ನೇರವಾದ ಅಥವಾ ಪರೋಕ್ಷವಾದ ಹೊಣೆಗಾರಿಕೆ ಇರುವುದಿಲ್ಲ. ಭಾರತೀಯ ರೂಪಾಯಿ ಹೊರತುಪಡಿಸಿ ಬೇರೆ ಕರೆನ್ಸಿಯಲ್ಲಿ ಮಾಡಿದ ವಹಿವಾಟನ್ನು ಭಾರತೀಯ ರೂಪಾಯಿಗಳಿಗೆ ಪರಿವರ್ತಿಸಲಾಗುತ್ತದೆ. ಐಸಿಐಸಿಐ ಬ್ಯಾಂಕಿನಲ್ಲಿ ವಹಿವಾಟು ಇತ್ಯರ್ಥಗೊಂಡ ದಿನಾಂಕದಂದು ಪರಿವರ್ತನೆಯನ್ನು ಮಾಡಲಾಗುತ್ತದೆ, ಹಾಗೂ ಇದು ವಹಿವಾಟು ನಡೆಸಿದ ದಿನಾಂಕವಾಗಿಲ್ಲದಿರಬಹುದು. ವಹಿವಾಟುಗಳು ಯುಎಸ್ ಡಾಲರ್‌ಗಳಲ್ಲಿ ಇಲ್ಲದಿದ್ದಲ್ಲಿ, ಪರಿವರ್ತನೆಯನ್ನು ಯುಎಸ್ ಡಾಲರ್‌ಗಳ ಮೂಲಕ ಮಾಡಲಾಗುತ್ತದೆ, ಅಂದರೆ ವಿಧಿಸಲಾದ ಶುಲ್ಕದ ಮೊತ್ತವನ್ನು ಯುಎಸ್ ಡಾಲರ್‌ಗಳಿಗೆ ಪರಿವರ್ತಿಸಿ, ನಂತರ ಆ ಯುಎಸ್ ಡಾಲರ್ ಮೊತ್ತವನ್ನು ಭಾರತೀಯ ರೂಪಾಯಿಗಳಾಗಿ ಪರಿವರ್ತಿಸಲಾಗುತ್ತದೆ.

ಕಾನೂನಿನನ್ವಯ ನಿರ್ದಿಷ್ಟ ದರ ಅನ್ವಯವಾಗದ ಹೊರತು, ಯುಎಸ್ ಡಾಲರ್‌ನಿಂದ ಭಾರತೀಯ ರೂಪಾಯಿಗಳಿಗಿನ ಪರಿವರ್ತನೆ ದರವು ವೀಸಾ, ಮಾಸ್ಟರ್‌ಕಾರ್ಡ್ ಹಾಗೂ ಅಮೆಕ್ಸ್ ನ ದರಗಳ ಜೊತೆಗೆ ಅಂತಹ ವಹಿವಾಟುಗಳ ಮೇಲೆ ಕರೆನ್ಸಿ ಪರಿವರ್ತನೆ ಅಂಶದಷ್ಟು ಹೆಚ್ಚಾಗುತ್ತದೆ.

## XXV. ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್ ರಿವಾರ್ಡ್‌ಗಳು

ಕಾರ್ಡ್ ಸದಸ್ಯನಿಗೆ/ರಿಗೆ ಐಸಿಐಸಿಐ ಬ್ಯಾಂಕ್ ಈ ಕೆಳಗಿನ ಕ್ರೆಡಿಟ್ ಕಾರ್ಡ್ ರಿವಾರ್ಡ್ ಪಾಯಿಂಟ್ ಯೋಜನೆಗಳನ್ನು ನೀಡುತ್ತದೆ:

1. ಐಸಿಐಸಿಐ ಬ್ಯಾಂಕಿನ ರಿವಾರ್ಡ್ಸ್ ಯೋಜನೆಗಳನ್ನು ''ಐಸಿಐಸಿಐ ಬ್ಯಾಂಕ್ ರಿವಾರ್ಡ್ಸ್ ಸ್ಕೀಮ್'' ಎನ್ನಲಾಗುತ್ತದೆ.

   ಐಸಿಐಸಿಐ ಬ್ಯಾಂಕ್ ರಿವಾರ್ಡ್ ಸ್ಕೀಮ್ ಅಡಿಯಲ್ಲಿ ನೀಡಲಾಗುವ ರಿವಾರ್ಡ್ ಪಾಯಿಂಟ್‌ಗಳನ್ನು ''ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್ಸ್'' ಎನ್ನಲಾಗುತ್ತದೆ.

2. ''ಹ್ಯಾಂಡ್-ಪಿಕ್ಡ್ ರಿವಾರ್ಡ್ ಸ್ಕೀಮ್'' ಎಂದರೆ ಐಸಿಐಸಿಐ ಬ್ಯಾಂಕಿನ ಪ್ರೀಮಿಯಂ ರಿವಾರ್ಡ್ ಸ್ಕೀಮ್. ಹ್ಯಾಂಡ್-ಪಿಕ್ಡ್ ರಿವಾರ್ಡ್ಸ್ ಸ್ಕೀಮ್ ಅಡಿಯಲ್ಲಿ ನೀಡಲಾಗುವ ರಿವಾರ್ಡ್ ಪಾಯಿಂಟ್‌ಗಳನ್ನು ''ಹ್ಯಾಂಡ್ ಪಿಕ್ಡ್ ರಿವಾರ್ಡ್ ಪಾಯಿಂಟ್ಸ್'' ಎನ್ನಲಾಗುತ್ತದೆ.

3. ''ಐಸಿಐಸಿಐ ಬ್ಯಾಂಕ್ ರಿವಾರ್ಡ್ಸ್ ಪವರ್ಡ್ ಬೈ ಪೇಬ್ಯಾಕ್'' ಎಂದರೆ ಪೇಬ್ಯಾಕ್ ಸಹಯೋಗದೊಂದಿಗಿನ ಐಸಿಐಸಿಐ ಬ್ಯಾಂಕಿನ ರಿವಾರ್ಡ್ ಸ್ಕೀಮ್ ಆಗಿರುತ್ತದೆ.

''ಪೇಬ್ಯಾಕ್ ಪಾಯಿಂಟ್ಸ್'' ಎನ್ನುವುದು ಐಸಿಐಸಿಐ ಬ್ಯಾಂಕ್ ರಿವಾರ್ಡ್ಸ್ ಅಡಿಯಲ್ಲಿ ನೀಡಲಾಗುವ ಪೇಬ್ಯಾಕ್ ಚಾಲಿತ ರಿವಾರ್ಡ್ ಪಾಯಿಂಟ್ ಆಗಿರುತ್ತದೆ.

ಈ ಬ್ರಾಂಡ್ ಹೆಸರಿನಲ್ಲಿ ಎಲ್‌ಎಸ್‌ಆರ್‌ಪಿಎಲ್ ನ ಅಡಿಯಲ್ಲಿನ ರಿವಾರ್ಡ್ ಪ್ರೋಗ್ರಾಂ ಅನ್ನು ''ಪೇಬ್ಯಾಕ್'' ಎನ್ನಲಾಗುತ್ತದೆ. ''ಎಲ್‌ಎಸ್‌ಆರ್‌ಪಿಎಲ್'' ಎಂದರೆ ಪೇಬ್ಯಾಕ್ ಬ್ರಾಂಡ್ ಹೆಸರಿನಲ್ಲಿ, ಕಂಪನಿಗಳ ಕಾಯ್ದೆ 1956 ರ ಅಡಿಯಲ್ಲಿ ಸಂಯೋಜಿತವಾದ ಕಂಪನಿಯಾಗಿದ್ದು ಫ್ಲಾರೆನ್ಸ್ ಜೆ.ಎಲ್. ನೆಹರು ರಸ್ತೆ, ವಕೋಲಾ, ಸಾಂತಾಕ್ರೂಜ್ (ಪೂರ್ವ), ಮುಂಬೈ 400055 ನಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿದ ಲಾಯಲ್ಟಿ ಸೊಲ್ಯೂಷನ್ಸ್ ಅಂಡ್ ರಿಸರ್ಚ್ ಲಿಮಿಟೆಡ್ ಆಗಿದ್ದು (ಇನ್ನು ಮುಂದೆ '' LSRPL '' ಎಂದು ಕರೆಯಲಾಗುತ್ತದೆ, ಅದರ ಅಭಿವ್ಯಕ್ತಿಯು ಅದರ ವಿಷಯ ಅಥವಾ ಸಂದರ್ಭಕ್ಕೆ ಅಸಹ್ಯವಾಗದಿದ್ದರೆ, ಅದರ ಉತ್ತರಾಧಿಕಾರಿಗಳು ಹಾಗೂ ನಿಯೋಜನೆಗಳನ್ನು ಒಳಗೊಂಡಿರುತ್ತದೆ). ''ಪೇಬ್ಯಾಕ್ ಕಾರ್ಡ್'' ಎಂದರೆ ಎಲ್‌ಎಸ್‌ಆರ್‌ಪಿಎಲ್ ನಿರ್ದಿಷ್ಟಪಡಿಸಿದ ನಿಯಮಗಳು ಹಾಗೂ ನಿಬಂಧನೆಗಳಪ್ರಕಾರ ಪೇಬ್ಯಾಕ್ ಪಾಯಿಂಟ್‌ಗಳನ್ನು ರಿಡೀಮ್ ಮಾಡಲು ಎಲ್‌ಎಸ್‌ಆರ್‌ಪಿಎಲ್ ನೀಡಿದ ಕಾರ್ಡ್ ಅನ್ನು ಒಳಗೊಂಡಿರುತ್ತದೆ.

''ಪೇಬ್ಯಾಕ್ ಸದಸ್ಯ'' ಎಂದರೆ ಪೇಬ್ಯಾಕ್ ಕಾರ್ಡ್ ಹೊಂದಿದ್ದು ಪೇಬ್ಯಾಕ್ ವೆಬ್‌ಸೈಟ್‌ನಲ್ಲಿ ಸೂಚಿಸಿದ ರೀತಿಯಲ್ಲಿ ಪೇಬ್ಯಾಕ್‌ನಲ್ಲಿ ನೋಂದಾಯಿಸಿದ ವ್ಯಕ್ತಿ.

''ಪೇಬ್ಯಾಕ್ ಸದಸ್ಯತ್ವ ಡೇಟಾ'' ಎಂದರೆ ಕಾರ್ಡ್ ಸದಸ್ಯನ/ರ ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗೆ ಸಂಬಂಧಿಸಿದ ಡೇಟಾ ಅಥವಾ ಮಾಹಿತಿ, ಅಂದರೆ, (i)ಹೆಸರು (ಜಿಜಿ) ಇಮೇಲ್ ವಿಳಾಸ (iii) ಮೊಬೈಲ್ ಸಂಖ್ಯೆ (iv) ಹುಟ್ಟಿದ ದಿನಾಂಕ (ಡ) ವಿಳಾಸ (vi) ಕ್ರೆಡಿಟ್ ಕಾರ್ಡ್ ಖಾತೆ ಸಂಖ್ಯೆ.

''ಪೇಬ್ಯಾಕ್ ವೆಬ್‌ಸೈಟ್'' ಎಂದರೆ' url:www.payback.in ನಲ್ಲಿನ ವೆಬ್‌ಸೈಟ್

''ಅಪರಾಧಿ ಖಾತೆ'' ಎಂದರೆ ಈ ನಿಯಮಗಳು ಹಾಗೂ ನಿಬಂಧನೆಗಳು ಅಡಿಯಲ್ಲಿನ ಪಾವತಿಗಳ ಷರತ್ತಿನಲ್ಲಿ ನಿರ್ದಿಷ್ಟಪಡಿಸಿದಂತೆ ಪಾವತಿಯನ್ನು ಮಾಡಿಲ್ಲದ ಕಾರ್ಡ್ ಖಾತೆ.

''ಚಾಲ್ತಿ ದಿನಾಂಕ'' ಎಂದರೆ ಐಸಿಐಸಿಐ ಬ್ಯಾಂಕ್ ರಿವಾರ್ಡ್‌ಗಳು ಪೇಬ್ಯಾಕ್ ಸ್ಕೀಮ್ (ಗಳು) ನಿಂದ ಪ್ರಾರಂಭವಾಗುವ ದಿನಾಂಕವೆಂದು ಅರ್ಥ, ಇದನ್ನು ಐಸಿಐಸಿಐ ಬ್ಯಾಂಕ್ ಕಾರ್ಡ್ ಸದಸ್ಯರು / ಗಳಿಗೆ ಕಾಲಕಾಲಕ್ಕೆ ತಿಳಿಸುತ್ತದೆ. ಆದಾಗ್ಯೂ, ಕಾರ್ಡ್ ಸದಸ್ಯರು ಪೇಬ್ಯಾಕ್ ನಲ್ಲಿ ನೋಂದಾಯಿಸಿದ ದಿನಾಂಕದಿಂದ ಮಾತ್ರ ಪೇಬ್ಯಾಕ್ ಚಾಲಿತ ಐಸಿಐಸಿಐ ಬ್ಯಾಂಕ್ ರಿವಾರ್ಡ್‌ಗಳ ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯಬಹುದು.

''ಸ್ಕೀಮ್ ಮುಕ್ತಾಯ ದಿನಾಂಕ'' ಎಂದರೆ ಐಸಿಐಸಿಐ ಬ್ಯಾಂಕ್ ತನ್ನ ವಿವೇಚನೆಯಿಂದ ಐಸಿಐಸಿಐ ಬ್ಯಾಂಕ್ ರಿವಾರ್ಡ್ ಸ್ಕೀಮ್ (ಗಳನ್ನು) ಮುಕ್ತಾಯಗೊಳಿಸಿದ ದಿನಾಂಕವಾಗಿದೆ.

''ಸಿಂಧುವಾದ ಶುಲ್ಕಗಳು'' ಎಂದರೆ ಕಾರ್ಡಿನಲ್ಲಿ ಸರಕು ಅಥವಾ ಸೇವೆಗಳನ್ನು ಖರೀದಿಸಲು ಕಾರ್ಡ್ ಸದಸ್ಯರು ಮಾಡಿದ ಖರ್ಚು ಹಾಗೂ ಐಸಿಐಸಿಐ ಬ್ಯಾಂಕ್ ರಿವಾರ್ಡ್ ಸ್ಕೀಮ್ ನಲ್ಲಿ ಸೇರಿಸುವ ಉದ್ದೇಶದಿಂದ ಕಾಲಕಾಲಕ್ಕೆ ಐಸಿಐಸಿಐ ಬ್ಯಾಂಕ್ ಹಾಕುವ ಯಾವುದೇ ಇತರ ಶುಲ್ಕಗಳು.

ಐಸಿಐಸಿಐ ಬ್ಯಾಂಕ್ ನೀಡುವ ಯಾವುದೇ ಪ್ರಚಾರ ಯೋಜನೆಯ ಅವಧಿಯಲ್ಲಿ ಅಥವಾ ಅದರ ನಂತರ, ಕಾರ್ಡ್ ಬಳಕೆಯನ್ನು ಹಿಂಪಡೆದರೆ, ಅಥವಾ ರದ್ದುಗೊಳಿಸಿದರೆ, ಅಥವಾ ರದ್ದುಮಾಡುವ ಸಾಧ್ಯತೆಗಳಿದ್ದರೆ, ಅಥವಾ ಕಾರ್ಡ್ ಖಾತೆಯನ್ನು ಅವಿಧೇಯ ಖಾತೆ ಎಂದು ನಿರ್ಧರಿಸಿದಲ್ಲಿ, ನಂತರ ಸೇರಿದಂತೆ ಆದರೆ ಬಡ್ತಿ ಅವಧಿಯಲ್ಲಿ ನೀಡಲಾಗುವ ಉಡುಗೊರೆ / ರಿಯಾಯಿತಿಗಳು / ಕ್ಯಾಶ್-ಬ್ಯಾಕ್‌ಗಳಷ್ಟೇ ಅಲ್ಲದೆ ಇತರ ಯಾವುದೇ ಕೊಡುಗೆ / ಲಾಭಗಳು ಕಾರ್ಡ್ ಸದಸ್ಯರಿಗೆ ತಕ್ಷಣವೇ ನಿಂತುಹೋಗುತ್ತವೆ ಹಾಗೂ ಸ್ವಯಂಚಾಲಿತವಾಗಿ ರದ್ದಾಗುತ್ತವೆ.

''ವಾರ್ಷಿಕೋತ್ಸವ ವರ್ಷ'' ಎಂದರೆ ಕಾರ್ಡ್ ನೀಡಿದ ದಿನಾಂಕದಿಂದ ಹನ್ನೆರಡು ತಿಂಗಳ ಅವಧಿ ಹಾಗೂ ಅದರ ನಂತರ ಪ್ರತಿ ಹನ್ನೆರಡು ತಿಂಗಳ ಅವಧಿ.

1. ಐಸಿಐಸಿಐ ಬ್ಯಾಂಕ್ ರಿವಾರ್ಡ್ ಸ್ಕೀಮ್‌ಗೆ ಅನ್ವಯವಾಗುವ ನಿಯಮಗಳು ಹಾಗೂ ನಿಬಂಧನೆಗಳು :

i) ಐಸಿಐಸಿಐ ಬ್ಯಾಂಕ್ ರಿವಾರ್ಡ್ ಸ್ಕೀಮ್ ಚಾಲ್ತಿ ದಿನಾಂಕದಿಂದ ಜಾರಿಗೆ ಬರುತ್ತದೆ ಹಾಗೂ ಆಯ್ದ ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಹೊಂದಿರುವ ಕಾರ್ಡ ಸದಸ್ಯರು / ಗಳಿಗೆ ಮಾತ್ರ ಚಾಲ್ತಿ ದಿನಾಂಕದಿಂದ ಹಾಗೂ ಅದರ ನಂತರದಲ್ಲಿ ಲಭ್ಯವಿರುತ್ತದೆ.

ii) ಐಸಿಐಸಿಐ ಬ್ಯಾಂಕ್ ರಿವಾರ್ಡ್ ಸ್ಕೀಮ್ ಅಡಿಯಲ್ಲಿ ಐಸಿಐಸಿಐ ಬ್ಯಾಂಕ್ , ಕಾರ್ಡ್ ಸದಸ್ಯರಿಂದ ಆಯ್ದ ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳಲ್ಲಿ ಮಾಡಿದ ಸಿಂಧುವಾದ ಶುಲ್ಕಗಳಿಗೆ ಮಾತ್ರ ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್‌ಗಳನ್ನು ನೀಡುತ್ತದೆ.

ï ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್ಸ್ ಗಳಿಕೆಯ ವ್ಯವಸ್ಥೆಯು ರಿವಾರ್ಡ್ ಗಳಿಕೆಯ ವಾರ್ಷಿಕ ವರ್ಷವನ್ನು ಅನುಸರಿಸುತ್ತದೆ.

ï ಐಸಿಐಸಿಐ ಬ್ಯಾಂಕ್ ರಿವಾರ್ಡ್ ಸ್ಕೀಮ್ ಅಡಿಯಲ್ಲಿ ಕಾರ್ಡ್ ಸದಸ್ಯರು ಗಳಿಸಿದ ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್‌ಗಳನ್ನು ಕಾರ್ಡ್ ಸದಸ್ಯರಿಗೆ ಕಳುಹಿಸುವ ಮಾಸಿಕ ಹೇಳಿಕೆಯಲ್ಲಿ ಸೂಚಿಸಲಾಗುತ್ತದೆ.

ï ಐಸಿಐಸಿಐ ಬ್ಯಾಂಕ್ ಕಾಲಕಾಲಕ್ಕೆ ನೀಡುವ ಮರುಖರೀದಿ ಕೊಡುಗೆಗಳ ವಿರುದ್ಧ ಕಾರ್ಡ್ ಸದಸ್ಯರು ತನ್ನ ಸಂಗ್ರಹಿಸಿದ ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್‌ಗಳನ್ನು ಮರುಪಾವತಿ ಮಾಡಬಹುದು.

ï ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್‌ಗಳ ಮರುಪಾವತಿಯ ನಂತರ, ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್‌ಗಳು ಸ್ವಯಂಚಾಲಿತವಾಗಿ ಕಡಿಮೆಯಾಗುತ್ತವೆ ಅಥವಾ ಕಾರ್ಡ್ ಖಾತೆಯಲ್ಲಿ ಸಂಗ್ರಹವಾಗಿರುವ ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್‌ಗಳಿಂದ ಡೆಬಿಟ್ ಆಗುತ್ತವೆ.

ï ಸ್ಕೀಮ್ ಮುಕ್ತಾಯದ ದಿನಾಂಕಕ್ಕೆ ಮುಂಚಿತವಾಗಿ ಯಾವುದೇ ಸಮಯದಲ್ಲಿ ಆಯ್ಕೆ ಮಾಡಿದ ಕ್ರೆಡಿಟ್ ಕಾರ್ಡ್ ಬಳಕೆಯನ್ನು ಹಿಂಪಡೆದಲ್ಲಿ ಅಥವಾ ರದ್ದುಗೊಳಿಸಿದಲ್ಲಿ ಅಥವಾ ರದ್ದು ಮಾಡುವ ಸಾಧ್ಯತೆಯಿದ್ದಲ್ಲಿ ಅಥವಾ ಕಾರ್ಡ್ ಖಾತೆಯನ್ನು ಅವಿಧೇಯ ಖಾತೆ ಎಂದು ನಿರ್ಧರಿಸಿದಲ್ಲಿ , ಕಾರ್ಡಿನ ಸದಸ್ಯರ ಖಾತೆಯಲ್ಲಿರುವ ಎಲ್ಲಾ ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್‌ಗಳು ಆ ಕಾರಣದಿಂದ ತಕ್ಷಣವೇ ನಿಂತುಹೋಗುತ್ತವೆ ಹಾಗೂ ಸ್ವಯಂಚಾಲಿತವಾಗಿ ರದ್ದಾಗುತ್ತವೆ.

ï ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ನಲ್ಲಿ ತಮ್ಮ ಸದಸ್ಯತ್ವವನ್ನು ಮರುಸ್ಥಾಪಿಸಿದರೂ ರದ್ದಾದ ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್‌ಗಳನ್ನು ಕಾರ್ಡ್ ಖಾತೆಗೆ ಜಮಾ ಮಾಡಲಾಗುವುದಿಲ್ಲ.

ï ನಿಗದಿತ ಸಮಯದೊಳಗೆ ಮರುಪಾವತಿ ಮಾಡದ ಕಾರ್ಡ್ ಸದಸ್ಯರ ಕ್ರೆಡಿಟ್ ನಲ್ಲಿರುವ ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್‌ಗಳು, ಸ್ಕೀಮ್ ಮುಕ್ತಾಯ ದಿನಾಂಕದ ಕೊನೆಯಲ್ಲಿ ಸ್ವಯಂಚಾಲಿತವಾಗಿ ರದ್ದಾಗುತ್ತವೆ.

2. ಹ್ಯಾಂಡ್-ಪಿಕ್ಡ್ ರಿವಾರ್ಡ್ ಸ್ಕೀಮ್ ಗೆ ಅನ್ವಯವಾಗುವ ನಿಯಮಗಳು ಹಾಗೂ ನಿಬಂಧನೆಗಳು:

ï ಹ್ಯಾಂಡ್-ಪಿಕ್ಡ್ ರಿವಾರ್ಡ್ ಸ್ಕೀಮ್ ಚಾಲ್ತಿ ದಿನಾಂಕದಿಂದ ಜಾರಿಗೆ ಬರುತ್ತದೆ ಹಾಗೂ ಆಯ್ದ ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್/ಗಳನ್ನು ಹೊಂದಿರುವ ಕಾರ್ಡ್ ಸದಸ್ಯನಿಗೆ / ರಿಗೆ ಮಾತ್ರ ಲಭ್ಯವಿರುತ್ತದೆ.

- ಹ್ಯಾಂಡ್-ಪಿಕ್ಡ್ ರಿವಾರ್ಡ್ ಸ್ಕೀಮ್ ಅಡಿಯಲ್ಲಿ, ಐಸಿಐಸಿಐ ಬ್ಯಾಂಕ್ ಆಯ್ದ ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳಲ್ಲಿ ಕಾರ್ಡ್ ಸದಸ್ಯರಿಂದ ಪಡೆದ ಸಿಂಧುವಾದ ಶುಲ್ಕಗಳಿಗೆ ಮಾತ್ರ ಹ್ಯಾಂಡ್-ಪಿಕ್ಡ್ ರಿವಾರ್ಡ್ ಪಾಯಿಂಟ್‌ಗಳನ್ನು ನೀಡುತ್ತದೆ.
- ಹ್ಯಾಂಡ್-ಪಿಕ್ಡ್ ರಿವಾರ್ಡ್ ಪಾಯಿಂಟ್ಸ್ ಗಳಿಸುವ ವ್ಯವಸ್ಥೆಯು ರಿವಾರ್ಡ್ ಗಳಿಕೆಯ ವಾರ್ಷಿಕ ವರ್ಷವನ್ನು ಅನುಸರಿಸುತ್ತದೆ.
- ಹ್ಯಾಂಡ್-ಪಿಕ್ಡ್ ರಿವಾರ್ಡ್ ಯೋಜನೆಯಡಿ ಕಾರ್ಡ್ ಸದಸ್ಯರು ಗಳಿಸಿದ ಹ್ಯಾಂಡ್-ಪಿಕ್ಡ್ ರಿವಾರ್ಡ್ ಪಾಯಿಂಟ್‌ಗಳನ್ನು, ಕಾರ್ಡ್ ಸದಸ್ಯರಿಗೆ ಕಳುಹಿಸಿದ ಮಾಸಿಕ ಹೇಳಿಕೆಯಲ್ಲಿ ಸೂಚಿಸಲಾಗುತ್ತದೆ.
- ಐಸಿಐಸಿಐ ಬ್ಯಾಂಕ್ ವೆಬ್‌ಸೈಟ್ www.icicibank.com.ನಲ್ಲಿ ಲಭ್ಯವಿರುವ ಹ್ಯಾಂಡ್-ಪಿಕ್ಡ್ ರಿವಾರ್ಡ್ ಕ್ಯಾಟಲಾಗ್‌ನಲ್ಲಿ ಕಾಲಕಾಲಕ್ಕೆ ಐಸಿಐಸಿಐ ಬ್ಯಾಂಕ್ ನೀಡುವ ಮರುಖರೀದಿ ಕೊಡುಗೆಗಳ ವಿರುದ್ಧ ಕಾರ್ಡ್ ಸದಸ್ಯನು ತಾನು ಸಂಗ್ರಹಿಸಿದ ರಿವಾರ್ಡ್ ಪಾಯಿಂಟ್‌ಗಳನ್ನು ಮರುಪಾವತಿ ಮಾಡಬಹುದು.
- ಹ್ಯಾಂಡ್-ಪಿಕ್ಡ್ ರಿವಾರ್ಡ್ ಪಾಯಿಂಟ್‌ಗಳ ಮರುಪಾವತಿಯ ನಂತರ, ಹ್ಯಾಂಡ್-ಪಿಕ್ಡ್ ರಿವಾರ್ಡ್ ಪಾಯಿಂಟ್‌ಗಳು ಸ್ವಯಂಚಾಲಿತವಾಗಿ ಕಡಿಮೆಯಾಗುತ್ತವೆ ಅಥವಾ ಕಾರ್ಡ್ ಖಾತೆಯಲ್ಲಿ ಸಂಗ್ರಹವಾದ ಹ್ಯಾಂಡ್-ಪಿಕ್ಡ್ ರಿವಾರ್ಡ್ ಪಾಯಿಂಟ್‌ಗಳಿಂದ ಡೆಬಿಟ್ ಆಗುತ್ತವೆ.
- ಸ್ಕೀಮ್ ಮುಕ್ತಾಯದ ದಿನಾಂಕಕ್ಕೆ ಮುಂಚಿತವಾಗಿ ಯಾವುದೇ ಸಮಯದಲ್ಲಿ ಆಯ್ಕೆ ಮಾಡಿದ ಕ್ರೆಡಿಟ್ ಕಾರ್ಡ್ ಬಳಕೆಯನ್ನು ಹಿಂಪಡೆದಲ್ಲಿ, ಅಥವಾ ರದ್ದುಗೊಳಿಸಿದಲ್ಲಿ, ಅಥವಾ ರದ್ದು ಮಾಡುವ ಸಾಧ್ಯತೆಯಿದ್ದಲ್ಲಿ, ಅಥವಾ ಕಾರ್ಡ್ ಖಾತೆಯನ್ನು ಅವಿಧೇಯ ಖಾತೆ ಎಂದು ನಿರ್ಧರಿಸಿದಲ್ಲಿ , ಕಾರ್ಡಿನ ಸದಸ್ಯರ ಖಾತೆಯಲ್ಲಿರುವ ಎಲ್ಲಾ ಐಸಿಐಸಿಐ ಬ್ಯಾಂಕ್ ಹ್ಯಾಂಡ್-ಪಿಕ್ಡ್ ರಿವಾರ್ಡ್ ಪಾಯಿಂಟ್‌ಗಳು ಆ ಕಾರಣದಿಂದ ತಕ್ಷಣವೇ ನಿಂತುಹೋಗುತ್ತವೆ ಹಾಗೂ ಸ್ವಯಂಚಾಲಿತವಾಗಿ ರದ್ದಾಗುತ್ತವೆ.
- ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ನಲ್ಲಿ ತಮ್ಮ ಸದಸ್ಯತ್ವವನ್ನು ಮರುಸ್ಥಾಪಿಸಿದರೂ ರದ್ದಾದ ಐಸಿಐಸಿಐ ಬ್ಯಾಂಕ್ ವಿಶಿಷ್ಟ ರಿವಾರ್ಡ್ ಪಾಯಿಂಟ್‌ಗಳನ್ನು ಕಾರ್ಡ್ ಖಾತೆಗೆ ಜಮಾ ಮಾಡಲಾಗುವುದಿಲ್ಲ

ನಿಗದಿತ ಸಮಯದೊಳಗೆ ಮರುಪಾವತಿ ಮಾಡದ ಕಾರ್ಡ್ ಸದಸ್ಯರ ಕ್ರೆಡಿಟ್ ನಲ್ಲಿರುವ ಐಸಿಐಸಿಐ ಬ್ಯಾಂಕ್ ವಿಶಿಷ್ಟ ರಿವಾರ್ಡ್ ಪಾಯಿಂಟ್‌ಗಳು, ಸ್ಕೀಮ್ ಮುಕ್ತಾಯ ದಿನಾಂಕದ ಕೊನೆಯಲ್ಲಿ ಸ್ವಯಂಚಾಲಿತವಾಗಿ ರದ್ದಾಗುತ್ತವೆ.

1. ಪೇಬ್ಯಾಕ್ ಚಾಲಿತ ಐಸಿಐಸಿಐ ಬ್ಯಾಂಕ್ ರಿವಾರ್ಡ್‌ಗಳಿಗೆ ಅನ್ವಯವಾಗುವ ನಿಯಮಗಳು ಹಾಗೂ ನಿಬಂಧನೆಗಳು: ಪೇಬ್ಯಾಕ್ ಚಾಲಿತ ಐಸಿಐಸಿಐ ಬ್ಯಾಂಕ್ ರಿವಾರ್ಡ್‌ಗಳು ಚಾಲ್ತಿ ದಿನಾಂಕದಿಂದ ಜಾರಿಗೆ ಬರುತ್ತವೆ ಹಾಗೂ ಐಸಿಐಸಿಐ ಬ್ಯಾಂಕಿನ ಆಯ್ದ ಕ್ರೆಡಿಟ್ ಕಾರ್ಡ್ ಹೊಂದಿರುವ ಕಾರ್ಡ್ ಸದಸ್ಯನಿಗೆ/ರಿಗೆ

ಮಾತ್ರ ಲಭ್ಯವಿರುತ್ತವೆ, ಹಾಗೂ ಪೇಬ್ಯಾಕ್ ಖಾತೆಯನ್ನು ನವೀಕರಿಸಲು ಹಾಗೂ ಪೇಬ್ಯಾಕ್ ಚಾಲಿತ ಐಸಿಐಸಿಐ ಬ್ಯಾಂಕ್ ರಿವಾರ್ಡ್‌ಗಳಿಗೆ ಸಂಬಂಧಿಸಿದಂತೆ ಕಾರ್ಡ್ ಸದಸ್ಯರಿಗೆ ಸೇವೆಗಳು ಹಾಗೂ ಪ್ರಯೋಜನಗಳನ್ನು ಒದಗಿಸಲು ಪೇಬ್ಯಾಕ್ ಸದಸ್ಯತ್ವದ ಡೇಟಾವನ್ನು ಎಲ್‌ಎಸ್‌ಆರ್‌ಪಿಎಲ್ ಹಾಗೂ ಅದರ ಅಂಗಸಂಸ್ಥೆಗಳೊಂದಿಗೆ ಚಾಲ್ತಿ ದಿನಾಂಕದಂದು ಅಥವಾ ಆ ನಂತರ ಹಂಚಿಕೊಳ್ಳಲಾಗುವುದು.

- ಪೇಬ್ಯಾಕ್ ಚಾಲಿತ ಐಸಿಐಸಿಐ ಬ್ಯಾಂಕ್ ರಿವಾರ್ಡ್‌ಗಳ ಅಡಿಯಲ್ಲಿ, ಐಸಿಐಸಿಐ ಬ್ಯಾಂಕ್‌ನ ಆಯ್ದ ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳಲ್ಲಿ ಕಾರ್ಡ್ ಸದಸ್ಯರಿಂದ ಪಡೆದ ಮಾನ್ಯ ಶುಲ್ಕಗಳಿಗೆ ಪೇಬ್ಯಾಕ್ ಪಾಯಿಂಟ್‌ಗಳನ್ನು ನೀಡುತ್ತದೆ.
- ಪೇಬ್ಯಾಕ್ ಚಾಲಿತ ಐಸಿಐಸಿಐ ಬ್ಯಾಂಕ್ ರಿವಾರ್ಡ್‌ಗಳ ಅಡಿಯಲ್ಲಿ ಕಾರ್ಡ್ ಸದಸ್ಯರು ಗಳಿಸಿದಂತೆ, ಪೇಬ್ಯಾಕ್ ಪಾಯಿಂಟ್‌ಗಳನ್ನು ಕಾರ್ಡ್ ಸದಸ್ಯರಿಗೆ ಕಳುಹಿಸುವ ಮಾಸಿಕ ಹೇಳಿಕೆಯಲ್ಲಿ ಸೂಚಿಸಲಾಗುತ್ತದೆ. ಪ್ರತಿ ಬಿಲ್ಲಿಂಗ್ ಆವರ್ತದ ಕೊನೆಯಲ್ಲಿ, ಕಾರ್ಡ್ ಸದಸ್ಯರು ಈ ಹಿಂದಿನ ಬಿಲ್ಲಿಂಗ್ ಆವರ್ತಕ್ಕೆ ಮಾನ್ಯವಾದ ವಹಿವಾಟುಗಳ ಮೇಲೆ ಗಳಿಸಿದ ಪಾವತಿ ಪಾಯಿಂಟ್‌ಗಳನ್ನು ಕಾರ್ಡ್ ಖಾತೆಯಿಂದ ಕಾರ್ಡ್ ಸದಸ್ಯರ ಪೇಬ್ಯಾಕ್ ಖಾತೆಗೆ ಐಸಿಐಸಿಐ ಬ್ಯಾಂಕ್ ವರ್ಗಾಯಿಸುತ್ತದೆ.
- ಕಾರ್ಡ್ ಸದಸ್ಯನು/ರು ಪೇಬ್ಯಾಕ್ ಸದಸ್ಯರಾದ ನಂತರ ಹಾಗೂ ಪೇಬ್ಯಾಕ್ ರಿವಾರ್ಡ್ ಕ್ಯಾಟಲಾಗ್‌ನಲ್ಲಿ ಲಭ್ಯವಿರುವ ಐಟಂ (ಗಳ) ಗಳನ್ನು ಕೊಳ್ಳಲು ಪೇಬ್ಯಾಕ್ ಕಾರ್ಡ್ ಬಳಸುವ ಮೂಲಕ ಮಾತ್ರ ತಮ್ಮ ಪೇಬ್ಯಾಕ್ ಪಾಯಿಂಟ್‌ಗಳನ್ನು ಮರುಪಾವತಿ ಮಾಡಲು ಸಾಧ್ಯವಾಗುತ್ತದೆ. ಇದರ ವಿವರಗಳನ್ನು ಎಲ್‌ಎಸ್‌ಆರ್‌ಪಿಎಲ್ ಪೇಬ್ಯಾಕ್ ಸದಸ್ಯರಿಗೆ ತಿಳಿಸಬಹುದು ಅಥವಾ ಈ ಕುರಿತ ಹೆಚ್ಚಿನ ವಿವರಗಳಿಗಾಗಿ ಹಾಗೂ ಪೇಬ್ಯಾಕ್ ಸದಸ್ಯರಾಗಲು, ಕಾರ್ಡ್ ಸದಸ್ಯನು/ರು ಪೇಬ್ಯಾಕ್ ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ಪೇಬ್ಯಾಕ್ ಪಾಯಿಂಟ್‌ಗಳ ಮರುಪಾವತಿಯ ನಂತರ, ಹೀಗೆ ರಿಡೀಮ್ ಮಾಡಲಾದ ಪೇಬ್ಯಾಕ್ ಪಾಯಿಂಟ್‌ಗಳು ಸ್ವಯಂಚಾಲಿತವಾಗಿ ಪೇಬ್ಯಾಕ್ ಖಾತೆಯಲ್ಲಿ ಸಂಗ್ರಹವಾದ ಪೇಬ್ಯಾಕ್ ಪಾಯಿಂಟ್‌ಗಳಿಂದ ಕಡಿತಗೊಳ್ಳುತ್ತವೆ ಅಥವಾ ಡೆಬಿಟ್ ಆಗುತ್ತವೆ.
- ಸ್ಕೀಮ್ ಮುಕ್ತಾಯದ ದಿನಾಂಕಕ್ಕೆ ಮುಂಚಿತವಾಗಿ ಯಾವುದೇ ಸಮಯದಲ್ಲಿ ಆಯ್ಕೆ ಮಾಡಿದ ಕ್ರೆಡಿಟ್ ಕಾರ್ಡ್ ಬಳಕೆಯನ್ನು ಹಿಂಪಡೆದಲ್ಲಿ, ಅಥವಾ ರದ್ದುಗೊಳಿಸಿದಲ್ಲಿ, ಅಥವಾ ರದ್ದು ಮಾಡುವ ಸಾಧ್ಯತೆಯಿದ್ದಲ್ಲಿ ಅಥವಾ ಕಾರ್ಡ್ ಖಾತೆಯನ್ನು ಅವಿಧೇಯ ಖಾತೆ ಎಂದು ನಿರ್ಧರಿಸಿದಲ್ಲಿ , ಕಾರ್ಡಿನ ಸದಸ್ಯರ ಖಾತೆಯಲ್ಲಿರುವ ಎಲ್ಲಾ ಪೇಬ್ಯಾಕ್ ಪಾಯಿಂಟ್‌ಗಳು ಆ ಕಾರಣದಿಂದ ತಕ್ಷಣವೇ ನಿಂತುಹೋಗುತ್ತವೆ ಹಾಗೂ ಸ್ವಯಂಚಾಲಿತವಾಗಿ ರದ್ದಾಗುತ್ತವೆ.
- ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್‌ನಲ್ಲಿ ತಮ್ಮ ಸದಸ್ಯತ್ವವನ್ನು ಮರುಸ್ಥಾಪಿಸಿದರೂ ರದ್ದಾದ ಪೇಬ್ಯಾಕ್ ಪಾಯಿಂಟ್‌ಗಳನ್ನು ಕಾರ್ಡ್ ಖಾತೆಗೆ ಜಮಾ ಮಾಡಲಾಗುವುದಿಲ್ಲ.

ï ಸ್ಕೀಮ್ ಮುಕ್ತಾಯದ ದಿನಾಂಕದ ಅಂತ್ಯದ ವೇಳೆಗೆ, ನಿಗದಿತ ಸಮಯದೊಳಗೆ ರಿಡೀಮ್ ಮಾಡದ ಕಾರ್ಡ್ ಸದಸ್ಯನ ಕ್ರೆಡಿಟ್‌ನಲ್ಲಿರುವ ಪಾಯಿಂಟ್‌ಗಳು ಸ್ವಯಂಚಾಲಿತವಾಗಿ ಕೊನೆಗೊಳ್ಳುತ್ತವೆ. ಅಲ್ಲದೆ, ಪೇಬ್ಯಾಕ್ ನಿಂದ ತನ್ನ ವೆಬ್‌ಸೈಟ್‌ನಲ್ಲಿ ಕಾಲಕಾಲಕ್ಕೆ ಒದಗಿಸಲಾದ ನಿಯಮಗಳು ಹಾಗೂ ನಿಬಂದನೆಗಳಲ್ಲಿ ವಿವರಿಸಿದಂತೆ ನಿಗದಿತ ಕಾಲಾವಧಿಯೊಳಗೆ ಪೇಬ್ಯಾಕ್ ಪಾಯಿಂಟ್‌ಗಳನ್ನು ರಿಡೀಮ್ ಮಾಡದಿದ್ದಲ್ಲಿ ಅವು ಅವಧಿ ಮೀರಬಹುದು ಹಾಗೂ ಬಳಕೆಗೆ ದೊರೆಯದಿರಬಹುದು.

ï ಸ್ಕೀಮ್ ಮುಕ್ತಾಯದ ದಿನಾಂಕದ ಕೊನೆಯಲ್ಲಿ ಅಥವಾ ಅದಕ್ಕೆ ಮುಂಚಿತವಾಗಿ, ಯಾವುದೇ ಸಮಯದಲ್ಲಿ, ಆಯ್ದ ಕ್ರೆಡಿಟ್ ಕಾರ್ಡ್ ಬಳಕೆಯನ್ನು ಹಿಂಪಡೆದರೆ, ಅಥವಾ ರದ್ದುಗೊಳಿಸಿದರೆ ಅಥವಾ ಅಥವಾ ರದ್ದು ಮಾಡುವ ಸಾಧ್ಯತೆಯಿದ್ದಲ್ಲಿ, ಅಥವಾ ಕಾರ್ಡ್ ಖಾತೆಯನ್ನು ಅವಿಧೇಯ ಖಾತೆ ಎಂದು ನಿರ್ಧರಿಸಿದಲ್ಲಿ, ಕಾರ್ಡ್ ಸದಸ್ಯರು ಪೇಬ್ಯಾಕ್ ಸದಸ್ಯರಾಗಿ ಮುಂದುವರಿಯುತ್ತಾರೆ ಹಾಗೂ ಪೇಬ್ಯಾಕ್ ಸದಸ್ಯತ್ವ ಡೇಟಾವನ್ನು ಪೇಬ್ಯಾಕ್ ಖಾತೆಯಿಂದ ತೆಗೆದುಹಾಕುವುದಿಲ್ಲ.

ï ಪೇಬ್ಯಾಕ್ ಚಾಲಿತ ಐಸಿಐಸಿಐ ಬ್ಯಾಂಕ್ ರಿವಾರ್ಡ್‌ಗಳ ಅಡಿಯಲ್ಲಿ, ಇಲ್ಲಿ ಉಲ್ಲೇಖಿಸಿರುವ ನಿಯಮಗಳು ಹಾಗೂ ನಿಬಂಧನೆಗಳ ಜೊತೆಗೆ, ಕಾರ್ಡ್ ಸದಸ್ಯನು ಪೇಬ್ಯಾಕ್ ಪಾಯಿಂಟ್ ಮರುಪಾವತಿಗಾಗಿ ಎಲ್‌ಎಸ್‌ಆರ್‌ಪಿಎಲ್‌ನ ನಿಯಮಗಳಿಂದಲೂ ನಿಯಂತ್ರಿಸಲ್ಪಡುತ್ತಾನೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು www.payback.in ಗೆ ಭೇಟಿ ನೀಡಿ. ಇಲ್ಲಿ ಸೂಚಿಸಲಾದ ನಿಬಂಧನೆಗಳು ಹಾಗೂ ಪೇಬ್ಯಾಕ್ ವೆಬ್‌ಸೈಟ್‌ನಲ್ಲಿರುವ ನಿಬಂಧನೆಗಳ ನಡುವೆ ಯಾವುದೇ ಗೊಂದಲಗಳಿದ್ದಲ್ಲಿ, ಪೇಬ್ಯಾಕ್ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಬಂಧನೆಗಳು ಚಾಲ್ತಿಯಲ್ಲಿರುತ್ತವೆ. ಪೇಬ್ಯಾಕ್ ಚಾಲಿತ ಐಸಿಐಸಿಐ ಬ್ಯಾಂಕ್ ರಿವಾರ್ಡ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವಿವಾದಗಳಿದ್ದಲ್ಲಿ ಕಾರ್ಡ್ ಸದಸ್ಯರು ಎಲ್‌ಎಸ್‌ಆರ್‌ಪಿಎಲ್‌ನೊಂದಿಗೆ ನೇರವಾಗಿ ಪರಿಹರಿಸಿಕೊಳ್ಳಬೇಕು, ಇದಕ್ಕೂ ಹಾಗೂ ಐಸಿಐಸಿಐ ಬ್ಯಾಂಕ್‌ಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಹಾಗೂ ಪೇಬ್ಯಾಕ್ ಚಾಲಿತ ಐಸಿಐಸಿಐ ಬ್ಯಾಂಕ್ ರಿವಾರ್ಡ್‌ಗಳ ಅಡಿಯಲ್ಲಿ ಕಾರ್ಡ್ ಸದಸ್ಯ ಹಾಗೂ ಎಲ್‌ಎಸ್‌ಆರ್‌ಪಿಎಲ್ ನಡುವೆ ಬರಬಹುದಾದ ಯಾವುದೇ ವಿವಾದಕ್ಕೆ ಐಸಿಐಸಿಐ ಬ್ಯಾಂಕ್ ಯಾವುದೇ ರೀತಿಯಲ್ಲಿ ಹೊಣೆಗಾರರಾಗಿರುವುದಿಲ್ಲ.

ï ಐಸಿಐಸಿಐ ಬ್ಯಾಂಕ್ ರಿವಾರ್ಡ್ ಸ್ಕೀಮ್, ಹ್ಯಾಂಡ್ ಪಿಕ್ಡ್ ರಿವಾರ್ಡ್ ಸ್ಕೀಮ್ ಹಾಗೂ ಪೇಬ್ಯಾಕ್ ಚಾಲಿತ ಐಸಿಐಸಿಐ ಬ್ಯಾಂಕ್ ರಿವಾರ್ಡ್ ಗಳಿಗೆ (ಇಲ್ಲಿಂದ ಮುಂದಕ್ಕೆ ಒಟ್ಟಾಗಿ ''ಸ್ಕೀಮ್‌ಗಳು'' ಹಾಗೂ ಪ್ರತ್ಯೇಕವಾಗಿ ''ಆಯಾ ಸ್ಕೀಮ್'' ಎಂದು ಉಲ್ಲೇಖಿಸಲಾಗುತ್ತದೆ) ಈ ಕೆಳಗಿನ ನಿಯಮಗಳು ಹಾಗೂ ನಿಬಂಧನೆಗಳು ಅನ್ವಯಿಸುತ್ತವೆ: ಆಯಾ ಯೋಜನೆಯ ಚಾಲ್ತಿ ದಿನಾಂಕದಂದು ಅವಿಧೇಯ ಖಾತೆಗಳನ್ನು ಹೊಂದಿರುವ ಅಥವಾ ತರುವಾಯ ಯೋಜನೆಗಳ ಅವಧಿಯಲ್ಲಿ ಅವಿಧೇಯವಾಗುವ ಖಾತೆಗಳ ಕಾರ್ಡ್ ಸದಸ್ಯರಿಗೆ ಸ್ಕೀಮ್‌ಗಳು ಅನ್ವಯಿಸುವುದಿಲ್ಲ.

ಐಸಿಐಸಿಐ ಬ್ಯಾಂಕ್ ತನ್ನ ವಿವೇಚನೆಯಿಂದ ಕಾರ್ಡ್ ಸದಸ್ಯನಿಗೆ/ರಿಗೆ ಹೆಚ್ಚುವರಿ ರಿವಾರ್ಡ್ ಪಾಯಿಂಟ್‌ಗಳನ್ನು ನೀಡಬಹುದು. ಯೋಜನೆಗಳ ಅಡಿಯಲ್ಲಿ ಐಸಿಐಸಿಐ ಬ್ಯಾಂಕಿನಿಂದ ಮಾಡಬಹುದಾದ ರಿವಾರ್ಡ್ ಪಾಯಿಂಟ್‌ಗಳ ಲೆಕ್ಕಾಚಾರವೇ ಅಂತಿಮ ಹಾಗೂ ನಿರ್ಣಾಯಕವಾಗಿರುತ್ತದೆ ಹಾಗೂ ಕಾರ್ಡ್ ಸದಸ್ಯರು ಇದಕ್ಕೆ ಬದ್ಧರಾಗಿರುತ್ತಾರೆ ಹಾಗೂ ಯಾವುದೇ ವಿವಾದಕ್ಕೆ ಅವಕಾಶವಿರುವುದಿಲ್ಲ, ಮೇಲ್ಕಂಡಂತೆ ಆಯಾ ಯೋಜನೆಯಡಿ ರಿವಾರ್ಡ್ ಪಾಯಿಂಟ್‌ಗಳ ಮರುಪಾವತಿಯ ಮೂಲಕ ಕಾರ್ಡ್ ಸದಸ್ಯನಿಗೆ ಉಂಟಾಗಬಹುದಾದ ಅಥವಾ ಸೇರಬಹುದಾದ ಯಾವುದೇ ತೆರಿಗೆ ಅಥವಾ ಇತರ ಹೊಣೆಗಾರಿಕೆಗಳು ಅಥವಾ ಸರ್ಕಾರಕ್ಕೆ ಅಥವಾ ಕಾನೂನಾತ್ಮಕವಾದ ಯಾವುದೇ ಇತರ ಪ್ರಾಧಿಕಾರ ಅಥವಾ ಸಂಸ್ಥೆಗಳಿಗೆ (ಕೇಂದ್ರ, ರಾಜ್ಯ ಅಥವಾ ಸ್ಥಳೀಯ) ಪಾವತಿಸಬೇಕಾದ ಶುಲ್ಕಗಳು, ಕೇವಲ ಕಾರ್ಡ್ ಸದಸ್ಯರ ಖಾತೆಗೆ ಸೇರಿರುತ್ತದೆ. ಸರಕು / ಸೇವೆಗಳ ವಿತ್ತೀಯ ಮೌಲ್ಯದ ಮೇಲೆ ಮೂಲದಲ್ಲಿ ಕಡಿತಗೊಳಿಸಿದ ತೆರಿಗೆಯನ್ನು ಕಾರ್ಡ್ ಸದಸ್ಯರೇ ಪಾವತಿಸಬೇಕಾಗುತ್ತದೆ.

- ಸ್ಕೀಮ್ ಮುಕ್ತಾಯ ದಿನಾಂಕದ ನಂತರ ಸ್ಕೀಮ್‌ಗಳನ್ನು ಮುಂದುವರಿಸಲು ಅಥವಾ ಸದ್ಯದ ಸ್ಕೀಮ್‌ಗಳನ್ನು ಇದೇ ರೀತಿಯ ಹೊಸ ಸ್ಕೀಮ್‌ಗಳ ಮೂಲಕ ಬದಲಿಸಲು ಐಸಿಐಸಿಐ ಬ್ಯಾಂಕ್ ಅಥವಾ ಪೇಬ್ಯಾಕ್‌ಗಳು ಯಾವುದೇ ರೀತಿ ಬದ್ಧರೆಂದು ಈ ಮೂಲಕ ಪರಿಗಣಿಸಲಾಗುವುದಿಲ್ಲ,
- ರಿವಾರ್ಡ್ ಪಾಯಿಂಟ್‌ಗಳ ಮರುಪಾವತಿಯು ಸ್ವಯಂಪ್ರೇರಿತವಾಗಿರುತ್ತದೆ ಹಾಗೂ ಕ್ರೆಡಿಟ್ ಕಾರ್ಡ್ ಬಳಕೆಯ ಸಂದರ್ಭದಲ್ಲಿ ಬರುವ ಸಂಬಂಧಿತ ಶುಲ್ಕಗಳು ಕಾರ್ಡ್ ಸದಸ್ಯರ ಸ್ವಯಂಪ್ರೇರಣೆಯಿಂದ ಬಂದಿರುತ್ತವೆ ಎಂದು ಪರಿಗಣಿಸಲಾಗುತ್ತದೆ.
- ಕ್ರೆಡಿಟ್ ಕಾರ್ಡ್ ಬಳಕೆಯ ಸಂದರ್ಭದಲ್ಲಿ ಉಂಟಾಗುವ ಯಾವುದೇ ಕ್ರಮಗಳು, ಹಕ್ಕುಗಳು, ಬೇಡಿಕೆಗಳು, ಹೊಣೆಗಾರಿಕೆಗಳು, ನಷ್ಟಗಳು, ಹಾನಿಗಳು, ವೆಚ್ಚಗಳು, ಶುಲ್ಕಗಳು ಅಥವಾ ವೆಚ್ಚಗಳಿಗೆ ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕನ್ನು ಹೊಣೆಗಾರರಾಗಿಸುವಂತಿಲ್ಲ,
- ಐಸಿಐಸಿಐ ಬ್ಯಾಂಕ್ ಕಾರ್ಡ್ ಖಾತೆಯ ಮುಚ್ಚುವಿಕೆ ಅಥವಾ ಕಾರ್ಡ್‌ನ ಮುಕ್ತಾಯ / ರದ್ದತಿ ಅಥವಾ ಸಂಬಂಧಿತ ಯೋಜನೆಯ ಮುಕ್ತಾಯ / ರದ್ದತಿ ಸಂದರ್ಭದಲ್ಲಿ ಆಯಾ ಯೋಜನೆಗಳ ಅಡಿಯಲ್ಲಿ ಕಾರ್ಡ್ ಸದಸ್ಯರು ಗಳಿಸಿದ ರಿವಾರ್ಡ್ ಪಾಯಿಂಟ್‌ಗಳನ್ನು ರದ್ದುಗೊಳಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಹೊಂದಿರುತ್ತದೆ.
- ಕಾಲಕಾಲಕ್ಕೆ ಐಸಿಐಸಿಐ ಬ್ಯಾಂಕ್ ಪರಿಚಯಿಸುವ ಯೋಜನೆಗಳು ಅಥವಾ ಯಾವುದೇ ಇತರ ರಿವಾರ್ಡ್ ಪಾಯಿಂಟ್ ಸ್ಕೀಮ್ ಅನ್ನು, ಯಾವುದೇ ಸಮಯದಲ್ಲಿ ಹಾಗೂ ಕಾರ್ಡ್ ಸದಸ್ಯರಿಗೆ ಯಾವುದೇ ಪೂರ್ವ ಸೂಚನೆ ಇಲ್ಲದೆ, ಸೇರಿಸುವ, ಬದಲಾಯಿಸುವ, ಮಾರ್ಪಡಿಸುವ, ಬದಲಾಯಿಸುವ ಅಥವಾ ಸಂಪೂರ್ಣವಾಗಿ ಅಥವಾ ಭಾಗಶಃ ಬದಲಾಯಿಸುವ, ಅಥವಾ ಸಂಪೂರ್ಣವಾಗಿ ಹಿಂಪಡೆಯುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಸ್ಪಷ್ಟವಾಗಿ ಕಾದಿರಿಸುತ್ತದೆ. ಐಸಿಐಸಿಐ ಬ್ಯಾಂಕ್ ಸೂಚಿಸದ ಹೊರತು, ಐಸಿಐಸಿಐ ಬ್ಯಾಂಕ್ ರಿವಾರ್ಡ್ ಪಾಯಿಂಟ್‌ಗಳ ಸಂಗ್ರಹವು ಕ್ರೆಡಿಟ್ ಕಾರ್ಡ್‌ಗಳ ಪ್ರಕಾರಗಳಿಗೆ ಅನುಸಾರವಾಗಿ

ಬದಲಾಗುತ್ತದೆ ಹಾಗೂ ಆಯಾ ಕ್ರೆಡಿಟ್ ಕಾರ್ಡ್ ಸಂವಹನಗಳಲ್ಲಿ ಉಲ್ಲೇಖಿಸಿದಂತೆ ಇರುತ್ತದೆ ಎಂಬುದನ್ನು ಕಾರ್ಡ್ ಸದಸ್ಯನು/ರು ಗಮನಿಸಬೇಕು.

- ಇಲ್ಲಿಯ ನಿಯಮಗಳು ಹಾಗೂ ನಿಬಂಧನೆಗಳ ಪ್ರಕಾರ, ರಿವಾರ್ಡ್ ಪಾಯಿಂಟ್ ರಿಡಂಪ್ಶನ್‌ಗಾಗಿ ಕೋರಿಕೆಯನ್ನು ಪ್ರಾಥಮಿಕ ಕಾರ್ಡ್ ಸದಸ್ಯರಿಂದ ಮಾತ್ರ ಸ್ವೀಕರಿಸಲಾಗುತ್ತದೆ. ಚಿಲ್ಲರೆ (ರಿಟೇಲ್) ವಹಿವಾಟುಗಳಿಗಾಗಿ ಕಾರ್ಡ್ ಸದಸ್ಯರು/ಗಳು ರಿವಾರ್ಡ್ ಪಾಯಿಂಟ್/ಗಳನ್ನು ಗಳಿಸುತ್ತಾರೆ. ಕಾರ್ಡ್ ಸದಸ್ಯರು/ಗಳು ಚಿಲ್ಲರೆ ವಹಿವಾಟುಗಳಲ್ಲಿ ರಿವಾರ್ಡ್ ಪಾಯಿಂಟ್‌ಗಳನ್ನು ಗಳಿಸಲು ಅರ್ಹರಾಗಿರುವುದಿಲ್ಲ
- ಯಾವುದೇ ಇತರ ಚಿಲ್ಲರೆ ವಹಿವಾಟಿಗೆ/ಗಳಿಗೆ, ಐಸಿಐಸಿಐ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ, ನಿರ್ದಿಷ್ಟ ಅವಧಿಗೆ ಅಥವಾ ಪ್ರಚಾರದ ಯೋಜನೆ/ಗಳು ಅಥವಾ ನಿರ್ದಿಷ್ಟ ಪ್ರಚಾರ/ಸ್ಕೀಮ್‌ಗಳಿಗೆ ಬೋನಸ್ ರಿವಾರ್ಡ್ ಪಾಯಿಂಟ್‌ಗಳನ್ನು ನೀಡಬಹುದು.
- ಅರ್ಹ ಪ್ರಾಥಮಿಕ, ಪೂರಕ ಅಥವಾ ಬಹು ಕಾರ್ಡ್‌ಗಳಿದ್ದ ಸಂದರ್ಭದಲ್ಲಿ ರಿವಾರ್ಡ್ ಪಾಯಿಂಟ್‌ಗಳು ವೈಯಕ್ತಿಕ ಕಾರ್ಡ್ ಖಾತೆಗೆ ಸೇರುತ್ತವೆ. ಪೂರಕ ಕಾರ್ಡ್ ಹಾಗೂ / ಅಥವಾ ಬಹು ಕಾರ್ಡ್ (ಗಳು) ಗಳಲ್ಲಿ ಯಾವುದಾದರೂ ಚಿಲ್ಲರೆ (ರಿಟೇಲ್)ವಹಿವಾಟು/ಗಳನ್ನು ಮಾಡಿದಾಗ ಗಳಿಸಿದ ರಿವಾರ್ಡ್ ಪಾಯಿಂಟ್‌ಗಳು ಪ್ರಾಥಮಿಕ ಕಾರ್ಡ್ ಸದಸ್ಯರ ಕಾರ್ಡ್ ಖಾತೆಯಲ್ಲಿ ಸ್ವಯಂಚಾಲಿತವಾಗಿ ಸಂಗ್ರಹವಾಗುತ್ತವೆ.
- ಕಾರ್ಡ್ ಸದಸ್ಯನು/ರು ನಗದು ಹಿಂಪಡೆಯುವಿಕೆಯ ಮುಂಗಡಗಳನ್ನು ಒಳಗೊಂಡ ವಹಿವಾಟುಗಳಿಗೆ ಹಾಗೂ ಯಾವುದೇ ಸೇರ್ಪಡೆ ಶುಲ್ಕ, ವಾರ್ಷಿಕ ಶುಲ್ಕ, ಸಪ್ಲಿಮೆಂಟರಿ ಕಾರ್ಡ್ ಶುಲ್ಕ, ಬಹು ಕಾರ್ಡ್ ಶುಲ್ಕ, ಬ್ಯಾಲೆನ್ಸ್ ವರ್ಗಾವಣೆ ಶುಲ್ಕ, ಇಎಂಐ ವಹಿವಾಟುಗಳು, ನಗದು ಮುಂಗಡ ಶುಲ್ಕ, ಚೆಕ್‌ಗಳ ವೈಫಲ್ಯದ ಶುಲ್ಕಗಳು, ಹಣಕಾಸಿನ ಶುಲ್ಕಗಳು, ಅಪರಾಧ ಶುಲ್ಕಗಳು, ವಿಳಂಬ ಪಾವತಿ ಶುಲ್ಕಗಳು, ಸೇವಾ ಶುಲ್ಕ ಸೇರಿದಂತೆ ಕಾರ್ಡಿಗೆ ಅನ್ವಯವಾಗುವ ಯಾವುದೇ ರೀತಿಯ ಶುಲ್ಕಗಳು ಹಾಗೂ ಐಸಿಐಸಿಐ ಬ್ಯಾಂಕ್ ಕಾಲಕಾಲಕ್ಕೆ ವಿಧಿಸುವ ಯಾವುದೇ ಶುಲ್ಕಗಳಿಗೆ ರಿವಾರ್ಡ್ ಪಾಯಿಂಟ್‌ಗಳು ದೊರೆಯುವುದಿಲ್ಲ. ಪ್ರಾಥಮಿಕ ಕಾರ್ಡ್ ಸದಸ್ಯರಿಂದ ಒಮ್ಮೆ ಬಂದ ಮುಕ್ತಾಯದ ಆಯ್ಕೆಯನ್ನು ಯಾವುದೇ ಕಾರ್ಡ್ ಸದಸ್ಯರ ಸಂದರ್ಭದಲ್ಲಿ ರದ್ದುಗೊಳಿಸಲಾಗುವುದಿಲ್ಲ/ ಹಿಂಪಡೆಯಲಾಗುವುದಿಲ್ಲ/ ಬದಲಾಯಿಸಲಾಗುವುದಿಲ್ಲ
- ಐಸಿಐಸಿಐ ಬ್ಯಾಂಕ್ ಅಥವಾ ಐಸಿಐಸಿಐ ಬ್ಯಾಂಕಿನ ವ್ಯಾಪಾರಿ ಪಾಲುದಾರ / ಭಾಗವಹಿಸುವ ಪಾಲುದಾರ ಅಥವಾ ಐಡಿಐಸಿಐ ಬ್ಯಾಂಕ್ನಿಂದ ನೀಡಬಹುದಾದ ಯಾವುದೇ ನಿರ್ದಿಷ್ಟ ಯೋಜನೆ / ಪ್ರಚಾರದ ಆಫರ್ ಅಡಿಯಲ್ಲಿ ಒಮ್ಮೆ ವಿನಿಮಯ ಮಾಡಿಕೊಂಡ ರಿವಾರ್ಡ್ ಪಾಯಿಂಟ್‌ಗಳನ್ನು ನಂತರದಲ್ಲಿ ಕಾರ್ಡ್ ಖಾತೆಗೆ ವರ್ಗಾಯಿಸಲು ಅಥವಾ ರದ್ದುಗೊಳಿಸಲು ಸಾಧ್ಯವಿಲ್ಲ. ಯಾವುದೇ ರೀತಿಯ ರಿವಾರ್ಡ್ ಪಾಯಿಂಟ್‌ಗಳ ವರ್ಗಾವಣೆ / ವರ್ಗಾವಣೆಯು ಅನ್ವಯವಾಗುವ ಯಾವುದೇ ವ್ಯಾಪಾರಿ ಪಾಲುದಾರ / ಭಾಗವಹಿಸುವ ಪಾಲುದಾರರ ಪ್ರೋಗ್ರಾಂಗೆ ಪರಿವರ್ತನೆ / ವರ್ಗಾವಣೆಯಾದ ಯಾವುದೇ ರಿವಾರ್ಡ್ ಪಾಯಿಂಟ್‌ಗಳ ಯಾವುದೇ ಜವಾಬ್ದಾರಿಯನ್ನು ಐಸಿಐಸಿಐ ಬ್ಯಾಂಕ್ ತೆಗೆದುಕೊಳ್ಳುವುದಿಲ್ಲ

ï ರಿಡಂಪ್ಶನ್ ಕ್ಯಾಟಲಾಗ್‌ನಲ್ಲಿ ನೀಡಲಾದ ಉತ್ಪನ್ನಗಳ ಆಯ್ಕೆ, ಸೇರ್ಪಡೆ ಅಥವಾ ತೆಗೆದುಹಾಕುವಿಕೆಯು ಐಸಿಐಸಿಐ ಬ್ಯಾಂಕಿನ ಸ್ವಂತ ವಿವೇಚನೆಗೆ ಹಾಗೂ ಸೂಚನೆರಹಿತ ಬದಲಾವಣೆಗೆ ಒಳಪಟ್ಟಿರುತ್ತದೆ.

ï ರಿಡಂಪ್ಶನ್ ಕ್ಯಾಟಲಾಗ್ ಅಥವಾ ಸಂಬಂಧಿತ ವೆಬ್ ಪುಟಗಳಲ್ಲಿನ ಸರಕು / ಸೇವೆಗಳ ದೃಶ್ಯಗಳು ಸಾಂಕೇತಿಕವಾಗಿರುತ್ತವೆ. ಕಾರ್ಡ್ ಸದಸ್ಯರಿಗೆ ನೀಡುವ ಯಾವುದೇ ಉತ್ಪನ್ನಗಳ ತಯಾರಕರ ಪೂರೈಕೆದಾರರು ಉತ್ಪನ್ನಗಳನ್ನು ಹಿಂಪಡೆದಲ್ಲಿ, ರದ್ದುಗೊಳಿಸಿದಲ್ಲಿ, ಬದಲಾವಣೆ ಮಾಡುವ ಅಥವಾ ತಿದ್ದುಪಡಿ ಮಾಡಿದಲ್ಲಿ ಐಸಿಐಸಿಐ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ.

ï ರಿಡಂಪ್ಶನ್‌ಗಾಗಿ ಲಭ್ಯವಿರುವ ಉತ್ಪನ್ನಗಳು / ವೋಚರ್‌ಗಳು / ಸೇವೆಗಳು ಮರಳಿಪಡೆದುಕೊಳ್ಳುವಿಕೆಯ ಸಮಯದಲ್ಲಿನ ಅದರ ಲಭ್ಯತೆ ಹಾಗೂ ತಯಾರಕರ ಖಾತರಿಗಳು / ನಿರ್ಬಂಧಗಳಿಗೆ ಒಳಪಟ್ಟಿರುತ್ತವೆ.

ï ಐಸಿಐಸಿಐ ಬ್ಯಾಂಕ್, ಉತ್ಪನ್ನಗಳು / ವೋಚರ್‌ಗಳು / ಸೇವೆಗಳ ಗುಣಮಟ್ಟ, ಉಪಯುಕ್ತತೆ ಹಾಗೂ ಸೂಕ್ತತೆಯ ಬಗ್ಗೆ ಯಾವುದೇ ಖಾತರಿ ನೀಡುವುದಿಲ್ಲ ಹಾಗೂ ಅವುಗಳು ದೋಷಪೂರಿತವಾಗಿದ್ದಲ್ಲಿ ಯಾವುದೇ ರೀತಿಯಲ್ಲೂ ಅದಕ್ಕೆ ಜವಾಬ್ದಾರರಾಗಿರುವುದಿಲ್ಲ. ಐಸಿಐಸಿಐ ಬ್ಯಾಂಕ್ 10 ಕೆಲಸದ ದಿನಗಳಲ್ಲಿ ಸರಕುಗಳನ್ನು ತಲುಪಿಸುವ ಪ್ರಯತ್ನವನ್ನು ಮಾಡುತ್ತದೆ. ಆದೇನೇ ಇದ್ದರೂ, ಸರಕುಗಳ ವಿತರಣೆಯಲ್ಲಿ ಉಂಟಾಗಬಹುದಾದ ಯಾವುದೇ ವಿಳಂಬ ಅಥವಾ ನಷ್ಟಕ್ಕೆ ಐಸಿಐಸಿಐ ಬ್ಯಾಂಕ್ ಹೊಣೆಗಾರನಾಗಿರುವುದಿಲ್ಲ. ಕಾರ್ಡ್ ಸದಸ್ಯರು ಗಳಿಸಿದ ರಿವಾರ್ಡ್ ಪಾಯಿಂಟ್‌ಗಳು ಯಾವುದೇ ನಗದು ಅಥವಾ ವಿತ್ತೀಯ ಮೌಲ್ಯವನ್ನು ಹೊಂದಿರುವುದಿಲ್ಲ ಹಾಗೂ ಅವುಗಳನ್ನು ನಗದಿಗಾಗಿ ವಿನಿಮಯ ಮಾಡಲಾಗುವುದಿಲ್ಲ.

ï ಯಾವುದೇ ಸ್ಕೀಮ್‌ಗಳು, ಅದನ್ನು ನಿಷೇಧಿಸಿರುವ ಪ್ರದೇಶಗಳಲ್ಲಿ ಹಾಗೂ / ಅಥವಾ ಯಾವುದೇ ಕಾರಣಕ್ಕೂ ಅಂತಹ ಸ್ಕೀಮ್‌ಗಳನ್ನು ನೀಡಲಾಗದಂತಹ ಸರಕುಗಳು / ಉತ್ಪನ್ನಗಳು / ಸೇವೆಗಳ ಮೇಲೆ ಲಭ್ಯವಿರುವುದಿಲ್ಲ.

ï ರಿಡಂಪ್ಶನ್ ಕ್ಯಾಟಲಾಗ್‌ನಲ್ಲಿ ಉಲ್ಲೇಖಿಸಲಾದ ಸರಕುಗಳು / ಸೇವೆಗಳನ್ನು ವರ್ಗಾಯಿಸಲಾಗುವುದಿಲ್ಲ ಹಾಗೂ ನಗದೀಕರಿಸಲಾಗುವುದಿಲ್ಲ.

ï ಐಸಿಐಸಿಐ ಬ್ಯಾಂಕ್ ಯಾವುದೇ ಕಾರಣಗಳನ್ನು ನೀಡದೆ ಅಥವಾ ಕಾರ್ಡ್ ಸದಸ್ಯರಿಗೆ ಯಾವುದೇ ಪೂರ್ವ ಸೂಚನೆ ಇಲ್ಲದೆ ಯೋಜನೆಗಳಿಗೆ ಅನ್ವಯವಾಗುವ ಎಲ್ಲಾ ಅಥವಾ ಯಾವುದೇ ನಿಯಮಗಳು ಹಾಗೂ ನಿಬಂಧನೆಗಳನ್ನು ಮಾರ್ಪಡಿಸುವ / ಬದಲಾಯಿಸುವ ಹಕ್ಕನ್ನು ಹೊಂದಿದೆ. ಐಸಿಐಸಿಐ ಬ್ಯಾಂಕ್ ಯಾವುದೇ ಕಾರಣಗಳನ್ನು ನೀಡದೆ ಅಥವಾ ಯಾವುದೇ ಪೂರ್ವ ಸೂಚನೆ ಇಲ್ಲದೆ ಯೋಜನೆಗಳನ್ನು ಸ್ಥಗಿತಗೊಳಿಸುವ ಹಕ್ಕನ್ನು ಸಹ ಹೊಂದಿದೆ. ಇಲ್ಲಿ ಹೇಳಿರುವ ಯಾವುದೂ, ಯೋಜನೆಗಳನ್ನು ಮುಂದುವರಿಸಲು ಐಸಿಐಸಿಐ ಬ್ಯಾಂಕಿನ ಬದ್ಧತೆ ಅಥವಾ ಪ್ರಾತಿನಿಧ್ಯವನ್ನು ತೋರುವುದಿಲ್ಲ.

ಯೋಜನೆಗಳ ಅಡಿಯಲ್ಲಿ ಕಾರ್ಡ್ ಸದಸ್ಯರಿಗೆ ನೀಡಲಾಗುವ ಉತ್ಪನ್ನಗಳು / ಸೇವೆಗಳು / ರಿವಾರ್ಡ್‌ಗಳಿಗೆ ಸಂಬಂಧಿಸಿದ ಸಂವಹನ / ನೋಟಿಸ್ ಗಳನ್ನು ಅಂತಹ ಉತ್ಪನ್ನಗಳು / ಸೇವೆಗಳು / ರಿವಾರ್ಡ್‌ಗಳು ಕಾರ್ಡ್

ಸದಸ್ಯರಿಗೆ ತಲುಪಿದ 10 ದಿನಗಳ ಒಳಗೆ ಮಾತ್ರ ಪರಿಗಣಿಸಲಾಗುತ್ತದೆ. 10 ದಿನಗಳ ನಂತರ ಮಾಡಿದ ಯಾವುದೇ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಪರಿಗಣಿಸುವುದಿಲ್ಲ, ಉತ್ಪನ್ನ / ಸೇವೆಗಳು / ರಿವಾರ್ಡ್‌ಗಳಿಗೆ ಸಂಬಂಧಿಸಿದಂತಹ ಯಾವುದಾದರೂ ವಿವಾದವಿದ್ದಲ್ಲಿ, ಅದು, ಐಸಿಐಸಿಐ ಬ್ಯಾಂಕ್ ವಿರುದ್ಧದ ಹಕ್ಕನ್ನು ರೂಪಿಸುವುದಿಲ್ಲ.

- ಉತ್ಪನ್ನಗಳು / ಸೇವೆಗಳು / ರಿವಾರ್ಡ್‌ಗಳ ವಿತರಣಾ ಸ್ಥಿತಿಯನ್ನು ವಿತರಣೆಯ ನಂತರದ 30 ದಿನಗಳವರೆಗೆ ಮಾತ್ರ ಅನುಸರಣೆ ಮಾಡಬಹುದು. ವಿತರಣಾ ಸ್ಥಿತಿಗಾಗಿ ಯಾವುದೇ ನಂತರದ ಸಂವಹನವನ್ನು ಪರಿಗಣಿಸಲಾಗುವುದಿಲ್ಲ.
- ನಿಯಮಗಳು ಹಾಗೂ ನಿಬಂಧನೆಗಳು ಪ್ರಾಥಮಿಕ ನಿಯಮಗಳು ಹಾಗೂ ನಿಬಂಧನೆಗಳಿಗೆ ಹೆಚ್ಚುವರಿಯಾಗಿರಬೇಕು, ಅದಕ್ಕೆ ಬದಲಿಯಾಗಿ ಅಥವಾ ಸಡಿಲಿಸುವಂತೆ ಇರಬಾರದು.

ಇಲ್ಲಿ ಹೇಳಿರುವಂತೆ, ಸ್ಕೀಮ್‌ಗಳಿಂದ ಅಥವಾ ಅದಕ್ಕೆ ಸಂಬಂಧಿಸಿದಂತೆ ಅಥವಾ ಅದರ ಪರಿಣಾಮವಾಗಿ ಯಾವುದಾದರೂ ವಿವಾದಗಳು ಇದ್ದಲ್ಲಿ, ಮುಂಬೈನ ಸಮರ್ಥ ನ್ಯಾಯಾಲಯಗಳ ವಿಶೇಷ ಅಧಿಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

## XXVI. ಪ್ರಕಟಣೆಗಳು

ಕಾರ್ಡ್ ಸದಸ್ಯರು ಐಸಿಐಸಿಐ ಬ್ಯಾಂಕ್, ಅದರ ಸಮೂಹದ ಕಂಪನಿಗಳು ಮಾಹಿತಿ / ದತ್ತಾಂಶಗಳ ಬಳಕೆ ಅಥವಾ ಸಂಸ್ಕರಣೆಗೆ ಅಗತ್ಯ ಅಥವಾ ಸೂಕ್ತವೆಂದು ಪರಿಗಣಿಸಬಹುದಾದ ಇತರ ಐಸಿಐಸಿಐ ಸಮೂಹದ ಕಂಪನಿಗಳು / ಬ್ಯಾಂಕುಗಳು / ಹಣಕಾಸು ಸಂಸ್ಥೆಗಳು / ಕ್ರೆಡಿಟ್ ಬ್ಯೂರೋಗಳು / ಏಜೆನ್ಸಿಗಳು / ನಿಯಂತ್ರಕ ಪ್ರಾಧಿಕಾರಗಳು ಶಾಸನಬದ್ಧ ಸಂಸ್ಥೆಗಳು / ತೆರಿಗೆ ಅಧಿಕಾರಿಗಳು / ಕೇಂದ್ರ ಮಾಹಿತಿ ಬ್ಯೂರೋಗಳು / ಐಸಿಐಸಿಐ ಬ್ಯಾಂಕ್ / ಅದರ ಗ್ರೂಪ್ ಕಂಪನಿಗಳಂತಹ ಇತರ ವ್ಯಕ್ತಿಗಳೊಂದಿಗೆ ಆತನ / ಆಕೆಯ ಅರ್ಜಿಗೆ ಸಂಬಂಧಿಸಿದ ಎಲ್ಲಾ ಮಾಹಿತಿ, ಡೇಟಾ ಅಥವಾ ದಾಖಲೆಗಳನ್ನು ವಿನಿಮಯ ಮಾಡಲು, ಹಂಚಿಕೊಳ್ಳಲು ಅಥವಾ ಅದರ ಭಾಗವಾಗಲು ಹಾಗೂ ಮಾಹಿತಿ / ಡೇಟಾ / ಅದರ ಉತ್ಪನ್ನಗಳು ಇತರ ಬ್ಯಾಂಕುಗಳು / ಹಣಕಾಸು ಸಂಸ್ಥೆಗಳು / ಕ್ರೆಡಿಟ್ ಪೂರೈಕೆದಾರರು / ಅಂತಹ ವ್ಯಕ್ತಿಗಳೊಂದಿಗೆ ನೋಂದಾಯಿಸಲು ಒಪ್ಪಿಗೆ ಕೊಡುತ್ತಾರೆ ಹಾಗೂ ಅಧಿಕಾರ ನೀಡುತ್ತಾರೆ ಹಾಗೂ ಈ ಮಾಹಿತಿಯ ಬಳಕೆಗೆ ಐಸಿಐಸಿಐ ಬ್ಯಾಂಕ್ / ಅದರ ಸಮೂಹದ ಕಂಪನಿಗಳನ್ನು ಹೊಣೆಗಾರರನ್ನಾಗಿ ಮಾಡಬಾರದು. ಒಂದು ವೇಳೆ ಕಾರ್ಡ್ ಸದಸ್ಯರು ಯಾವುದೇ ಹಣಕಾಸಿನ ನೆರವು / ಸೌಲಭ್ಯಗಳು / ಹಣಕಾಸು / ಕ್ರೆಡಿಟ್ ಸೌಲಭ್ಯ ಅಥವಾ ಬಡ್ಡಿ / ಶುಲ್ಕಗಳ ಅಸಲು ಮೊತ್ತದ ಪಾವತಿ ಅಥವಾ ಮರುಪಾವತಿಯನ್ನು ತಪ್ಪಿಸಿದಲ್ಲಿ, ಐಸಿಐಸಿಐ ಬ್ಯಾಂಕ್ ಹಾಗೂ / ಅಥವಾ ಆ ಮೂಲಕ ಬೇಪಾವತಿ ಹಾಗೂ ಕಾರ್ಡ್ ಸದಸ್ಯ / ಅಥವಾ ಅದರ ನಿರ್ದೇಶಕರು / ಪಾಲುದಾರರು / ಸಪ್ಲಿಮೆಂಟರಿ ಕಾರ್ಡುದಾರರ ಹೆಸರುಗಳನ್ನು ಹಾಗೂ ವಿವರಗಳನ್ನು , ಸೂಕ್ತವಾದಂತೆ, ಡೀಫಾಲ್ಟರ್‌ಗಳೆಂದು ಹಾಗೂ ಐಸಿಐಸಿಐ ಬ್ಯಾಂಕ್

ಅಥವಾ ಆರ್‌ಬಿಐನಂತಹ ಮಾಧ್ಯಮದ ಮೂಲಕ ಅವರ ಸಂಪೂರ್ಣ ವಿವೇಚನೆಗೆ ಸೂಕ್ತವೆಂದು ಭಾವಿಸಬಹುದಾದ ರೀತಿಯಲ್ಲಿ ಬಹಿರಂಗಪಡಿಸಲು ಅಥವಾ ಪ್ರಕಟಿಸಲು ಅನರ್ಹ ಹಕ್ಕನ್ನು ಹೊಂದಿರುತ್ತದೆ.

ಐಸಿಐಸಿಐ ಬ್ಯಾಂಕ್ ಕ್ರೆಡಿಟ್ ಇತಿಹಾಸ / ಮರುಪಾವತಿ ದಾಖಲೆ ಹಾಗೂ / ಅಥವಾ ಕ್ರೆಡಿಟ್ ಮಾಹಿತಿ ಕಂಪನಿಗಳ ನಿಯಂತ್ರಣ ಕಾಯ್ದೆ, 2005 ರ ಪ್ರಕಾರ ಕಾರ್ಡ್ ಸದಸ್ಯರ ಹಿಂದಿನ ಬಾಕಿ ಸ್ಥಿತಿಗೆ ಸಂಬಂಧಿಸಿದ ಮಾಹಿತಿಯನ್ನು ಹೇಳಿಕೆಗಳ ಮೂಲಕ ಕ್ರೆಡಿಟ್ ಮಾಹಿತಿ ಬ್ಯೂರೋಗೆ (ಆರ್‌ಬಿಐನಿಂದ ನಿರ್ದಿಷ್ಟವಾಗಿ ಅಧಿ ಕೃತಗೊಂಡ) ಬಹಿರಂಗಪಡಿಸುತ್ತದೆ. ಕಾರ್ಡ್ ಸದಸ್ಯರ ಕ್ರೆಡಿಟ್ ಯೋಗ್ಯತೆಯ / ಅರ್ಹತೆಯ ಪ್ರತಿಕೂಲರಹಿತ ವರದಿಗಳ ಆಧಾರದ ಮೇಲೆ ಕ್ರೆಡಿಟ್ ಕಾರ್ಡ್‌ನ ಅರ್ಜಿಯನ್ನು ಅಂಗೀಕರಿಸಲಾಗುತ್ತದೆ . ಐಸಿಐಸಿಐ ಬ್ಯಾಂಕ್ ಕಾರ್ಡ್ ಖಾತೆಯಲ್ಲಿನ ಯಾವುದೇ ಲೋಪಗಳು ಅಥವಾ ಕಾರ್ಡ್ ಸದಸ್ಯರ ಕ್ರೆಡಿಟ್ ಸೌಲಭ್ಯವನ್ನು ಕಾರ್ಡ್ ಮೂಲಕ ಅಥವಾ ಇತರೆ ರೀತಿಯಲ್ಲಿ ಹಿಂಪಡೆಯುವುದನ್ನು ಬ್ಯಾಂಕುಗಳು ಅಥವಾ ಹಣಕಾಸು ಸಂಸ್ಥೆಗಳಿಗೆ ವರದಿ ಮಾಡಬಹುದು. ಪ್ರತಿಕೂಲ ವರದಿಗಳ ಸ್ವೀಕೃತಿಯ ಆಧಾರದ ಮೇಲೆ (ಕಾರ್ಡ್ ಸದಸ್ಯ ಅಥವಾ ಆತನ / ಆಕೆಯ ಕುಟುಂಬ ಸದಸ್ಯರ ಸಾಲದ ಯೋಗ್ಯತೆಗೆ ಸಂಬಂಧಿಸಿ), ಐಸಿಐಸಿಐ ಬ್ಯಾಂಕ್, 15 ದಿನಗಳ ಮುಂಚಿತವಾಗಿ ಬರವಣಿಗೆಯಲ್ಲಿ ಸೂಚನೆ ನೀಡಿದ ನಂತರ, ಕ್ರೆಡಿಟ್ ಕಾರ್ಡ್ ಅನ್ನು ರದ್ದುಗೊಳಿಸಬಹುದು, ಹಾಗೂ ಕಾರ್ಡ್ ಖಾತೆಯಲ್ಲಿನ ಬಾಕಿ ಉಳಿದಿರುವ ಬಾಕಿ ಹಾಗೂ ಕಾರ್ಡ್ ಬಳಕೆಯಿಂದ ಉಂಟಾದ ಯಾವುದೇ ಹೆಚ್ಚಿನ ಶುಲ್ಕಗಳನ್ನು, ಕಾರ್ಡ್ ಖಾತೆಗೆ ಇನ್ನೂ ಬಿಲ್ ಮಾಡದಿದ್ದರೂ, ಕಾರ್ಡ್ ಸದಸ್ಯರು ತಕ್ಷಣವೇ ಪಾವತಿಸಬೇಕು. ಐಸಿಐಸಿಐ ಬ್ಯಾಂಕ್, ತಾನು ಮಾಹಿತಿಯನ್ನು ಪಡೆದ ಅಥವಾ ಬಹಿರಂಗಪಡಿಸಿದ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯ ಹೆಸರನ್ನು ಕಾರ್ಡ್ ಸದಸ್ಯರಿಗೆ ಬಹಿರಂಗಪಡಿಸಲು ಬದ್ಧವಾಗಿರುವುದಿಲ್ಲ.

ಐಸಿಐಸಿಐ ಬ್ಯಾಂಕ್ / ಸಮೂಹ ಕಂಪನಿಗಳು ಛಾಯಾಚಿತ್ರಗಳನ್ನು ಒಳಗೊಂಡಂತೆ ಸಲ್ಲಿಸಲಾದ ಅರ್ಜಿ ನಮೂನೆಗಳು ಹಾಗೂ ದಾಖಲೆಗಳನ್ನು ಉಳಿಸಿಕೊಳ್ಳುವ ಹಕ್ಕನ್ನು ಹೊಂದಿರುತ್ತವೆ ಹಾಗೂ ಅದನ್ನು ಹಿಂತಿರುಗಿಸುವುದಿಲ್ಲ.

## XXVII. ಸಾಲದ ನೆರವು

ಐಸಿಐಸಿಐ ಬ್ಯಾಂಕ್, ಕಾರ್ಡ್ ಸದಸ್ಯರನ್ನು ಉಲ್ಲೇಖಿಸದೆ ಅಥವಾ ಸೂಚನೆ ನೀಡದೆ ತನ್ನ ಆಯ್ಕೆಯ ಯಾವುದೇ ಮೂರನೆ ಪಕ್ಷ/ವ್ಯಕ್ತಿಗೆ, ಕ್ರೆಡಿಟ್ ಕಾರ್ಡ್ ಬಾಕಿಯನ್ನು, ಸಂಪೂರ್ಣವಾಗಿ ಅಥವಾ ಭಾಗಶಃ ವರ್ಗಾಯಿಸುವ, ನಿಯೋಜಿಸುವ ಹಾಗೂ ಮಾರಾಟ ಮಾಡುವ ಹಕ್ಕನ್ನು ಹೊಂದಿದೆ. ಅಂತಹ ಯಾವುದೇ ಮಾರಾಟ, ನಿಯೋಜನೆ ಅಥವಾ ವರ್ಗಾವಣೆಯ ಹೊರತಾಗಿಯೂ, ಐಸಿಐಸಿಐ ಬ್ಯಾಂಕ್ ಕಾರ್ಡ್ ಸದಸ್ಯರ ವಿರುದ್ಧ ಮುಂದುವರಿಯಲು ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ. ಅಂತಹ ಯಾವುದೇ ನಿಯೋಜನೆ, ಮಾರಾಟ ಅಥವಾ ವರ್ಗಾವಣೆ ಹಾಗೂ ಬಾಕಿಗಳ ವಸೂಲಾತಿಯ ಕಾರಣದಿಂದ ಉಂಟಾಗುವ ಎಲ್ಲಾ ಖರ್ಚು ಹಾಗೂ ವೆಚ್ಚಗಳಿಗೆ ಕಾರ್ಡ್ ಸದಸ್ಯರು ಹೊಣೆಗಾರರಾಗಿರುತ್ತಾರೆ.

## XXVIII.ಇತರೆ

ಐಸಿಐಸಿಐ ಬ್ಯಾಂಕಿನ ಕ್ರೆಡಿಟ್ ನಿಯಮಗಳ ಪ್ರಕಾರ ಉತ್ತಮ ಸ್ಥಿತಿಯಲ್ಲಿ ನಿರ್ವಹಿಸಲಾದ ಖಾತೆಗಳ ಕಾರ್ಡ್ ಸದಸ್ಯರಿಗೆ, ತನಗೆ ಸೂಕ್ತವೆನಿಸುವಂತಹ ಶುಲ್ಕಗಳಲ್ಲಿ ಹಾಗೂ ಬ್ಯಾಂಕಿನ ನಿಯಮಗಳು ಹಾಗೂ ನಿಬಂಧನೆಗಳ ಪ್ರಕಾರ ನಿರ್ದಿಷ್ಟ ಸೌಲಭ್ಯಗಳು, ಸದಸ್ಯತ್ವಗಳು ಹಾಗೂ ಸೇವೆಗಳನ್ನು ನೀಡುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ. ಐಸಿಐಸಿಐ ಬ್ಯಾಂಕ್ ಶುಲ್ಕವನ್ನು ಮನ್ನಾ ಮಾಡುವ ಅಥವಾ ಕಡಿತಗೊಳಿಸುವ ಹಕ್ಕನ್ನು ಕಾಯ್ದಿರಿಸಿದೆ ಹಾಗೂ ಯಾವುದೇ ಸಮಯದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೆ ಹಾಗೂ ಕಾರ್ಡ್ ಸದಸ್ಯರಿಗೆ ಹೊರೆಯಿಲ್ಲದೆ ಹಿಂತೆಗೆದುಕೊಳ್ಳುವ ಹಕ್ಕನ್ನು ಹೊಂದಿದೆ. ಈ ನಿಯಮಗಳು ಹಾಗೂ ನಿಬಂಧನೆಗಳ ಉಲ್ಲಂಘನೆಯ ಕಾರಣದಿಂದ ಯಾವುದೇ ಸದಸ್ಯತ್ವ ಮುಕ್ತಾಯವಾದಲ್ಲಿ, ಅಂತಹ ಸೌಲಭ್ಯಗಳು ಹಾಗೂ ಸೇವೆಗಳು ಸ್ವಯಂಚಾಲಿತವಾಗಿ ಮುಕ್ತಾಯವಾಗುತ್ತವೆ. ಯಾವುದೇ ಸೌಲಭ್ಯಗಳು, ಸದಸ್ಯತ್ವಗಳು ಅಥವಾ ಸೇವೆಗಳನ್ನು ನಿರ್ವಹಿಸುವ ಕಾರ್ಯಕ್ಷಮತೆಯಲ್ಲಿ ಐಸಿಐಸಿಐ ಬ್ಯಾಂಕ್ ಅಥವಾ ವ್ಯಾಪಾರಿ ಸಂಸ್ಥೆ ಅಥವಾ ಯಾವುದೇ ಇತರ ತೃತೀಯ ಪಕ್ಷದಿಂದ ಕಾರ್ಡ್ ಸದಸ್ಯರಿಗೆ ಯಾವುದೇ ರೀತಿಯಲ್ಲಿ ದೋಷ ಅಥವಾ ಉಲ್ಲಂಘನೆಯಾಗಿದ್ದಲ್ಲಿ, ಐಸಿಐಸಿಐ ಬ್ಯಾಂಕ್ ಯಾವುದೇ ರೀತಿಯಲ್ಲಿ ಹೊಣೆಗಾರನಾಗಿರುವುದಿಲ್ಲ. ಐಸಿಐಸಿಐ ಬ್ಯಾಂಕ್ / ಅಂಗಸಂಸ್ಥೆಗಳು ನಡೆಸುವ ಮಾರ್ಕೆಟಿಂಗ್ ಚಟುವಟಿಕೆಗಳಿಗೆ ಕಾರ್ಡ್ ಸದಸ್ಯನ ಅರ್ಜಿಯಲ್ಲಿರುವ ಹಾಗೂ ಸಮೀಕ್ಷೆಗಳ ಸಮಯದಲ್ಲಿ ನೀಡಿದ ಮಾಹಿತಿಯನ್ನು, ಗ್ರಾಹಕರ ವರದಿಗಳು ಸೇರಿದಂತೆ ಬಾಹ್ಯ ಮೂಲಗಳಿಂದ ಬಂದ ಮಾಹಿತಿಯನ್ನು ಬಳಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಹೊಂದಿದೆ. ಕಾರ್ಡ್ ಸದಸ್ಯರಿಗೆ ಮಾರ್ಕೆಟಿಂಗ್ ಕೊಡುಗೆಗಳನ್ನು ಅಭಿವೃದ್ಧಿಪಡಿಸಲು ಐಸಿಐಸಿಐ ಬ್ಯಾಂಕ್ ಜೊತೆಗೆ ಕೆಲಸ ಮಾಡುವ ಕಂಪನಿಗಳು ಬಳಸಬಹುದಾದ ಮೇಲಿಂಗ್ ಪಟ್ಟಿಗಳನ್ನು ತಯಾರಿಸಲು ಐಸಿಐಸಿಐ ಬ್ಯಾಂಕ್ ಈ ಮಾಹಿತಿಯನ್ನು ಬಳಸಬಹುದು. ಐಸಿಐಸಿಐ ಬ್ಯಾಂಕ್ ಕಾಲಕಾಲಕ್ಕೆ ಕಾರ್ಡ್‌ನಲ್ಲಿ ನೀಡಲಾಗುವ ನೀತಿಗಳು, ವೈಶಿಷ್ಟ್ಯಗಳು ಹಾಗೂ ಪ್ರಯೋಜನಗಳನ್ನು ಪರಿಷ್ಕರಿಸುವ ಹಾಗೂ ಅಂತಹ ಪರಿಷ್ಕರಣೆ / ಬದಲಾವಣೆಗಳನ್ನು ಸೂಕ್ತವೆಂದು ಪರಿಗಣಿಸಿದ ಯಾವುದೇ ರೀತಿಯಲ್ಲಿ ಕಾರ್ಡ್ ಸದಸ್ಯರಿಗೆ ಸೂಚಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.ಪರಿಷ್ಕರಣೆ/ಬದಲಾವಣೆಗಳನ್ನು ಮಾಡಿದ ದಿನಾಂಕದ ಮೊದಲು ರದ್ದತಿಗಾಗಿ ಐಸಿಐಸಿಐ ಬ್ಯಾಂಕ್‌ಗೆ ಹಿಂತಿರುಗಿಸದ ಹೊರತು ಕಾರ್ಡ್ ಸದಸಸ್ಯರು ಅಂತಹ ಪರಿಷ್ಕರಣೆ ಬದಲಾವಣೆಗಳಿಗೆ ಬದ್ಧರಾಗಿರುತ್ತಾರೆ.

ಕಾರ್ಡ್ ಸದಸ್ಯರ ಕಾರ್ಡ್ ಖಾತೆಯಲ್ಲಿ ದಾಖಲಾದ ಎಲ್ಲಾ ವಹಿವಾಟುಗಳ ವಿವರಗಳನ್ನು ಕ್ರೆಡಿಟ್ ರೆಫರೆನ್ಸ್ ಏಜೆನ್ಸಿಗಳು, ಸಾಲದಾತರು ಹಾಗೂ / ಅಥವಾ ಇತರ ಏಜೆನ್ಸಿಗಳೊಂದಿಗೆ ಕಾರ್ಡ್ ಸದಸ್ಯರು ಹಾಗೂ / ಅಥವಾ ಅವರ ಕುಟುಂಬ ಸದಸ್ಯರ ಹೆಚ್ಚಿನ ಅರ್ಜಿಗಳನ್ನು ಮೌಲ್ಯಮಾಪನ ಮಾಡುವ ಉದ್ದೇಶದಿಂದ ಹಾಗೂ ವಂಚನೆ ತಡೆಗಟ್ಟುವಿಕೆಗಾಗಿ ಹಂಚಿಕೊಳ್ಳಬಹುದು. ಹೊಂದಿಸುವ ಸಾಮಾನ್ಯ ಹಕ್ಕಿನ ಜೊತೆಗೆ ಅಥವಾ ಕಾನೂನಿನ ಮೂಲಕ ಅಥವಾ ಇತರ ಯಾವುದೇ ಒಪ್ಪಂದದ ಅಡಿಯಲ್ಲಿ, ಐಸಿಐಸಿಐ ಬ್ಯಾಂಕ್, ಸೂಚನೆ ಇಲ್ಲದೆ, ಕಾರ್ಡ್

ಖಾತೆಯಲ್ಲಿನ ಪ್ರಸ್ತುತ ಬಾಕಿಯನ್ನು ಕಾರ್ಡ್ ಸದಸ್ಯರು ನಿರ್ವಹಿಸುವ ಯಾವುದೇ ಇತರ ಖಾತೆ (ಗಳ) ಜೊತೆ ಸಂಯೋಜಿಸಬಹುದು ಅಥವಾ ಕ್ರೋಢೀರಿಸಬಹುದು. ಐಸಿಐಸಿಐ ಬ್ಯಾಂಕ್ ಹಾಗೂ ಅದರ ಗ್ರೂಪ್ ಕಂಪನಿಗಳೊಂದಿಗೆ, ಹಾಗೂ ಕಾರ್ಡ್ ಕಾರ್ಡ್ ಸದಸ್ಯರ ಐಸಿಐಸಿಐ ಬ್ಯಾಂಕ್‌ಗೆ ಅವರ ಕಾರ್ಡ್ ಖಾತೆಯ ಅಡಿಯಲ್ಲಿ ಕಾರ್ಡ್ ಸದಸ್ಯರ ಸಾಲದ ಹೊಣೆಗಾರಿಕೆಯ ಸಂಪೂರ್ತಿಗಾಗಿ ಅಥವಾ ಅಂತಹ ಇತರ ಖಾತೆ (ಗಳ) ಬಾಕಿ ಕ್ರೆಡಿಟ್‌ಗೆ ಹಣವನ್ನು ವರ್ಗಾಯಿಸಬಹುದು. ಕಾರ್ಡ್ ಸದಸ್ಯರು  ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದ ನಮೂನೆಯಲ್ಲಿ ತಿಳಿಸಿದಂತೆ  ತನ್ನ ಹೆಸರು, ವಿಳಾಸ, ಸಂಪರ್ಕ ಸಂಖ್ಯೆ ಹಾಗೂ ಸಂವಹನಕ್ಕಾಗಿ ಇಮೇಲ್ ಐಡಿ ಗಳಲ್ಲಿನ ಯಾವುದೇ ಬದಲಾವಣೆಯನ್ನು ಐಸಿಐಸಿಐ ಬ್ಯಾಂಕ್‌ಗೆ ತಿಳಿಸಬೇಕು. ಕಾರ್ಡ್ ಸದಸ್ಯರ ವಿಳಾಸದಲ್ಲಿನ ಬದಲಾವಣೆಗಳು ಐಸಿಐಸಿಐ ಬ್ಯಾಂಕ್ ಗಮನಕ್ಕೆ ಬಂದರೆ ಅದನ್ನು ತನ್ನ ದಾಖಲೆಗಳಲ್ಲಿ ಬದಲಾಯಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಹೊಂದಿದೆ. ಐಸಿಐಸಿಐ ಬ್ಯಾಂಕಿಗೆ ಸಂವಹನಕ್ಕಾಗಿ ಸರಿಯಾದ ವಿಳಾಸವನ್ನು ತಿಳಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಕೇವಲ ಕಾರ್ಡ್ ಸದಸ್ಯರದ್ದಾಗಿರುತ್ತದೆ ಹಾಗೂ ತಪ್ಪಾದ ವಿಳಾಸದ ಕಾರಣದಿಂದ ಕಾರ್ಡ್ ಸದಸ್ಯರಿಗೆ ಯಾವುದೇ ನಷ್ಟ ಅಥವಾ ತೊಂದರೆಯಾದಲ್ಲಿ, ಐಸಿಐಸಿಐ ಬ್ಯಾಂಕ್ ಆ ಎಲ್ಲಾ ಹೊಣೆಗಾರಿಕೆಯನ್ನು ನಿರಾಕರಿಸುತ್ತದೆ.

ಐಸಿಐಸಿಐ ಬ್ಯಾಂಕ್ ಅಥವಾ ಅದರ ಅಂಗಸಂಸ್ಥೆಗಳು ಕಾರ್ಡ್ ಸದಸ್ಯರಿಂದ ಪಡೆದ ಸೌಲಭ್ಯಗಳು / ಸೇವೆಗಳಿಗಾಗಿ ಕಾಲಕಾಲಕ್ಕೆ ಸೂಚಿಸಬಹುದಾದಂತಹ ಎಲ್ಲಾ ನಿಯಮಗಳು ಹಾಗೂ ನಿಬಂಧನೆಗಳನ್ನು  ಅವರು ಪಾಲಿಸಬೇಕು. ಇಂಟರ್‌ನೆಟ್, ವರ್ಲ್ಡ್ ವೈಡ್ ವೆಬ್, ಎಲೆಕ್ಟ್ರಾನಿಕ್ ಡೇಟಾ ಇಂಟರ್ಚೇಂಜ್, ಕಾಲ್ ಸೆಂಟರ್‌ಗಳು, ಟೆಲಿ ಸರ್ವಿಸ್ ಕಾರ್ಯಾಚರಣೆಗಳು (ಧ್ವನಿ, ವಿಡಿಯೋ, ಡೇಟಾ ಅಥವಾ ಅದರ ಸಂಯೋಜನೆ) ಸೇರಿದಂತೆ  ಎಲೆಕ್ಟ್ರಾನಿಕ್, ಕಂಪ್ಯೂಟರ್, ಸ್ವಯಂಚಾಲಿತ ಯಂತ್ರಗಳ ನೆಟ್‌ವರ್ಕ್ ಅಥವಾ ಐಸಿಐಸಿಐ ಬ್ಯಾಂಕ್ ಅಥವಾ ಅದರ ಅಂಗಸಂಸ್ಥೆಗಳ ಪರವಾಗಿ ಸ್ಥಾಪಿಸಲಾದ ದೂರಸಂಪರ್ಕದ ಇತರ ವಿಧಾನಗಳ ಮೂಲಕ ನಡೆಸಲಾದ ರಿಮೋಟ್ ವಹಿವಾಟುಗಳನ್ನು ಐಸಿಐಸಿಐ ಬ್ಯಾಂಕ್ ಅಥವಾ ಅದರ ಅಂಗಸಂಸ್ಥೆಗಳು ಕಾಲಕಾಲಕ್ಕೆ ಸೂಚಿಸಬಹುದಾದ ನಿಯಮಗಳು ಹಾಗೂ ನಿಬಂಧನೆಗಳ ಅನುಸಾರವಾಗಿ ಮಾಡಿದಾಗ ಅಂತಹ ಸೌಲಭ್ಯಗಳು / ಸೇವೆಗಳು ಕಾನೂನುಬದ್ಧ ಹಾಗೂ ಮಾನ್ಯ ವಹಿವಾಟುಗಳಾಗುತ್ತವೆ .

(ಸಿ) ಕ್ರಾಸ್ ಕರೆನ್ಸಿ ಸೆಟ್-ಆಫ್ ಸಂದರ್ಭದಲ್ಲಿ ,ಐಸಿಐಸಿಐ ಬ್ಯಾಂಕ್ ಹಾಗೂ / ಅಥವಾ ಅದರ ಸಮೂಹ ಕಂಪನಿಗಳ ವಿವೇಚನೆಯಿಂದ ನಿರ್ಧರಿಸಿದ ದರದಲ್ಲಿ ಒಂದು ಕರೆನ್ಸಿಯಲ್ಲಿನ ಬಾಧ್ಯತೆಯನ್ನು ಇನ್ನೊಂದು ಕರೆನ್ಸಿಗೆ ಪರಿವರ್ತಿಸಲು

## XXX. ವಿವಾದಗಳ ಇತ್ಯರ್ಥ

1. ಯಾಂತ್ರೀಕೃತ ಇತ್ಯರ್ಥ ಪರಿಹಾರ: ಯಾಂತ್ರೀಕೃತ ವಿಧಾನ ಅಥವಾ ರೀತಿಯಲ್ಲಿ ಸಂಪೂರ್ಣವಾಗಿ ಅಥವಾ ಭಾಗಶಃ ಮಾನ್ಯಮಾಡಲ್ಪಟ್ಟಿದೆಯೆ(ಅಥವಾ ಇಲ್ಲವೆ) ಎಂದು ತೀರ್ಮಾನಿಸುವ ಸಾಮರ್ಥ್ಯವನ್ನು

ಹೊಂದಿರುವ ವಾಸ್ತವ ವಿಷಯಗಳನ್ನು ಒಳಗೊಂಡ ಕಾರ್ಡ್‌ದಾರರ ದೂರುಗಳು, ಕ್ಲೇಮುಗಳು,ಇತ್ಯರ್ಥಗಳು ಅಥವಾ ಕುಂದುಕೊರತೆಗಳನ್ನು, ಐಸಿಐಸಿಐ ಬ್ಯಾಂಕ್‌ನ ತತ್ಸಂಬಂಧಿತ ದಾಖಲೆಗಳನ್ನು ಪರಿಶೀಲಿಸುವ ಮೂಲಕ, ನಿರ್ಧರಿಸಲಾಗುತ್ತದೆ ಹಾಗೂ ಆ ರೀತಿ ನಿರ್ಧರಿಸಲಾಗಿರುವ ಅಂತಹ ಕುಂದುಕೊರತೆಯ/ಗಳ(ಸಂಪೂರ್ಣವಾಗಿ ಅಥವಾ ಭಾಗಶಃ) ಸ್ವೀಕೃತಿ ಅಥವಾ ನಿರಾಕರಣೆಯ ಕುರಿತು ಬಾಧಿತ ಕಾರ್ಡ್‌ದಾರರಿಗೆ ಸೂಚಿಸಲಾಗುತ್ತದೆ. ಕುಂದುಕೊರತೆಯನ್ನು/ಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಮಾನ್ಯಮಾಡಲಾಗಿದೆ ಎಂದು ಸ್ವೀಕರಿಸಿದಲ್ಲಿ, ಐಸಿಐಸಿಐ ಬ್ಯಾಂಕ್ ಬಾಧಿತ ಕಾರ್ಡ್‌ದಾರರಿಗೆ ಸೂಕ್ತವಾದ ಪರಿಹಾರವನ್ನು ಒದಗಿಸುತ್ತದೆ.

2. ಆಂತರಿಕ ಕುಂದುಕೊರತೆ ಪರಿಹಾರ ಪ್ರಕ್ರಿಯೆ: ಮೇಲೆ ತಿಳಿಸಿದ ಯಾಂತ್ರೀಕೃತ ವಿಧಾನದಲ್ಲಿ ಕುಂದುಕೊರತೆ/ಗಳು ಇತ್ಯರ್ಥವಾಗದಿದ್ದಲ್ಲಿ, ಅಥವಾ ನಿರ್ದಿಷ್ಟಗೊಳಿಸಲಾದ ಯಾಂತ್ರೀಕೃತ ವಿಧಾನದ ಮೂಲಕ ಒದಗಿಸಲಾದ ಪರಿಹಾರದ ಅಥವಾ ಯಾಂತ್ರೀಕೃತ ವಿಧಾನವು ಪರಿಣಾಮ ಬೀರುವ ಮುನ್ನವೇ ಅದರ ವಿಷಯದಲ್ಲಿ ಕಾರ್ಡ್‌ದಾರರು ಅತೃಪ್ತರಾಗಿದ್ದಲ್ಲಿ ಹಾಗೂ www.icicibank.com ದಲ್ಲಿ ಲಭ್ಯವಿರುವ ಗ್ರಾಹಕ ಕುಂದುಕೊರತೆ ಪರಿಹಾರ ನೀತಿಗೆ ಅನುಗುಣವಾಗಿ ಪರಿಹಾರಕ್ಕೆ ಯೋಗ್ಯತೆ ಗಳಿಸುವ ಸಾಮರ್ಥ್ಯ ಪಡೆದಿದ್ದಲ್ಲಿ, ಅದನ್ನು ಕಾಲ ಕಾಲಕ್ಕೆ ಮಾರ್ಪಡಿಸಲಾಗುವ ಅಂತಹ ನೀತಿಗೆ ತಕ್ಕಂತೆ ಪರಿಹಾರಕ್ಕಾಗಿ ಕಳುಹಿಸಬಹುದು.

3. ಆನ್‌ಲೈನ್ ವಿವಾದ ಪರಿಹಾರ: ಈ ನಿಯಮಗಳ ಅಡಿಯಲ್ಲಿ ನಿರ್ಮಾಣ, ಅರ್ಥ, ಅಸ್ತಿತ್ವ ಮಾನ್ಯತೆ, ಉಲ್ಲಂಘನೆ, ಹಿಂತೆಗೆದುಕೊಳ್ಳುವಿಕೆ, ಪುನರ್ವಶ ಅಥವಾ ರದ್ದತಿಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಯನ್ನು ಒಳಗೊಂಡು ಈ ನಿಯಮಗಳು ಹಾಗೂ ನಿಬಂಧನೆಗಳ ಅಡಿಯಲ್ಲಿ ಅವುಗಳಿಗೆ ಸಂಬಂಧಿ ಸಿದ ಅಥವಾ ಅದರಿಂದ ಏರ್ಪಡುವ ಕುಂದುಕೊರತೆಗಳನ್ನು(ಕೆಳಗೆ ಸೂಚಿಸಲಾಗಿರುವ ಹೊರತುಪಡಿಸುವಿಕೆಗಳಿಗೆ ಒಳಪಟ್ಟು), ಬ್ಯಾಂಕ್ ಆರಂಭಿಸುವ ಯಾವುದೇ ಕ್ಲೇಮು ಅಥವಾ ಕ್ರಿಯೆಗಳು(ಇವೆರಡನ್ನೂ ಒಟ್ಟಿಗೆ ''ಕ್ಲೇಮುಗಳು'' ಎಂದು ಪರಿಗಣಿಸಲಾಗುತ್ತದೆ) ಹಾಗೂ ಯಾವುದೇ ಇತರ ಕ್ಲೇಮು ಅಥವಾ ವಿವಾದವನ್ನು (ಒಪ್ಪಂದ, ಅಪಚಾರ ಅಥವಾ ಬೇರೆ ರೀತಿಯಲ್ಲಿ)ಮಧ್ಯಸ್ಥಿಕೆ ಅಥವಾ ಸಂಧಾನ ಪ್ರಕ್ರಿಯೆಯ ಮೂಲಕ ಪರಿಹಾರಕ್ಕೆ ಸೂಚಿಸಬಹುದು ಹಾಗೂ ಈ ಪ್ರಕ್ರಿಯೆಯು, ಸ್ವತಂತ್ರ ಆನ್‌ಲೈನ್ ವಿವಾದ ಪರಿಹಾರ ಸಂಸ್ಥೆಯಾದ ಸಮ(Sama)ದ ಆನ್ವಯಿಕ ಮಧ್ಯಸ್ಥಿಕೆ ಹಾಗೂ ಸಂಧಾನಗಳ ನಿಯಮಗಳಿಗೆ ಅನುಗುಣವಾಗಿ ನಡೆಸಲಾಗುತ್ತದೆ.

ಮಧ್ಯಸ್ಥಿಕೆ ಅಥವಾ ಒಪ್ಪಂದದ ಪ್ರಕ್ರಿಯೆಯು, ಸಮ(Sama) ನಿಯಮಗಳಿಲ್ಲಿ ನಿಗದಿಗೊಳಿಸಲಾಗಿರುವ ಕಾಲಾವಧಿಯಲ್ಲಿ ಅಥವಾ <21 > ದಿನಗಳ ಒಳಗೆ(ಯಾವುದು ಮೊದಲು ಬರುತ್ತದೋ ಅದು) ಕುಂದುಕೊರತೆ ಅಥವಾ ಕ್ಲೇಮನ್ನು ಪರಿಹರಿಸದಿದ್ದರೆ, ಸಮ(Sama)ದ ಆನ್ವಯಿಕ ನಿಯಮಗಳ ವಿಷಯದಲ್ಲಿ, ಮಧ್ಯಸ್ಥಿಕೆಯ ಮೂಲಕ ಹಾಗೂ ಮಧ್ಯಸ್ಥಿಕೆ ಹಾಗೂ ಸಂಧಾನ ಕಾಯಿದೆ 1996ಗೆ ಅನುಗುಣವಾಗಿ, ಪರಿಹಾರ ನೀಡಲು ಕುಂದುಕೊರತೆ ಅಥವಾ ಕ್ಲೇಮನ್ನು ಮುಂದಕ್ಕೆ ತೆಗೆದುಕೊಂಡು ಹೋಗಲಾಗುತ್ತದೆ. ಅಂತಹ ಮಧ್ಯಸ್ಥಿಕೆಯನ್ನು ಸಮ(Sama), ತನ್ನ ವೆಬ್‌ಸೈಟ್/ವೇದಿಕೆ www.sama.live ಅಥವಾ ಮೊಬೆಲ್ ಅಪ್ಲಿಕೇಶನ್ ಮೂಲಕ ಕಾರ್ಯಾಚರಣೆ ನಡೆಸಿ(ಸಾಕ್ಷಿಯ ದಾಖಲೆ ಹಾಗೂ ದಾಖಲೆಗಳ ನೀಡಿಕೆ ಒಳಗೊಂಡಂತೆ), ತೀರ್ಮಾನಿಸಿ ನೆರವೇರಿಸುತ್ತದೆ. ಮಧ್ಯಸ್ಥಿಕೆ ನ್ಯಾಯಮಂಡಳಿಯು, ಸಮ(Sama)ದ ಆನ್ವಯಿಕ ನಿಯಮಗಳಿಗೆ ಅನುಗುಣವಾಗಿ ನೇಮಕ ಮಾಡಲಾಗಿರುವ ಒಬ್ಬ ಸ್ವತಂತ್ರ ಏಕಾಂಗಿ ಮಧ್ಯಸ್ಥಿಕೆದಾರರನ್ನು ಒಳಗೊಂಡಿರುತ್ತದೆ. ಮಧ್ಯಸ್ಥಿಕೆ ಕಾರ್ಯಕಲಾಪಗಳ ಪೀಠವು ಮುಂಬೈ ಆಗಿರುತ್ತದೆ. . ಮಧ್ಯಸ್ಥಿಕೆಯ ಕಾರ್ಯವಿಧಾನದ ನಿಯಮವು, ಸಮ(Sama)ದ ನಿಯಮಗಳಾಗಿರುತ್ತವೆ.

4. ಮೇಲೆ ತಿಳಿಸಿದ ,ಆನ್‌ಲೈನ್ ವಿವಾದ ಪರಿಹಾರ ಪ್ರಕ್ರಿಯೆಗಳು ಈ ಕೆಳಗಿನವುಗಳಿಗೆ ಅನ್ವಯವಾಗುವುದಿಲ್ಲ;

ಅ.) ಯಾವುದೇ ಶಾಸನಬದ್ಧ , ನಿಯಂತ್ರಕ ಅಥವಾ ಸರ್ಕಾರೀ ಅಧಿಕಾರಿಗಳ ಮೂಲಕ ಸ್ವೀಕರಿಸಲಾದ ಕುಂದುಕೊರತೆ/ಗಳು. ಅಂತಹ ಶಾಸನಬದ್ಧ, ನಿಯಂತ್ರಕ ಅಥವಾ ಸರ್ಕಾರೀ ಅಧಿಕಾರಿಗಳ ಮೂಲಕ ಸ್ವೀಕರಿಸಲಾದ ಕುಂದುಕೊರತೆ/ಗಳನ್ನು ಐಸಿಐಸಿಐ ಬ್ಯಾಂಕ್, ಅಂತಹ ಪ್ರಾಧಿಕಾರಗಳು ನಿರೀಕ್ಷಿಸುವ ವಿಧಾನ ಹಾಗೂ ರೀತಿಯಲ್ಲೇ ಪರಿಹರಿಸಿ ಪ್ರತಿಕ್ರಿಯಿಸಬೇಕಾಗುತ್ತದೆ.

ಆ.) ಮೂರನೇ ವ್ಯಕ್ತಿ/ಪಕ್ಷದ ಅವಲಂಬನೆಗಳಿರಬಹುದಾದ ಕುಂದುಕೊರತೆ/ಗಳು- ಮೂರನೆ ವ್ಯಕ್ತಿ/ಪಕ್ಷಗಳಿಂದ ಮಾಹಿತಿ ಅಥವಾ ಸ್ಪಷ್ಟನೆಗಳ ಸ್ವೀಕೃತಿಯ ನಂತರವಷ್ಟೇ ಐಸಿಐಸಿಐ ಬ್ಯಾಂಕ್ ಕುಂದುಕೊರತೆ/ಗಳನ್ನು ಪರಿಶೀಲಿಸಿ, ವಿಶ್ಲೇಷಿಸಿ ಪರಿಹಾರ ಒದಗಿಸುವುದು ಸಾಧ್ಯವಾಗುತ್ತದೆ.

ಇ.) ಮೇಲೆ ತಿಳಿಸಲಾದ ಯಾಂತ್ರೀಕೃತ ವಿವಾದ ಪರಿಹಾರದಡಿ ಪರಿಹರಿಸಲು ಬಾಕಿ ಇರುವ ಅಥವಾ ಬ್ಯಾಂಕ್‌ನ ಗ್ರಾಹಕ ಕುಂದುಕೊರತೆ ಪರಿಹಾರ ನೀತಿಯ ಪ್ರಕಾರ ಪರಿಹರಿಸಲು ಬಾಕಿ ಇರುವ ಯಾವುದೇ ಕುಂದುಕೊರತೆ/ಗಳು.

## XXXI. ಈ ನಿಯಮಗಳು ಹಾಗೂ ನಿಬಂಧನೆಗಳನ್ನು ಬದಲಾಯಿಸುವುದು

ಪ್ರಸ್ತುತದ ಶಿಲ್ಕುಗಳು, ಬಡ್ಡಿದರಗಳು, ಅಥವಾ ದರಗಳು ಹಾಗೂ ಲೆಕ್ಕಾಚಾರದ ವಿಧಾನಗಳ ಮೇಲೆ ಪ್ರಭಾವ ಬೀರುವಂತಹ ಬದಲಾವಣೆಗಳಿಗೆ ಸೀಮಿತವಾಗಿರದಿರುವುನ್ನೂ ಒಳಗೊಂಡಂತೆ, ಯಾವುದೇ ಸಮಯದಲ್ಲಾದರೂ, ಕಾರ್ಡ್ ಮೇಲೆ ಒದಗಿಸುವ ಯಾವುದೇ ನಿಯಮಗಳು ಹಾಗೂ ನಿಬಂಧನೆಗಳು, ವೈಶಿಷ್ಟ್ಯತೆಗಳು ಹಾಗೂ ಪ್ರಯೋಜನಗಳನ್ನು ತಿದ್ದುಪಡಿ ಮಾಡುವ ಅಥವಾ ಪೂರಕಗೊಳಿಸುವ ಸಂಪೂರ್ಣ ಪರಿಜ್ಞಾನವನ್ನು ಐಸಿಐಸಿಐ ಬ್ಯಾಂಕ್ ಹೊಂದಿರುತ್ತದೆ. ಕಾರ್ಡ್ ಅಡಿ ಇರುವ ಸಂಪೂರ್ಣ ಮೊತ್ತವನ್ನು ಪೂರ್ಣವಾಗಿ ಮರುಪಾವತಿ ಮಾಡುವ ತನಕ ಕಾರ್ಡ್ ಸದಸ್ಯರು, ಈ ಪರಿಷ್ಕೃತ ನಿಯಮಗಳು ಹಾಗೂ ನಿಬಂಧನೆಗಳಡಿ ವಿಧಿಸಲಾದ ಎಲ್ಲಾ ಶುಲ್ಕಗಳು ಹಾಗೂ ಇತರ ಎಲ್ಲಾ ಋಣಗಳನ್ನು ಭರಿಸಬೇಕಾಗುತ್ತದೆ. ಇನ್ಫಿನಿಟಿ ಮೂಲಕ ಅಥವಾ ಐಸಿಐಸಿಐ ಬ್ಯಾಂಕ್ ತೀರ್ಮಾನಿಸುವ ಯಾವುದೇ ಇತರ ವಿಧಾನದಲ್ಲಾದರೂ, ಐಸಿಐಸಿಐ ಬ್ಯಾಂಕ್ ನಿಯಮಗಳ ತಿದ್ದುಪಡಿಯ ಸೂಚನೆಯನ್ನು ನೀಡುತ್ತದೆ. ಇನ್ಫಿನಿಟಿಯಲ್ಲಿ ಹಾಕಲಾಗುವ ತಿದ್ದುಪಡಿಗಳೂ ಒಳಗೊಂಡಂತೆ, ಈ ನಿಯಮಗಳು ಹಾಗೂ ನಿಬಂಧನೆಗಳನ್ನು ನಿಯಮಿತವಾಗಿ ಪರಿಶೀಲಿಸುವ ಜವಾಬ್ದಾರಿಯು ಕಾರ್ಡ್ ಸದಸ್ಯರದ್ದೇ ಆಗಿರುತ್ತದೆ ಹಾಗೂ ಕಾರ್ಡ್‌ನ ಬಳಕೆಯನ್ನು ಮುಂದುವರಿಸಿದಲ್ಲಿ ತಿದ್ದುಪಡಿಮಾಡಲಾದ ನಿಯಮಗಳು ಹಾಗೂ ನಿಬಂಧನೆಗಳನ್ನು ಅಂಗೀಕರಿಸಲಾಗಿದೆ ಎಂದೇ ಪರಿಗಣಿಸಲಾಗುತ್ತದೆ. ನಿಯಮಗಳು ಹಾಗೂ ನಿಬಂಧನೆಗಳಲ್ಲಿ ಆಗುವ ಯಾವುದೇ ಬದಲಾವಣೆಗಳನ್ನು, ಅವುಗಳ ಅನುಷ್ಠಾನದ ದಿನಾಂಕದ ಒಂದು ತಿಂಗಳು ಮುಂಚಿತವಾಗಿಯೇ ಕಾರ್ಡ್ ಸದಸ್ಯರಿಗೆ ಮೇಲೆ ತಿಳಿಸಿರುವ ವಿಧಾನದಲ್ಲಿ ತಿಳಿಯಪಡಿಸಲಾಗುತ್ತದೆ.

## XXXII. ಸೂಚನೆಗಳು(ಸೂಚನಾಪತ್ರ)

ಕಾರ್ಡ್ ಸದಸ್ಯರಿಂದ ಬರಬೇಕಾಗಿರುವ ಎಲ್ಲಾ ಬಾಕಿ ಮೊತ್ತಗಳೂ ಒಳಗೊಂಡಂತೆ, ಈ ನಿಯಮಗಳು ಹಾಗೂ ನಿಬಂಧನೆಗಳಡಿ ಬರುವ ಅಥವಾ ಅದಕ್ಕೆ ಸಂಬಂಧಿಸಿದ ಎಲ್ಲಾ ಸೂಚನೆಗಳು ಅಥವಾ ಇತರ ಸಂವಹನಗಳನ್ನು, ಐಸಿಐಸಿಐ ಬ್ಯಾಂಕ್ ಲಿಮಿಟೆಡ್, ಐಸಿಐಸಿಐ ಬ್ಯಾಂಕ್ ಫೋನ್ ಬ್ಯಾಂಕಿಂಗ್ ಸೆಂಟರ್, ಐಸಿಐಸಿಐ ಬ್ಯಾಂಕ್ ಟವರ್, 7ನೆ ಮಹಡಿ, ಸರ್ವೇ ನಂ. 115/27, ಪ್ಲಾಟ್ ನಂ.12, ನಾನಕ್‌ರಾಂಗುಡ, ಸೆರಿಲಿಂಗಂಪಲ್ಲಿ

ಹೈದರಾಬಾದ್-500032, ಭಾರತ, ಈ ವಿಳಾಸಕ್ಕೆ ಲಿಖಿತ ರೂಪದಲ್ಲಿ ನೀಡಲಾಗುತ್ತದೆ ಹಾಗೂ ನಿರ್ದಿಷ್ಟವಾಗಿ ತಿಳಿಸಿದ್ದರೆ ಮಾತ್ರ ಪತ್ರದ ಮೂಲಕ ಅಥವಾ ನಕಲುಪ್ರತಿಯ ಮೂಲಕ ನೀಡಲಾಗುತ್ತದೆ. ಇಂತಹ ಯಾವುದೇ ಸೂಚನಾಪತ್ರ ಅಥವಾ ಇತರ ಸಂವಹನವು ಕೆಳಕಂಡ ಪರಿಸ್ಥಿತಿಗಳಲ್ಲಿ ಕಾರ್ಯರೂಪಕ್ಕೆ ಬರುತ್ತದೆ:

(i) ವೈಯಕ್ತಿಕವಾಗಿ ಅಥವಾ ಅಂಚೆಯ ಮೂಲಕ ರವಾನಿಸಿದ ಪತ್ರದ ಮೂಲಕ ಕಳುಹಿಸಿದ್ದರೆ, ಪತ್ರವನ್ನು ಹಿಂಪಡೆದುಕೊಳ್ಳುವುದು ಕಳುಹಿಸಿದವರ ನಿಯಂತ್ರಣದಾಚೆ ಇದ್ದರೆ; (ii) ಹಾಗೂ ನಕಲುಪ್ರತಿಯ ಮೂಲಕ ಕಳುಹಿಸಿದ್ದರೆ(ಸರಿಯಾದ ನಕಲುಪ್ರತಿ ಸಂಖ್ಯೆಗೆ ಖಾತರಿಯನ್ನು ಸ್ವೀಕರಿಸಿದ ನಂತರ). ಆದಾಗ್ಯೂ, ಐಸಿಐಸಿಐ ಬ್ಯಾಂಕ್‌ಗೆ ಕಳುಹಿಸಲಾದ ಯಾವುದೇ ಸೂಚನಾಪತ್ರ ಅಥವಾ ಸಂವಹನವನ್ನು ಐಸಿಐಸಿಐ ಬ್ಯಾಂಕ್ ವಾಸ್ತವವಾಗಿ ಸ್ವೀಕರಿಸಿ ದೃಢೀಕರಿಸಿಲ್ಲದಿದ್ದರೆ ಅದು ಕಾರ್ಯರೂಪಗೊಳ್ಳುವುದಿಲ್ಲ. ಸೂಚನಾಪತ್ರ ಅಥವಾ ಸಂವಹನಗಳನ್ನು ಇವುಗಳಿಗೆ ಕಳುಹಿಸಬಹುದಾಗಿದೆ: (i)ಐಸಿಐಸಿಐ ಬ್ಯಾಂಕ್‌ನ ದಾಖಲೆಗಳಲ್ಲಿ ದಾಖಲಿಸಲಾಗಿರುವ ಹಾಗೂ ಸೂಚನಾಪತ್ರಗಳು/ಸಂವಹನಗಳನ್ನು ಕಳುಹಿಸಬಹುದಾದ(ಅರ್ಜಿ ನಮೂನೆಯಲ್ಲಿ ನಿರ್ದಿಷ್ಟಗೊಳಿಸಲಾಗಿರುವಂತೆ) ಕಾರ್ಡ್ ಸದಸ್ಯರ ವಿಳಾಸ ಅಥವಾ ನಕಲುಪ್ರತಿ ಸಂಖ್ಯೆ, ಅಥವಾ ಕಾರ್ಡ್ ಸದಸ್ಯರು ಹಾಗೂ ಐಸಿಐಸಿಐ ಬ್ಯಾಂಕ್ ಪರಸ್ಪರ ಲಿಖಿತ ಸಂವಹನದ ಮೂಲಕ ಸೂಚಿಸಿರಬಹುದಾದ ಯಾವುದೇ ಇತರ ವಿಳಾಸ ಅಥವಾ ನಕಲುಪ್ರತಿ ಸಂಖ್ಯೆ. ಕಾರ್ಡ್ ಸದಸ್ಯರು, ತನ್ನ ಸಂಪರ್ಕ ವಿಳಾಸ ಅಥವಾ ವಿವರಗಳಲ್ಲಿ ಏರ್ಪಟ್ಟ ಯಾವುದೇ ಬದಲಾವಣೆಗಳನ್ನು ಐಸಿಐಸಿಐ ಬ್ಯಾಂಕ್‌ಗೆ ಸೂಚಿಸಲು ವಿಫಲವಾದಲ್ಲಿ, ಕಾರ್ಡ್ ಸದಸ್ಯರ ಅರ್ಜಿನಮೂನೆಯಲ್ಲಿರುವ ಅಥವಾ ಅವರು ನೀಡಿದ ಕೊನೆಯ ವಿಳಾಸಕ್ಕೆ ಸೂಚನಾಪತ್ರ/ಸಂವಹನ ಸರಿಯೆಂದು ಪರಿಗಣಿಸಿ, ಅಂತಹ ಸೂಚನೆಯು ''ನೀಡಲಾಗಿಲ್ಲ'' ಎಂದು ಐಸಿಐಸಿಐ ಬ್ಯಾಂಕ್‌ಗೆ ಹಿಂದಿರುಗಿ ಬಂದಿದ್ದರೂ, ಆ ವಿಳಾಸಕ್ಕೇ ಕಳುಹಿಸಲಾಗುತ್ತದೆ. ಕಾರ್ಡ್ ಸದಸ್ಯರು ವಾಸಿಸುವ ಅಥವಾ ಕೆಲಸ ಮಾಡುವ ಪ್ರದೇಶದಲ್ಲಿ ಲಭ್ಯವಿರುವ ದಿನಪತ್ರಿಕೆಯಲ್ಲಿ ಪ್ರಕಟವಾದ ಸೂಚನೆಯನ್ನೇ, ಪ್ರಕಟಣೆ ನೀಡಿದ ದಿನಾಂಕದಿಂದ, ಆ ಕಾರ್ಡ್ ಸದಸ್ಯರಿಗೆ ನೀಡಿದ ಸೂಚನೆ ಎಂದು ಪರಿಗಣಿಸಲಾಗುತ್ತದೆ; ಆದಾಗ್ಯೂ, ಐಸಿಐಸಿಐ ಬ್ಯಾಂಕ್ ಅಂತಹ ಸೂಚನೆಯನ್ನು ದೃಢೀಕರಿಸಿಲ್ಲದಿದ್ದರೆ, ಐಸಿಐಸಿಐ ಬ್ಯಾಂಕ್ ವಿರುದ್ಧ ಆ ಸೂಚನೆ ಪ್ರಭಾವ ಬೀರುವುದಿಲ್ಲ.

## XXXIII.. ಜಾಗತಿಕ ಭಾರತೀಯ ಕ್ರೆಡಿಟ್ ಕಾರ್ಡ್ ನಿಯಮಗಳು

ಈ ನಿಯಮಗಳು (''ನಿಯಮಗಳು'') ಜಾಗತಿಕ ಭಾರತೀಯ ಕ್ರೆಡಿಟ್ ಕಾರ್ಡ್ ಬಳಸುತ್ತಿರುವ ಕಾರ್ಡ್ ಸದಸ್ಯರಿಗೆ ಮಾತ್ರ ಅನ್ವಯವಾಗುತ್ತದೆ. ಈ ನಿಯಮಗಳು ಹಾಗೂ ನಿಬಂಧನೆಗಳು, ಕ್ರೆಡಿಟ್ ಕಾರ್ಡುಗಳ

(''ನಿಯಮಗಳು ಹಾಗೂ ನಿಬಂಧನೆಗಳು'') ಬಳಕೆಗಾಗಿ ಇರುವ ಇತರ ನಿಯಮಗಳು ಹಾಗೂ ನಿಬಂಧನೆಗಳಿಗೆ ಹೆಚ್ಚುವರಿಯಾಗಿ ಇರುತ್ತವೆ. ಈ ನಿಯಮಗಳು ಹಾಗೂ ನಿಯಮಗಳು ಹಾಗೂ ನಿಬಂಧನೆಗಳ ನಡುವೆ ಯಾವುದೇ ಸಂಘರ್ಷ ಏರ್ಪಡುವ ಸಂದರ್ಭದಲ್ಲಿ ಈ ನಿಯಮಗಳೇ ಅನ್ವಯವಾಗುತ್ತವೆ. ಜಾಗತಿಕ ಭಾರತೀಯ ಕ್ರೆಡಿಟ್ ಕಾರ್ಡ್ ಮೇಲೆ ನಗದು ಹಣ ತೆಗೆದುಕೊಳ್ಳುವುದಕ್ಕೆ ಅನುಮತಿ ಇಲ್ಲ. ಜಾಗತಿಕ ಭಾರತೀಯ ಕ್ರೆಡಿಟ್ ಕಾರ್ಡ್ ಮೇಲೆ ಯಾವುದೇ ನಗದು ಹಣ ಮಿತಿ ಇಲ್ಲ. ಪೇಮೆಂಟ್ ಡ್ಯೂ ಡೇಟ್ ದಿನಾಂಕದಲ್ಲಿ ಕಾರ್ಡ್ ಸದಸ್ಯರು ಬಾಕಿ ಇರುವ ಒಟ್ಟೂ ಮೊತ್ತವನ್ನು ಐಸಿಐಸಿಐ ಬ್ಯಾಂಕ್‌ಗೆ ಮರುಪಾವತಿ ಮಾಡಬೇಕು. ಜಾಗತಿಕ ಭಾರತೀಯ ಕ್ರೆಡಿಟ್ ಕಾರ್ಡ್‌ಗೆ ಎಮ್‌ಎಡಿ ಪಾವತಿಯ ಸೌಲಭ್ಯ ಅನ್ವಯವಾಗುವುದಿಲ್ಲ. ಜಾಗತಿಕ ಭಾರತೀಯ ಕ್ರೆಡಿಟ್ ಕಾರ್ಡ್‌ಗಾಗಿ ಪಾವತಿಯನ್ನು ಇಸಿಎಸ್ ವಿಧಾನದ ಮೂಲಕವೇ ಮಾಡಬೇಕು.

## XXXIV. ಸತ್ಯಾಭಾಸ(ವರ್ಚುವಲ್) ಕ್ರೆಡಿಟ್ ಕಾರ್ಡ್ ನಿಯಮಗಳು

ಈ ನಿಯಮಗಳು ಹಾಗೂ ನಿಬಂಧನೆಗಳು ('' ನಿಯಮಗಳು ''), ಐಸಿಐಸಿಐ ಬ್ಯಾಂಕ್ ಒದಗಿಸುವ ವರ್ಚುವಲ್ ಕ್ರೆಡಿಟ್ ಕಾರ್ಡ್ ಸೌಲಭ್ಯಗಳ ನಿಯಮಗಳಿಗೆ ಹಾಗೂ ಅವುಗಳನ್ನು ನಿಯಂತ್ರಿಸಲು ಅನ್ವಯವಾಗುತ್ತವೆ. ಈ ನಿಯಮಗಳು ಹಾಗೂ ನಿಬಂಧನೆಗಳು, ಐಸಿಐಸಿಐ ಬ್ಯಾಂಕ್‌ನ ಕ್ರೆಡಿಟ್ ಕಾರ್ಡ್ ಸೌಲಭ್ಯಗಳನ್ನು ನಿಯಂತ್ರಿಸುವ ನಿಯಮಗಳು ಹಾಗೂ ನಿಬಂಧನೆಗಳು, ಐಸಿಐಸಿಐ ಬ್ಯಾಂಕ್‌ನ ಇಂಟರ್‌ನೆಂಟ್ ಬ್ಯಾಂಕಿಂಗ್ ಸೇವೆಗಳನ್ನು ನಿಯಂತ್ರಿಸುವ ನಿಯಮಗಳು ಹಾಗೂ ನಿಬಂಧನೆಗಳು, ಐಸಿಐಸಿಐ ಬ್ಯಾಂಕ್‌ನ ಉಳಿತಾಯ ಖಾತೆಗೆ ಇರುವ ನಿಯಮಗಳು ಹಾಗೂ ನಿಬಂಧನೆಗಳನ್ನು (''ಪ್ರಾಥಮಿಕ ನಿಯಮಗಳು '') ನ್ಯೂನಗೊಳಿಸದಂತೆ ಹಾಗೂ ಅದಕ್ಕೆ ಹೆಚ್ಚುವರಿಯಾಗಿ ಇವೆ. ಈ ನಿಯಮಗಳು

ಹಾಗೂ ಪ್ರಾಥಮಿಕ ನಿಯಮಗಳು ನಡುವೆ ಯಾವುದೇ ರೀತಿಯ ಅಸಮಂಜಸವಿದ್ದಲ್ಲಿ ಈ ನಿಯಮಗಳೇ ಅನ್ವಯವಾಗುತ್ತವೆ. ಎಲ್ಲಾ ದಪ್ಪಕ್ಷರದ ಪದಗಳು, ಆದರೆ ಇಲ್ಲಿ ವಿವರಿಸಲಾಗದವು, ಪ್ರಾಥಮಿಕ ನಿಯಮಗಳಲ್ಲಿ ಅವುಗಳಿಗೆ ನೀಡಲಾದ ಅರ್ಥವನ್ನೇ ಹೊಂದಿರುತ್ತವೆ.

''ಖಾತೆ/ಗಳು'' ಎಂದರೆ, ಐಸಿಐಸಿಐ ಬ್ಯಾಂಕ್‌ನ ಉಳಿತಾಯ ಖಾತೆಗಾಗಿ ಇರುವ ನಿಯಮಗಳು ಹಾಗೂ ನಿಬಂಧನೆಗಳು ಹಾಗೂ ಐಸಿಐಸಿಐ ಬ್ಯಾಂಕ್‌ನ ಇಂಟರ್‌ನೆಂಟ್ ಬ್ಯಾಂಕಿಂಗ್ ಸೇವೆಗಳನ್ನು ನಿಯಂತ್ರಿಸುವ ನಿಯಮಗಳು ಹಾಗೂ ನಿಬಂಧನೆಗಳಲ್ಲಿ ವಿವರಿಸಲಾಗಿರುವ ಖಾತೆ(ಗಳು)ಯ ಅರ್ಥ ಹಾಗೂ ಅದರೊಳಗೆ ಬರುವ ಅರ್ಥವನ್ನು ಸೂಚಿಸುತ್ತದೆ.

''ಸತ್ಯಾಭಾಸ(ವರ್ಚುವಲ್) ಕ್ರೆಡಿಟ್ ಕಾರ್ಡ್'' ಎಂದರೆ, ಪ್ರಾಥಮಿಕ ಕಾರ್ಡ್ ಸದಸ್ಯರಿಗೆ, ಆತನ/ಆಕೆಯ ಪ್ರಸ್ತುತದ ಕಾರ್ಡ್ ಖಾತೆಗೆ ನೀಡಿರುವ ಒಂದು ಹೆಚ್ಚುವರಿ ಕ್ರೆಡಿಟ್ ಕಾರ್ಡ್. ಈ ಹೆಚ್ಚುವರಿ ಕ್ರೆಡಿಟ್ ಕಾರ್ಡನ್ನು ಪ್ರಾಥಮಿಕ ಕಾರ್ಡ್ ಸದಸ್ಯರ ಖಾತೆಯ/ಗಳ ವಿಭಾಗದಲ್ಲಿ ಲಾಗ್ ಆದ ಒಂದು ವಿದ್ಯುನ್ಮಾನ ಚಿತ್ರ(ಎಲೆಕ್ಟ್ರಾನಿಕ್ ಇಮೇಜ್) ವಾಗಿ ಸೃಷ್ಟಿಸಿ ಶೇಖರಿಸಲಾಗುತ್ತದೆ. ವರ್ಚುವಲ್ ಕಾರ್ಡ್‌ಗೆ ಯಾವುದೇ ಭೌತಿಕ ಪ್ಲಾಸ್ಟಿಕ್ ಕಾರ್ಡ್ ನೀಡಲಾಗುವುದಿಲ್ಲ

''ಸತ್ಯಾಭಾಸ(ವರ್ಚುವಲ್) ಕ್ರೆಡಿಟ್ ಕಾರ್ಡ್ ಸದಸ್ಯ'' ಎಂದರೆ, ಪ್ರಾಥಮಿಕ ನಿಯಮಗಳು

ಹಾಗೂ ನಿಯಮಗ ಳಿಗೆ ಒಳಪಟ್ಟು, ಐಸಿಐಸಿಐ ಬ್ಯಾಂಕ್ ಹೆಚ್ಚುವರಿ ವರ್ವುಚಲ್ ಕ್ರೆಡಿಟ್ ಕಾರ್ಡ್ ನೀಡಿದ ಪ್ರಾಥಮಿಕ ಕಾರ್ಡ್ ಸದಸ್ಯರು.

ವರ್ಚುವಲ್ ಕ್ರೆಡಿಟ್ ಕಾರ್ಡ್ ಸೌಲಭ್ಯಕ್ಕೆ ಅರ್ಜಿಸಲ್ಲಿಸುವ ಹಾಗೂ ಒಪ್ಪಿಕೊಳ್ಳುವ ಮೂಲಕ, ಪ್ರಾಥಮಿಕ ಕಾರ್ಡ್ ಸದಸ್ಯರು, ಈ ಕೆಳಗೆ ನೀಡಲಾದ ನಿಯಮಗಳಿಗೆ ಸಮ್ಮತಿ ಸೂಚಿಸಿದ್ದಾರೆ ಹಾಗೂ ಅವುಗಳನ್ನು ಸ್ವೀಕರಿಸಿದ್ದಾರೆ ಎಂದು ಪರಿಗಣಿಸಲಾಗುತ್ತದೆ. ಪ್ರಾಥಮಿಕ ಕಾರ್ಡ್ ಸದಸ್ಯರು, ಐಸಿಐಸಿಐ ಬ್ಯಾಂಕ್‌ನ ವಿಭಾಗಕ್ಕೆ ಲಾಗ್ ಆಗುವ ಮೂಲಕ ಅಥವಾ ಐಸಿಐಸಿಐ ಬ್ಯಾಂಕ್ ಕಾಲಕಾಲಕ್ಕೆ ನಿರ್ದಿಷ್ಟಗೊಳಿಸುವ ಬೇರೆ ಇತರ ವಿಧಾನದ ಮೂಲಕ, ವರ್ವುಚಲ್ ಕ್ರೆಡಿಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸಬೇಕಾಗುತ್ತದೆ. ವರ್ಚುವಲ್ ಕ್ರೆಡಿಟ್ ಕಾರ್ಡ್, ಅವರ ಆಯ್ಕೆಯ ಕ್ರೆಡಿಟ್ ಮಿತಿಯೊಳಗೆ ಆನ್‌ಲೈನ್‌ನಲ್ಲಿ ವ್ಯವಹರಿಸಲು ಪ್ರಾಥಮಿಕ ಕಾರ್ಡ್ ಸದಸ್ಯರಿಗೆ ಅನುವು ಮಾಡಿಕೊಟ್ಟರೂ, ಯಾವುದೇ ಸಮಯದಲ್ಲೂ ಅವರ ಕ್ರೆಡಿಟ್ ಕಾರ್ಡ್ ಮೇಲಿರುವ ಮಿತಿಯನ್ನು ಮೀರಿ ವ್ಯವಹರಿಸಬಾರದು. ವರ್ಚುವಲ್ ಕ್ರೆಡಿಟ್ ಕಾರ್ಡ್ ಉಪಯೋಗಿಸಿ ಮಾಡಿದ ಖರೀದಿಯ ವಿವರಗಳು ಸ್ಟೇಟ್‌ಮೆಂಟ್‌ನಲ್ಲಿ ಪ್ರತಿಫಲಿತವಾಗುತ್ತವೆ ಹಾಗೂ ಪ್ರಾಥಮಿಕ ಕಾರ್ಡ್ ಸದಸ್ಯರಿಗೆ ಪ್ರತ್ಯೇಕ ಸ್ಟೇಟ್‌ಮೆಂಟ್ ಕಳುಹಿಸಲಾಗುವುದಿಲ್ಲ. ವರ್ಚುವಲ್ ಕ್ರೆಡಿಟ್ ಕಾರ್ಡ್ ಮೇಲೆ ಲಭ್ಯವಿರುವ ಲಿಂಕ್ ಮೇಲೆ ಕ್ಲಿಕ್ ಮಾಡುವ ಮೂಲಕ ಪ್ರಾಥಮಿಕ ಕಾರ್ಡ್ ಸದಸ್ಯರು, ವರ್ಚುವಲ್ ಕ್ರೆಡಿಟ್ ಕಾರ್ಡ್‌ನ ಪ್ರಸ್ತುತದ, ಹಾಗೂ ಹಿಂದಿನ ಸ್ಟೇಟ್‌ಮೆಂಟ್‌ಅನ್ನು/ಗಳನ್ನು ವೀಕ್ಷಿಸಬಹುದು. ಪ್ರಾಥಮಿಕ ಕಾರ್ಡ್ ಹಾಗೂ ವರ್ಚುವಲ್ ಕ್ರೆಡಿಟ್ ಕಾರ್ಡ್ ಉಪಯೋಗಿಸಿ ಮಾಡಲಾದ ವೆಚ್ಚಗಳನ್ನು ಪ್ರಾಥಮಿಕ ಕಾರ್ಡ್ ಸದಸ್ಯರು ಒಂದೇ ಪೇಮೆಂಟ್‌ನಲ್ಲಿ ಪಾವತಿಸಬೇಕು. ಕಾರ್ಡ್ ಸಂಖ್ಯೆ, ವರ್ಚುವಲ್ ಕ್ರೆಡಿಟ್ ಕಾರ್ಡ್‌ನ ತೀರುವಳಿ ದಿನಾಂಕ, ಸಿವಿವಿ ಇತ್ಯಾದಿ ವರ್ಚುವಲ್ ಕ್ರೆಡಿಟ್ ಕಾರ್ಡ್‌ನ ಮುಖ್ಯ ವಿವರಗಳು ಖಾತೆಯ ಲಾಗ್ ಇನ್ ಆದ ವಿಭಾಗದಲ್ಲಿ ಲಭ್ಯವಿರುತ್ತವೆ. ವರ್ಚುವಲ್ ಕ್ರೆಡಿಟ್ ಕಾರ್ಡ್‌ನ ಮಿತಿಯು ಪ್ರಾಥಮಿಕ ಕಾರ್ಡ್‌ಗೆ ಇರುವ

ಮಿತಿಯೇ ಆಗಿರುತ್ತದೆ. ಖಾತೆಯ ಲಾಗ್ ಇನ್ ಆದ ವಿಭಾಗದಲ್ಲಿ ಲಭ್ಯವಿರುವ ವರ್ಚುವಲ್ ಕ್ರೆಡಿಟ್ ಕಾರ್ಡ್ ವಿಭಾಗದಡಿ ಇರುವ ತತ್ಸಂಬಂಧಿತ ಆಯ್ಕೆಗಳನ್ನು ಕ್ಲಿಕ್ ಮಾಡುವ ಮೂಲಕ ವರ್ಚುವಲ್ ಕ್ರೆಡಿಟ್ ಕಾರ್ಡ್‌ಅನ್ನು ಹಾಟ್ ಲಿಸ್ಟ್/ಬ್ಲಾಕ್ ಮಾಡಬಹುದು. ವರ್ಚುವಲ್ ಕ್ರೆಡಿಟ್ ಕಾರ್ಡ್ ಸದಸ್ಯರು ಖಾತೆಯನ್ನು/ಗಳನ್ನು ಮುಕ್ತಾಯಗೊಳಿಸಿದರೂ, ವರ್ಚುವಲ್ ಕ್ರೆಡಿಟ್ ಕಾರ್ಡ್ ಸೌಲಭ್ಯವು ಲಭ್ಯವಿದ್ದೇ ಇರುತ್ತದೆ.

ವರ್ಚುವಲ್ ಕ್ರೆಡಿಟ್ ಕಾರ್ಡ್‌ನ ಬಳಕೆ ಆನ್‌ಲೈನ್ ವ್ಯವಹಾರಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಆನ್‌ಲೈನ್ ವ್ಯವಹಾರಗಳ ಸಂದರ್ಭದಲ್ಲಿ, ವರ್ಚುವಲ್ ಕ್ರೆಡಿಟ್ ಕಾರ್ಡ್‌ಅನ್ನು ಬಳಸಿ ಮಾಡಲಾದ ಖರೀದಿಯ ಸಮಯದಲ್ಲಿ ಚಾರ್ಜ್ ಸ್ಲಿಪ್‌ಗಳಿಗೆ ತಾವು ಸಹಿ ಹಾಕಿರುವುದಿಲ್ಲ ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಪ್ರಾಥಮಿಕ ಕಾರ್ಡ್ ಸದಸ್ಯರು. ಅದೇ ಪ್ರಕಾರ, ಇಂತಹ ಖರೀದಿಯ ಅಧಿಕೃತತೆ ಅಥವಾ ಮಾನ್ಯತೆಗೆ ಕುರಿತಾದ ಯಾವುದೇ ವ್ಯಾಜ್ಯದ ಸಂದರ್ಭದಲ್ಲೂ, ಬೇರಾವುದೇ ಕಾರಣಕ್ಕಾಗಿಯಾದರೂ, ಪ್ರಾಥಮಿಕ ಕಾರ್ಡ್ ಸದಸ್ಯರು ಬಾಕಿ ಇರುವ ಎಲ್ಲಾ ಮೊತ್ತವನ್ನೂ ಐಸಿಐಸಿಐ ಬ್ಯಾಂಕ್‌ಗೆ ಪಾವತಿಸುವರು ಹಾಗೂ ಯಾವುದೇ ಸಂದರ್ಭದಲ್ಲೂ ಐಸಿಐಸಿಐ ಬ್ಯಾಂಕನ್ನು ಹೊಣೆಗಾರನನ್ನಾಗಿ/ಜವಾಬ್ದಾರನನ್ನಾಗಿ ಮಾಡುವುದಿಲ್ಲ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ವರ್ಚುವಲ್ ಕ್ರೆಡಿಟ್ ಕಾರ್ಡ್ ಮೂಲಕ ಮಾಡಲಾದ ಪಾವತಿಯನ್ನು ಸ್ವೀಕರಿಸಲು ಯಾವುದೇ ವ್ಯಾಪಾರಿ ನಿರಾಕರಿಸಿದಲ್ಲಿ, ಅದಕ್ಕೆ ಐಸಿಐಸಿಐ ಬ್ಯಾಂಕ್ ಜವಾಬ್ದಾರಿ ಹೊರುವುದಿಲ್ಲ. ವರ್ಚುವಲ್ ಕ್ರೆಡಿಟ್ ಕಾರ್ಡ್‌ಅನ್ನು ಒದಗಿಸುವ ಉದ್ದೇಶವು, ವರ್ಚುವಲ್ ಕ್ರೆಡಿಟ್ ಕಾರ್ಡ್ ಸದಸ್ಯರಿಗೆ ಕೇವಲ ಆನ್‌ಲೈನ್ ಪಾವತಿಗಳನ್ನು ಮಾಡುವ ಸೌಲಭ್ಯವನ್ನು ಕಲ್ಪಿಸುವುದಕ್ಕಾಗಿ ಮಾತ್ರ ಇರುತ್ತದೆಯೇ ಹೊರತು ವರ್ಚುವಲ್ ಕ್ರೆಡಿಟ್ ಕಾರ್ಡ್ ಸದಸ್ಯರು ಕೈಗೊಂಡ ವ್ಯವಹಾರದ ಗುಣಮಟ್ಟ, ಸುರಕ್ಷತೆ ಅಥವಾ ನ್ಯಾಯಪರತೆಯನ್ನು ಖಾತರಿಪಡಿಸುವುದಿಲ್ಲ.

ವರ್ಚುವಲ್ ಕ್ರೆಡಿಟ್ ಕಾರ್ಡ್‌ನ ಬಳಕೆಯು, ಈ ನಿಯಮಗಳು ಹಾಗೂ ನಿಬಂಧನೆಗಳ ಅಂಗೀಕಾರವನ್ನು ಸೂಚಿಸುತ್ತದೆ. ವರ್ಚುವಲ್ ಕ್ರೆಡಿಟ್ ಕಾರ್ಡ್ ಸದಸ್ಯರು, ಈ ನಿಯಮಗಳಿಗೆ/ನಿಯಮಗಳಿಂದ/ನಿಯಮಗಳಡಿ ಪಾವತಿ ಮಾಡಲು ಬದ್ಧರಾಗಿದ್ದು/ಜವಾಬ್ದಾರರಾಗಿದ್ದು ವರ್ಚುವಲ್ ಕ್ರೆಡಿಟ್ ಕಾರ್ಡ್‌ನ ಬಳಕೆಯಿಂದಾಗಿ ಏರ್ಪಟ್ಟ ಎಲ್ಲಾ ಶುಲ್ಕಗಳ/ಮೊತ್ತದ ಪಾವತಿಯನ್ನು ಆತ/ಆಕೆ ಖಾತರಿಪಡಿಸಬೇಕು. ವಿಶೇಷ ಸೌಲಭ್ಯವಾಗಿರುವ ವರ್ಚುವಲ್ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು, ಐಸಿಐಸಿಐ ಬ್ಯಾಂಕ್ ಕಾಲಕಾಲಕ್ಕೆ ನಿಗದಿಪಡಿಸುವ ಶುಲ್ಕ/ದರದಲ್ಲಿ ಲಭ್ಯವಾಗುತ್ತದೆ.

XXXV. ತಕ್ಷಣದ ಕ್ರೆಡಿಟ್ ಕಾರ್ಡ್ ನಿಯಮಗಳು

1. ಈ ನಿಯಮಗಳು ಹಾಗೂ ನಿಬಂಧನೆಗಳು (''ನಿಯಮಗಳು ''), ಐಸಿಐಸಿಐ ಬ್ಯಾಂಕ್ ಒದಗಿಸುವ ತಕ್ಷಣದ ಕ್ರೆಡಿಟ್ ಕಾರ್ಡ್‌ಗೆ ಅನ್ವಯವಾಗುತ್ತವೆ ಹಾಗೂ ಅದನ್ನು ನಿಯಂತ್ರಿಸುತ್ತವೆ ಹಾಗೂ ಐಸಿಐಸಿಐ ಬ್ಯಾಂಕ್‌ನ ಕ್ರೆಡಿಟ್ ಕಾರ್ಡ್ ಸೌಲಭ್ಯಗಳನ್ನು ನಿಯಂತ್ರಿಸುವ ನಿಯಮಗಳು ಹಾಗೂ ನಿಬಂಧನೆಗಳು ಹಾಗೂ www.icicibank.com. ದಲ್ಲಿ ಲಭ್ಯವಾಗಿರುವಂತೆ, ಐಸಿಐಸಿಐ ಬ್ಯಾಂಕ್‌ನ ನಿಶ್ಚಿತ ಠೇವಣಿ(''ಪ್ರಾಥಮಿಕ ನಿಯಮಗಳು ಹಾಗೂ ನಿಬಂಧನೆಗಳು'')ಯನ್ನು ನಿಯಂತ್ರಿಸುವ ನಿಯಮಗಳು ಹಾಗೂ ನಿಬಂಧನೆಗಳಿಗೆ ಸೇರ್ಪಡೆಯಾಗಿ ಹಾಗೂ ಅವುಗಳಿಗೆ ಚ್ಯುತಿಬಾರದಂತೆ ಇರುತ್ತವೆ. ಈ ನಿಯಮಗಳು ಹಾಗೂ ಪ್ರಾಥಮಿಕ ನಿಯಮಗಳ ನಡುವೆ ಯಾವುದೇ ರೀತಿಯ ಅಸಮಂಜಸವಿದ್ದಲ್ಲಿ ಈ ನಿಯಮಗಳೇ ಅನ್ವಯವಾಗುತ್ತವೆ. ಎಲ್ಲಾ ದಪ್ಪಕ್ಷರದ ಪದಗಳು, ಆದರೆ ಇಲ್ಲಿ ವಿವರಿಸಲಾಗದವು, ಪ್ರಾಥಮಿಕ ನಿಯಮಗಳಲ್ಲಿ ಅವುಗಳಿಗೆ ನೀಡಲಾದ ಅರ್ಥವನ್ನೇ ಹೊಂದಿರುತ್ತವೆ.

2. ''ಕಾರ್ಡ್‌ದಾರರು''ಎಂದರೆ, ಐಸಿಐಸಿಐ ಬ್ಯಾಂಕ್‌ನಲ್ಲಿ ಸ್ಥಿರ ಠೇವಣಿ ಹೊಂದಿದ ಹಾಗೂ ಐಸಿಐಸಿಐ ಬ್ಯಾಂಕ್‌ನ ತಕ್ಷಣದ ಕ್ರೆಡಿಟ್ ಕಾರ್ಡ್‌ಗೆ ಅರ್ಜಿಸಲ್ಲಿಸಿದ ಹಾಗೂ ಪ್ರಾಥಮಿಕ ನಿಯಮಗಳು ಹಾಗೂ ನಿಬಂಧನೆಗಳು ಹಾಗೂ ಇಲ್ಲಿ ನಿರ್ದಿಷ್ಟಗೊಳಿಸಲಾಗಿರುವ ನಿಯಮಗಳಿಗೆ ಒಳಪಟ್ಟು ತಕ್ಷಣದ ಕ್ರೆಡಿಟ್ ಕಾರ್ಡ್‌ಅನ್ನು ನೀಡಲಾದ ವ್ಯಕ್ತಿ. ''ತಕ್ಷಣದ ಕ್ರೆಡಿಟ್ ಕಾರ್ಡ್'' ಎಂದರೆ, ಐಸಿಐಸಿಐ ಬ್ಯಾಂಕ್‌ನಲ್ಲಿ ಕಾರ್ಡ್‌ದಾರರು ಇರಿಸಿರುವ ಸ್ಥಿರ ಠೇವಣಿಯ ಮೇಲೆ ಕಾರ್ಡ್‌ದಾರರಿಗೆ ಐಸಿಐಸಿಐ ಬ್ಯಾಂಕ್ ನೀಡುವ ಐಸಿಐಸಿಐ ಬ್ಯಾಂಕ್ ತಕ್ಷಣದ ಕ್ರೆಡಿಟ್ ಕಾರ್ಡ್ ಎಂದರ್ಥ.

3. ತಕ್ಷಣದ ಕ್ರೆಡಿಟ್ ಕಾರ್ಡ್‌ಅನ್ನು ಪಡೆದುಕೊಳ್ಳುವುದಕ್ಕೆ ಕಾರ್ಡ್‌ದಾರರು ಐಸಿಐಸಿಐ ಬ್ಯಾಂಕ್‌ನಲ್ಲಿ ಕನಿಷ್ಟ ರೂ.10,000ದ ಸ್ಥಿರ ಠೇವಣಿ ನಿರ್ವಹಿಸಿರಬೇಕು/ಇರಿಸಿರಬೇಕು. ತಕ್ಷಣದ ಕ್ರೆಡಿಟ್ ಕಾರ್ಡ್ ಮೇಲಿನ ಸಾಲ ಮಿತಿಯು, ಕನಿಷ್ಟ ಸಾಲ ಮಿತಿ ರೂ.5000 ಹಾಗೂ ಗರಿಷ್ಟ ರೂ. 5 ಲಕ್ಷಕ್ಕೆ ಒಳಪಟ್ಟು ಸ್ಥಿರ ಠೇವಣಿ ಮೊತ್ತದ ಶೇಕಡ ಎಂಭತ್ತೈದು(85%)ಆಗಿರುತ್ತದೆ. ಮೇಲೆ ತಿಳಿಸಲಾದ ಸಾಲಮಿತಿಯು ಕಾಲಕಾಲಕ್ಕೆ ಐಸಿಐಸಿಐ ಬ್ಯಾಂಕ್‌ನ ಸ್ವವಿವೇಚನೆಯಲ್ಲಿ ಮಾಡಲಾಗುವ ಬದಲಾವಣೆಗಳಿಗೆ ಒಳಪಟ್ಟಿರುತ್ತದೆ ಹಾಗೂ ಅದನ್ನು ಐಸಿಐಸಿಐ ಬ್ಯಾಂಕ್‌ಗೆ ಸರಿ ಎಂದು ತೋರಿದ ವಿಧಾನ ಹಾಗೂ ರೀತಿಯಲ್ಲಿ ಕಾರ್ಡ್‌ದಾರರಿಗೆ ತಿಳಿಸಲಾಗುತ್ತದೆ.

4. ಕಾರ್ಡ್‌ದಾರರು, ಕಾಲಕಾಲಕ್ಕೆ ಐಸಿಐಸಿಐ ಬ್ಯಾಂಕ್ ನಿರ್ದಿಷ್ಟಗೊಳಿಸುವ ವಿಧಾನದಲ್ಲಿ ಹಾಗೂ ತತ್ಸಂಬಂಧಿತ ದಾಖಲೆಗಳನ್ನು ಸಲ್ಲಿಸಿ ಸ್ಥಿರ ಠೇವಣಿಗಳನ್ನು ಇರಿಸಿರಬೇಕು. ಕಾರ್ಡ್‌ದಾರರು, ಸ್ಥಿರ ಠೇವಣಿಗಳನ್ನು ಐಸಿಐಸಿಐ ಬ್ಯಾಂಕ್ ಶಾಖೆಗಳಲ್ಲಿ ಅಥವಾ ಐಸಿಐಸಿಐ ಬ್ಯಾಂಕ್ ತನ್ನ ಸ್ವವಿವೇಚನೆಯಲ್ಲಿ ಕಾಲಕಾಲಕ್ಕೆ ನಿರ್ಧರಿಸುವ ಹಾಗೂ ತಿಳಿಸುವ ಇತರ ಪರ್ಯಾಯ ವಾಹಿನಿಯಲ್ಲಿ ಮಾತ್ರ ಇರಿಸಬೇಕು. ಈ ರೀತಿ ತೆರೆಯಲಾದ ಸ್ಥಿರ ಠೇವಣಿಗಳು ಸ್ವಯಂ ನವೀಕರಣ ವಿಧಾನದಲ್ಲೇ ಇರಬೇಕು. ಕಾರ್ಡ್‌ದಾರರು/ಐಸಿಐಸಿಐ ಬ್ಯಾಂಕ್ ಕಾರ್ಡನ್ನು ರದ್ದುಗೊಳಿಸಿದ ಸಂದರ್ಭದಲ್ಲಿ, ತಕ್ಷಣದ ಕ್ರೆಡಿಟ್ ಕಾರ್ಡ್‌ಗೆ ಸಂಪರ್ಕಗೊಂಡ ಸ್ಥಿರ ಠೇವಣಿಯು, ಕಾರ್ಡ್‌ದಾರರು ಸ್ಥಿರ ಠೇವಣಿ ಇರಿಸುವ ಸಮಯದಲ್ಲಿಮಾಡಿದ ಸೂಚನೆಗಳಿಗೆ ಅನುಸಾರವಾಗಿ ಮುಂದುವರಿಯುತ್ತದೆ.

5. ತಕ್ಷಣದ ಕ್ರೆಡಿಟ್ ಕಾರ್ಡ್ ನೀಡಿದ ನಂತರ ಐಸಿಐಸಿಐ ಬ್ಯಾಂಕ್, ಸಂದರ್ಭಕ್ಕೆ ತಕ್ಕಂತೆ ತಕ್ಷಣದ ಕ್ರೆಡಿಟ್ ಕಾರ್ಡ್‌ನ ರದ್ದತಿ ಅಥವಾ ಸ್ಥಿರ ಠೇವಣಿಯ ಅವಧಿ ತೀರುವಿಕೆಯವರೆಗೆ, ಕಾರ್ಡ್‌ದಾರರು ಗಳಿಸಿದ ಬಡ್ಡಿಮೊತ್ತವೂ ಒಳಗೊಂಡಂತೆ, ಕಾರ್ಡ್‌ದಾರರು ಮಾಡಿರುವ ಸ್ಥಿರ ಠೇವಣಿಯ ಇಡೀ ಮೊತ್ತದ ಮೇಲೆ ಗ್ರಹಣಾಧಿಕಾರ ಹೊಂದಿರುತ್ತದೆ.

6. ಅರ್ಜಿದಾರರು ಐಸಿಐಸಿಐ ಬ್ಯಾಂಕ್‌ನಲ್ಲಿ ಈಗಾಗಲೇ ಸ್ಥಿರ ಠೇವಣಿಯನ್ನು ಹೊಂದಿರುವಂತಹ ಸಂದರ್ಭದಲ್ಲಿ ಆ ಸ್ಥಿರ ಠೇವಣಿಯನ್ನು ಕಾರ್ಡ್‌ದಾರರ ತಕ್ಷಣದ ಕ್ರೆಡಿಟ್ ಕಾರ್ಡ್ ಖಾತೆಗೆ ಸಂಪರ್ಕಗೊಳಿಸಲಾಗುತ್ತದೆ ಹಾಗೂ ತಕ್ಷಣದಿಂದಲೇ ಜಾರಿಗೆ ಬರುವಂತೆ, ಸ್ಥಿರ ಠೇವಣಿಯನ್ನು ಸ್ವಯಂ ನವೀಕರಣ ವಿಧಾನಕ್ಕೆ ಪರಿವರ್ತಿಸಲಾಗುತ್ತದೆ. ಸ್ಥಿರ ಠೇವಣಿಯ ಸ್ವಯಂ ನವೀಕರಣದ ಸಮಯದಲ್ಲಿ ಜಾರಿಯಲ್ಲಿರುವ ಬಡ್ಡಿದರವು ಮೇಲೆ ತಿಳಿಸಿದ ಸ್ಥಿರ ಠೇವಣಿಗೆ ಅನ್ವಯವಾಗುತ್ತದೆ.

7. ತಕ್ಷಣದ ಕ್ರೆಡಿಟ್ ಕಾರ್ಡ್‌ಗೆ ಸಂಪರ್ಕಗೊಂಡ ಸ್ಥಿರ ಠೇವಣಿಯಿಂದ ಕಾರ್ಡ್‌ದಾರರು ಯಾವುದೇ ಭಾಗಶಃ ಹಿಂಪಡೆತ ಮಾಡಲಾಗುವುದಿಲ್ಲ.

8. ಹಿಂದು ಅವಿಭಜಿತ ಕುಟುಂಬಗಳು, ಪಾಲುದಾರಿಕೆ ಸಂಸ್ಥೆಗಳು, ಅಪ್ರಾಪ್ತ ವಯಸ್ಕರು ಅಥವಾ ಅರ್ಜಿದಾರ/ಅರ್ಜಿದಾರರುಗಳ ಜೊತೆ ಜಂಟಿಯಾಗಿ ತೆರೆದ ಸ್ಥಿರ ಠೇವಣಿಗಳು ತಕ್ಷಣದ ಕ್ರೆಡಿಟ್ ಕಾರ್ಡ್‌ಗೆ ಅರ್ಹವಾಗುವುದಿಲ್ಲ. ಒಂಟಿ ವ್ಯಕ್ತಿಯ ಹೆಸರಿನಲ್ಲಿ ಮಾಡಲಾಗಿರುವ ಸ್ಥಿರ ಠೇವಣಿಗಳಿಗೆ ಮಾತ್ರ ತಕ್ಷಣದ ಕ್ರೆಡಿಟ್ ಕಾರ್ಡ್ ನೀಡಲಾಗುತ್ತದೆ.

9. ಸ್ಥಿರ ಠೇವಣಿ ಸೌಲಭ್ಯಕ್ಕೆ ನಾಮನಿರ್ದೇಶನ ಸೌಲಭ್ಯಗಳು ಲಭ್ಯವಿವೆ

10. ಸ್ಥಿರ ಠೇವಣಿ ಅಥವಾ ತಕ್ಷಣದ ಕ್ರೆಡಿಟ್ ಕಾರ್ಡ್ ಸಮಾಪ್ತಗೊಂಡ/ಹಿಂಪಡೆದ/ರದ್ದುಗೊಂಡ ಸಂದರ್ಭದಲ್ಲಿ ಅಥವಾ ವಾಯಿದಾದಿ ದಿನಾಂಕದಿಂದ 60 ದಿನಗಳ ಒಳಗೆ ಕಾರ್ಡ್‌ದಾರರು ತಕ್ಷಣದ ಕ್ರೆಡಿಟ್ ಕಾರ್ಡ್ ಮೇಲೆ ಬಾಕಿ ಇರುವ ಮೊತ್ತವನ್ನು ಪಾವತಿಸಲು ವಿಫಲರಾದಲ್ಲಿ, ಅಥವಾ ತಕ್ಷಣದ ಕ್ರೆಡಿಟ್ ಕಾರ್ಡ್ ಮೇಲೆ ಬಾಕಿಯಿರುವ ಮೊತ್ತವು, ಶುಲ್ಕಗಳು, ಅಥವಾ ನಿಯಮಗಳ ಪ್ರಕಾರ ಐಸಿಐಸಿಐ ವಿಧಿಸುವ ಯಾವುದೇ ಇತರ ಮೊತ್ತ ಒಳಗೊಂಡಂತೆ, ಆ ಕಾಲಕ್ಕೆ ಯಾವುದೇ ಸಮಯದಲ್ಲಾದರೂ ಸ್ಥಿರ ಠೇವಣಿ ಮೊತ್ತದ 95%ಗಿಂತ ಹೆಚ್ಚಿನ ಮೊತ್ತದವರೆಗೆ ಶೇಖರಣೆಯಾದರೆ, ಸಂಚಿತಗೊಂಡ ಬಡ್ಡಿಮೊತ್ತ ಒಳಗೊಂಡಂತೆ ಇಡೀ ಸ್ಥಿರ ಠೇವಣಿ ಮೊತ್ತವನ್ನು ದ್ರವೀಕರಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಹೊಂದಿದ್ದು ಅಂತಹ ಮೊತ್ತವು, ತಕ್ಷಣದ ಕ್ರೆಡಿಟ್ ಕಾರ್ಡ್ ಅಡಿ ಐಸಿಐಸಿಐ ಬ್ಯಾಂಕ್‌ಗೆ ಬಾಕಿ ಪಾವತಿಸಬೇಕಾಗಿರುವ ಮೊತ್ತಕ್ಕೆ ಸರಿಪಡಿಸಲಾಗುತ್ತದೆ. ಮೇಲೆ ತಿಳಿಸಲಾದ ಕಡಿತಗಳ ನಂತರ ಯಾವುದೇ ಮೊತ್ತ ಬಾಕಿ ಉಳಿದಲ್ಲಿ, ಅದನ್ನು ಕಾರ್ಡ್‌ದಾರರಿಗೆ ಹಿಂದಿರುಗಿಸಲಾಗುತ್ತದೆ.

11. ಇನ್‌ಸ್ಟಾಸೇವ್ ಸ್ಥಿರ ಠೇವಣಿ( InstaSave Fixed Deposits ಗಳನ್ನು ನಿಯಂತ್ರಿಸುವ ನಿಯಮಗಳು ಹಾಗೂ ನಿಬಂಧನೆಗಳ ಪ್ರಕಾರ, ಒಂದು ಬಾರಿಯ ಪಾಸ್‌ವರ್ಡ್(OTP) ಆಧಾರಿತ ಇ-ಕೆವೈಸಿ(ವಿದ್ಯುನ್ಮಾನ-ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ) ಪರಿಶೀಲನೆಯ ಮೂಲಕ ತೆರೆಯಲಾದ ಇನ್‌ಸ್ಟಾಸೇವ್ ಸ್ಥಿರ ಠೇವಣಿ ಇರುವ ಕಾರ್ಡ್‌ದಾರರು, ಯಾವುದೇ ಕಾರಣಕ್ಕಾಗಿಯಾದರೂ, ಅಂತಹ ಇನ್‌ಸ್ಟಾಸೇವ್ ಸ್ಥಿರ ಠೇವಣಿ ಹಾಗೂ ಉಳಿತಾಯ ಖಾತೆಗಳನ್ನು ತೆರೆದ 1(ಒಂದು) ವರ್ಷದೊಳಗೆ ಭೌತಿಕ ಕೆವೈಸಿ ಪರಿಶೀಲನೆ ಅಥವಾ ಗ್ರಾಹಕ ಯಥಾಕ್ಷಮತೆ ಪೂರ್ಣಗೊಳಿಸದಿದ್ದಲ್ಲಿ, ತತ್ಸಂಬಂಧಿತ ಉಳಿತಾಯ ಖಾತೆಗಳು ಹಾಗೂ ಇನ್‌ಸ್ಟಾಸೇವ್ ಸ್ಥಿರ ಠೇವಣಿ ಖಾತೆಯನ್ನು ಮುಚ್ಚಲಾಗುತ್ತದೆ. ಮೇಲಿನ ಸಂದರ್ಭದಲ್ಲಿ, ಇನ್‌ಸ್ಟಾಸೇವ್ ಸ್ಥಿರ ಠೇವಣಿಯ ವಿರುದ್ಧ ಕಾರ್ಡ್‌ದಾರರು ಪಡೆದುಕೊಂಡ ತಕ್ಷಣದ ಕ್ರೆಡಿಟ್ ಕಾರ್ಡ್‌ಅನ್ನೂ ಕೂಡ ಮುಕ್ತಾಯಗೊಳಿಸಲಾಗುತ್ತದೆ ಹಾಗೂ ಅಂತಹ ಇನ್‌ಸ್ಟಾಸೇವ್ ಸ್ಥಿರ ಠೇವಣಿಗೆ ಹೊಂದಿಸಲಾದ ಗ್ರಹಣಾಧಿಕಾರವನ್ನೂ ತೆಗೆದುಹಾಕಲಾಗುತ್ತದೆ. ಹೀಗಿದ್ದಾಗ್ಯೂ, ಇಲ್ಲಿ ತಿಳಿಸಿರುವ ಅಥವಾ ಬೇರೆ ಯಾವುದೇ ಇತರ ದಾಖಲೆಯಲ್ಲಿ ತಿಳಿಸಿರುವಂತೆ, ಅಂತಹ ಸಂದರ್ಭದಲ್ಲಿ ಸಂಚಿತ ಬಡ್ಡಿ ಮೊತ್ತವೂ ಒಳಗೊಂಡಂತೆ ಇಡೀ ಸ್ಥಿರ ಠೇವಣಿ ಮೊತ್ತವನ್ನು ದ್ರವೀಕರಿಸಲಾಗುತ್ತದೆ ಹಾಗೂ ತಕ್ಷಣದ ಕ್ರೆಡಿಟ್ ಕಾರ್ಡ್ ವಿಷಯದಲ್ಲಿ ಐಸಿಐಸಿಐ ಬ್ಯಾಂಕ್‌ಗೆ ಬಾಕಿ ಕೊಡಬೇಕಾಗಿರುವ ಮೊತ್ತಕ್ಕೆ

ಅದನ್ನು ಸರಿಪಡಿಸಲಾಗುತ್ತದೆ. ಸರಿಪಡಿಸುವಿಕೆಯ ನಂತರ ಯಾವುದೇ ಮೊತ್ತ ಬಾಕಿ ಉಳಿದಲ್ಲಿ, ಅದನ್ನು ಕಾರ್ಡ್‌ದಾರರಿಗೆ ಹಿಂದಿರುಗಿಸಲಾಗುತ್ತದೆ.

12. ಸ್ಥಿರ ಠೇವಣಿಯ ಮೇಲೆ ಗ್ರಹಣಾಧಿಕಾರವನ್ನು ಗುರುತಿಸಿದ ಬಳಿಕವಷ್ಟೇ ತಕ್ಷಣದ ಕ್ರೆಡಿಟ್ ಕಾರ್ಡ್‌ಅನ್ನು ಕ್ರಿಯಾಶೀಲಗೊಳಿಸಲಾಗುತ್ತದೆ.

13. ಯಾವುದೇ ಸಮಯದಲ್ಲಾದರೂ, ಕಾರ್ಡ್‌ದಾರರಿಗೆ ಕೇವಲ ಒಂದೇ ಒಂದು ತಕ್ಷಣದ ಕ್ರೆಡಿಟ್ ಕಾರ್ಡ್ ನೀಡಲಾಗುತ್ತದೆ.

ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ನೋಂದಾಯಿತ ಕಚೇರಿ: ಐಸಿಐಸಿಐ ಬ್ಯಾಂಕ್ ಟಾವರ್ಸ್, ಚಕ್ಲಿ ಸರ್ಕಲ್ ಹತ್ತಿರ, ಹಳೆಯ ಪಾದ್ರಾ ರಸ್ತೆ,ವಡೋದರ-390007

ಕಾರ್ಪೊರೇಟ್ ಕಚೇರಿ: ಐಸಿಐಸಿಐ ಬ್ಯಾಂಕ್ ಟಾವರ್ಸ್, ಬಾಂದ್ರಾಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ(ಪೂರ್ವ), ಮುಂಬೈ-400051

ಘೋಷಣೆ :

''ಐಸಿಐಸಿಐ ಬ್ಯಾಂಕ್, ತನ್ನ ಸ್ವವಿವೇಚನೆಯಲ್ಲಿ, ತನ್ನ ಉತ್ಪನ್ನಗಳು/ಸೇವೆಗಳ ವಿಷಯದಲ್ಲಿ ಹಾಗೂ ಅಗತ್ಯಕ್ಕೆ ತಕ್ಕಂತೆ ಅಥವಾ ಅಗತ್ಯವಿರುವಂತೆ ಅಂತಹ ನಿಬಂಧನೆಗಳ ಮೇಲೆ, ಬಾಹ್ಯ ಸೇವಾ ಸರಬರಾಜುದಾರ/ರು ಅಥವಾ ಏಜೆಂಟ್/ಏಜೆಂಟರುಗಳ ಸೇವೆಯನ್ನು ಬಳಸಿಕೊಳ್ಳಬಹುದಾಗಿದೆ.''

''ಐಸಿಐಸಿಐ ಬ್ಯಾಂಕ್'' ಹಾಗೂ ''I-man ''ಲೋಗೋಗಳು ಐಸಿಐಸಿಐ ಬ್ಯಾಂಕ್ ಲಿ.,ದ ವ್ಯಾಪಾರಚಿಹ್ನೆ ಹಾಗೂ ಸ್ವತ್ತಾಗಿದ್ದು ಇಲ್ಲಿ ಪ್ರದರ್ಶಿಸಲಾಗಿರುವ ಯಾವುದೇ ಭೌದ್ಧಿಕ ಸಂಪತ್ತು, ಅಥವಾ ಯಾವುದೇ ಇತರ ವಿಷಯದ (ಕಂಟೆಂಟ್‌ನ )ದುರ್ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.